
prajavani.net prajavani | ಸೋಮವಾರ, ಫೆಬ್ರುವರಿ 9, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 40 | ಪುಟ 12 | www.prajavani.net

ರಾಹುಲ್ ಅರ್ಧಶತಕ



ಮುಂಬೈನಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾನುವಾರ ಕರ್ನಾಟಕ ತಂಡದ ಕೆ.ಎಲ್. ರಾಹುಲ್ ಅವರು ಮುಂಬೈ ತಂಡದ ಎದುರು ಅರ್ಧಶತಕ ಗಳಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಏರುತ್ತಲೇ ಇದೆ ಯೋಜನಾ ವೆಚ್ಚ 4 | ಮತ್ತೊಂದು ಅಸ್ಥಿಪಂಜರ ಪತ್ತೆ 7

₹10,194 ಕೋಟಿಗೆ ಲೆಕ್ಕವಿಲ್ಲ

ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆಯ ವಿವರಣೆ ಒಪ್ಪಲ್ಲ: ಸಿಎಜಿ

• ಜಯಸಿಂಹ ಆರ್.

ಮುಖ್ಯಾಂಶಗಳು

- ಅರ್ಹರಿಗೆ ತಲುಪದ ಹಣ
- ಶೇ 95ರಷ್ಟು ಮಂದಿಯ ವಿವರಗಳು ಲಭ್ಯವಿಲ್ಲ
- ನೈಜತೆಯ ಬಗ್ಗೆಯೇ ಅನುಮಾನ

ಬೆಂಗಳೂರು: ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ ಅಡಿ ಕೇಂದ್ರ ಸರ್ಕಾರವು 2015ರಿಂದ 2024ರ ಮಧ್ಯೆ ₹10,194 ಕೋಟಿ ವೆಚ್ಚ ಮಾಡಿದೆ. ಆದರೆ ಈ ಹಣ ಅರ್ಹ ಫಲಾನುಭವಿಗಳಿಗೇ ತಲುಪಿದೆ ಎಂಬುದನ್ನು ಪುಷ್ಟೀಕರಿಸುವ ದಾಖಲೆ ಕೇಂದ್ರ ಸರ್ಕಾರದ ಬಳಿ ಇಲ್ಲ. ಇರುವ ದಾಖಲೆ ಸರಿಯಾಗಿಲ್ಲ ಎಂದು ಮಹಾಲೇಖಪಾಲರು (ಸಿಎಜಿ) ಆಕ್ಷೇಪ ಎತ್ತಿದ್ದಾರೆ.

ಯೋಜನೆಯ ಫಲಾನುಭವಿಗಳಲ್ಲಿ ಶೇ 95ರಷ್ಟು ಮಂದಿಯ ವಿವರಗಳು ಲಭ್ಯವಿಲ್ಲ, ಯೋಜನಾ ವೆಚ್ಚದ ಅಷ್ಟೇ ಪ್ರಮಾಣದ ಮೊತ್ತ ಸರಿಯಾಗಿ ಬಳಕೆಯಾಗಿರುವ ಬಗ್ಗೆ ಅನುಮಾನವಿದೆ ಎಂದು ಸಿಎಜಿ ಬೊಟ್ಟು ಮಾಡಿದೆ.



ಈಚೆಗೆ ಸಂಸತ್ತಿನಲ್ಲಿ ಮಂಡಿಸಲಾದ 'ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ– ಲೆಕ್ಕ ಪರಿಶೋಧನೆ' ವರದಿಯಲ್ಲಿ ಈ ಮಾಹಿತಿ ಇದೆ.

ಯುವಜನರಲ್ಲಿ ಉದ್ಯೋಗಾರ್ಹತೆ ಹೆಚ್ಚಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು 2015ರಲ್ಲಿ ಕೌಶಲ್ಯಾಭಿವೃದ್ಧಿ ಅಭಿಯಾನ ಆರಂಭಿಸಿತ್ತು. ಇದರ ಅನುಷ್ಠಾನಕ್ಕೆ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮವನ್ನು (ಎನ್‌ಎಸ್‌ಡಿಸಿ) ಸ್ಥಾಪಿಸಿತ್ತು. 2015 ರಿಂದ 2024ರ ಮಧ್ಯೆ ಕೇಂದ್ರವು ಒಟ್ಟು ಮೂರು ಹಂತಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ₹14,448 ಕೋಟಿ ಘೋಷಿಸಿತ್ತು ಮತ್ತು ಅದರಲ್ಲಿ ₹13,288 ಕೋಟಿ ಬಿಡುಗಡೆ ಮಾಡಿತ್ತು.

ಯುವಜನರಲ್ಲಿ ಕೌಶಲಾಭಿವೃದ್ಧಿಗಾಗಿ ತರಬೇತುದಾರರು ಮತ್ತು ತರಬೇತಿ ಕೇಂದ್ರಗಳ ಶುಲ್ಕ, ತರಬೇತಿ ಪಡೆದವರಿಗೆ ಶಿಷ್ಯವೇತನ ನೀಡಲಾಗುತ್ತದೆ. ಇದಕ್ಕೆಂದೇ ₹10,194 ಕೋಟಿ ವೆಚ್ಚ ಮಾಡಲಾಗಿದೆ. ಫಲಾನುಭವಿಗಳು ಮತ್ತು ತರಬೇತುದಾರರ ವಿವರಗಳ ಮಾಹಿತಿ ಸರಿಯಿಲ್ಲದ ಕಾರಣ, ಯೋಜನೆ ಅನುಷ್ಠಾನ ಮತ್ತು ಫಲಾನುಭವಿಗಳ ನೈಜತೆಯ ಬಗ್ಗೆಯೇ ಅನುಮಾನ ಮೂಡಿದೆ ಎಂದು ಸಿಎಜಿ ಆಕ್ಷೇಪ ದಾಖಲಿಸಿದೆ.

ಯೋಜನೆಯ ಮೂರೂ ಹಂತಗಳಲ್ಲಿ ಒಟ್ಟು 1.36 ಕೋಟಿ ಜನರಿಗೆ ತರಬೇತಿ ನೀಡಲಾಗಿದ್ದು, 1.05 ಕೋಟಿ ಫಲಾನುಭವಿಗಳ ವೈಯಕ್ತಿಕ ಮಾಹಿತಿ, ಬ್ಯಾಂಕ್ ಖಾತೆ ವಿವರ ಮತ್ತು ಅವರಿಗೆ ಹಣ ಜಮೆಯಾದುದರ ಬಗ್ಗೆ ಕೇಂದ್ರ ಸರ್ಕಾರದ ಬಳಿ ದಾಖಲೆಗಳು ಇಲ್ಲ. ಫಲಾನುಭವಿಗಳಿಗೆ ನೇರ ವರ್ಗಾವಣೆ ಮೂಲಕ ಹಣ ಜಮೆ ಮಾಡಲಾಗಿದೆ ಎಂದು ಕೌಶಲ್ಯಾಭಿವೃದ್ಧಿ ಸಚಿವಾಲಯ ಹೇಳುತ್ತಿದೆಯಾದರೂ, ಅದಕ್ಕೆ ಪೂರಕ ದಾಖಲೆಗಳನ್ನು ಒದಗಿಸಿಲ್ಲ. ಹೀಗಾಗಿ, ಈ ಬಗ್ಗೆ ಸಚಿವಾಲಯವು ನೀಡಿರುವ ವಿವರಣೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಸಿಎಜಿ ಹೇಳಿದೆ.

ಏನೆಲ್ಲಾ ನಿಯಮ ಉಲ್ಲಂಘನೆ...

ಯೋಜನೆ ಅಡಿ ತರಬೇತಿಗೆ ಆಯ್ಕೆಯಾದ ಫಲಾನುಭವಿಗಳ ವೈಯಕ್ತಿಕ ಮಾಹಿತಿ, ಸಂಪರ್ಕ ಸಂಖ್ಯೆ, ಆಧಾರ್ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಕಡ್ಡಾಯವಾಗಿ ಸಂಗ್ರಹಿಸಬೇಕು ಎಂಬುದು ನಿಯಮ.



ತರಬೇತಿ ಪಡೆದು, ಪ್ರಮಾಣ ಪತ್ರ ಸ್ವೀಕರಿಸಿದ 1.10 ಕೋಟಿ ಫಲಾನುಭವಿಗಳ ಪೈಕಿ 5 ಲಕ್ಷ ಮಂದಿಯ ಬ್ಯಾಂಕ್ ವಿವರ ಮಾತ್ರ ಲಭ್ಯವಿದೆ. ಅಕ್ರಮ ನಡೆದಿದೆ ಎಂಬುದನ್ನು ಪುಷ್ಟೀಕರಿಸುವ ನಿದರ್ಶನಗಳಿವೆ ಎಂದು ಸಿಎಜಿ ಹೇಳಿದೆ.

19.56 ಲಕ್ಷ ಮೊದಲ ಹಂತದ ಯೋಜನೆಯ ಫಲಾನುಭವಿಗಳು. ಇದರಲ್ಲಿ ಒಬ್ಬರ ವಿವರವನ್ನೂ ಸರ್ಕಾರ ಸರಿಯಾಗಿ ಸಂಗ್ರಹಿಸಿಲ್ಲ

95.90 ಲಕ್ಷ 2 ಮತ್ತು 3ನೇ ಹಂತದ ಫಲಾನುಭವಿಗಳ ಸಂಖ್ಯೆ. ಇದರಲ್ಲಿ 90.60 ಲಕ್ಷ ಫಲಾನುಭವಿಗಳ ಯಾವ ಮಾಹಿತಿಯನ್ನೂ ಸರ್ಕಾರ ಸರಿಯಾಗಿ ನಿರ್ವಹಣೆ ಮಾಡಿಲ್ಲ

- ಫಲಾನುಭವಿಗಳ ಬ್ಯಾಂಕ್ ಖಾತೆಯ ಸಂಖ್ಯೆ ಮುಂದೆ, '1111111...', '00000....', '12345678...' ಎಂದು ನಮೂದಿಸಲಾಗಿದೆ. ಬ್ಯಾಂಕ್ ಹೆಸರು, ಐಎಫ್‌ಎಸ್‌ಸಿ ಕೋಡ್ ಲಭ್ಯವಿಲ್ಲ
- ಲೆಕ್ಕ ಪರಿಶೋಧನೆ ವೇಳೆ 12,172 ಬ್ಯಾಂಕ್ ಖಾತೆಗಳ ವಿವರ ಲಭ್ಯವಾಗಿದ್ದು, ಅವುಗಳನ್ನೇ 52,381 ಅಭ್ಯರ್ಥಿಗಳ ಹೆಸರ ಮುಂದೆ ನಮೂದಿಸಲಾಗಿದೆ
- ಒಂದೇ ಬ್ಯಾಂಕ್ ಖಾತೆಯ ಮೂಲಕ ಮಧ್ಯಪ್ರದೇಶ, ರಾಜಸ್ಥಾನ, ಬಿಹಾರ, ಕೇರಳ ಮತ್ತು ಒಡಿಶಾದಲ್ಲಿನ ಫಲಾನುಭವಿಗಳ ಹೆಸರಿಗೆ ಶಿಷ್ಯವೇತನ ಮತ್ತು ಬಹುಮಾನದ ಮೊತ್ತ ಜಮೆ ಮಾಡಲಾಗಿದೆ

'ಮೆಟ್ರೊ' ದರ ಸದ್ಯಕ್ಕಿಲ್ಲ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣ ದರ ಸೋಮವಾರದಿಂದ (ಫೆ.9) ಶೇ 5ರಷ್ಟು ಹೆಚ್ಚಳ ಮಾಡುವ ಪ್ರಸ್ತಾವ ಸದ್ಯಕ್ಕೆ ಸ್ಥಗಿತಗೊಂಡಿದೆ. ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ದರ ಏರಿಕೆ ಮಾಡದಂತೆ ಕೇಂದ್ರ ನಗರ ವ್ಯವಹಾರಗಳ ಸಚಿವ ಮನೋಹರ ಲಾಲ್ ಖಟ್ಟರ್ ಅವರು ನೀಡಿದ ಸೂಚನೆ ಭಾನುವಾರ ರಾತ್ರಿ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್ ಅವರಿಗೆ ತಲುಪಿದೆ. ಆನಂತರ, ಪ್ರಯಾಣ ದರ ಏರಿಕೆಯ ನಿರ್ಧಾರವನ್ನು ಮುಂದೂಡುವುದಾಗಿ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಫೆಬ್ರುವರಿ 9ರಿಂದ ವಾರ್ಷಿಕ ಸ್ವಯಂಚಾಲಿತ ದರ ಜಾರಿಗೆ ಬರಲಿದೆ ಎಂದು ಈ ಹಿಂದೆ ಪ್ರಕಟಣೆ ನೀಡಲಾಗಿತ್ತು. ಈ ನಿರ್ಧಾರವನ್ನು ಮುಂದಿನ ಆದೇಶ ಬರುವವರೆಗೆ ಹಿಂತೆಗೆದುಕೊಳ್ಳಲಾಗಿದೆ.

'ಯುಸಿಸಿ ಒಡಕು ಮೂಡಿಸಬಾರದು'

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: 'ದೇಶದ ಎಲ್ಲ ಭಾಗೀದಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ರೂಪಿಸಬೇಕು. ಹಾಗೆಯೇ, ಯುಸಿಸಿ ಜನರಲ್ಲಿ ಒಡಕು ಮೂಡಿಸುವಂತಿರಬಾರದು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಪ್ರತಿಪಾದಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವದ ಅಂಗವಾಗಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಉತ್ತರಾಖಂಡದಲ್ಲಿ ಯುಸಿಸಿ ಕುರಿತಂತೆ ಮೂರು ಲಕ್ಷ ಸಲಹೆ–ಸೂಚನೆಗಳು ಬಂದಿದ್ದವು. ಅವುಗಳ ಕೂಲಂಕಷ ಪರಿಶೀಲನೆ ನಂತರ, ಯುಸಿಸಿ ರೂಪಿಸಿ, ಜಾರಿಗೊಳಿಸಲಾಗಿದೆ' ಎಂದರು.

'ಸಂಘದ ನೇತೃತ್ವ ವಹಿಸುವ ವ್ಯಕ್ತಿಯು ಯಾವುದೇ ಜಾತಿಗೆ ಸೇರಿರಲಿ, ಆತ ಯಾವಾಗಲೂ ಹಿಂದೂ ಆಗಿರುತ್ತಾನೆ. ಸಂಘದ ಈ ಅತ್ಯುನ್ನತ ಹುದ್ದೆಗೆ ಅರ್ಹರನ್ನೇ ಆಯ್ಕೆ ಮಾಡಲಾಗುತ್ತದೆಯಷ್ಟೆ' ಎಂದು ಹೇಳಿದರು.


'ಸಂಘದ ಮುಖ್ಯಸ್ಥರನ್ನಾಗಿ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸೇರಿದವರನ್ನು ನೇಮಕ ಮಾಡಲಾಗುತ್ತದೆಯೇ' ಎಂಬ ಪ್ರಶ್ನೆಗೆ ನೇರವಾಗಿ ಉತ್ತರಿಸದ ಭಾಗವತ್, 'ವಿಭಾಗೀಯ ಮತ್ತು ಪ್ರಾದೇಶಿಕ ಮುಖಂಡರು ಚರ್ಚಿಸಿ, ಮುಖ್ಯಸ್ಥರನ್ನು ಆಯ್ಕೆ ಮಾಡುತ್ತಾರೆ' ಎಂದರು.

ಸಾವರ್ಕರ್‌ಗೆ ನೀಡಿದಲ್ಲಿ ಭಾರತ ರತ್ನದ ಘನತೆ ಹೆಚ್ಚಲಿದೆ: ಮೋಹನ್ ಭಾಗವತ್

ಹಿಂದುತ್ವ ಸಿದ್ಧಾಂತ ಪ್ರತಿಪಾದಕ ವಿ.ಡಿ.ಸಾವರ್ಕರ್ ಅವರಿಗೆ ಭಾರತ ರತ್ನ ಪ್ರದಾನ ಮಾಡಬೇಕು ಎಂಬ ಬಹುದಿನಗಳ ಬೇಡಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಭಾಗವತ್, 'ಸಾವರ್ಕರ್ ಅವರಿಗೆ ಭಾರತ ರತ್ನ ನೀಡುವುದರಿಂದ ಆ ಪ್ರಶಸ್ತಿಯ ಘನತೆ ಹೆಚ್ಚಲಿದೆ' ಎಂದು ಹೇಳಿದರು.


'ನಾನು ಭಾರತ ರತ್ನ ಪ್ರಶಸ್ತಿಗೆ ಆಯ್ಕೆ ಮಾಡುವ ಸಮಿತಿಯಲ್ಲಿ ಇಲ್ಲ. ಒಂದು ವೇಳೆ, ಅಂಥ ಅವಕಾಶ ಸಿಕ್ಕಲ್ಲಿ ನಾನು ಖಂಡಿತವಾಗಿಯೂ ಸಾವರ್ಕರ್ ಅವರಿಗೆ ಈ ಅತ್ಯುನ್ನತ ಪ್ರಶಸ್ತಿ ನೀಡುವಂತೆ ಕೋರುತ್ತೇನೆ' ಎಂದೂ ಹೇಳಿದರು.

'ಭಾರತ ರತ್ನ ಲಭಿಸದೇ ಇದ್ದರೂ ಸಾವರ್ಕರ್ ಅವರು ಜನರ ಹೃದಯದಲ್ಲಿ ಸ್ಥಾನ ಪಡೆದಿದ್ದಾರೆ' ಎಂದೂ ಭಾಗವತ್ ಹೇಳಿದರು.



ನನಗೆ ವಯಸ್ಸಾಗಿದ್ದರೂ, ಸಂಘದ ಸೂಚನೆಯಂತೆ ಸಂಘಟನೆಯನ್ನು ಮುನ್ನಡೆಸುತ್ತಿರುವೆ. ಸಂಘ ಸೂಚಿಸಿದರೆ ನಾನು ಈ ಹುದ್ದೆ ತ್ಯಜಿಸಲು ಸಿದ್ಧ
ಮೋಹನ್ ಭಾಗವತ್, ಆರ್‌ಎಸ್‌ಎಸ್ ಮುಖ್ಯಸ್ಥ

ಚಿನಕುರುಳಿ ಪ್ರಕಾಶ್ ಶೆಟ್ಟಿ



ರಾಜ್ಯದಲ್ಲಿ ಎಸ್‌ಐಆರ್ ಶೀಘ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ವೇಳಾಪಟ್ಟಿಯನ್ನು ಚುನಾವಣಾ ಆಯೋಗವು ಶೀಘ್ರದಲ್ಲಿ ಹೊರಡಿಸುವ ನಿರೀಕ್ಷೆಯಿದೆ.

ಆಯೋಗದ ನಿರ್ದೇಶನದಂತೆ 2025ರ ಮತದಾರರ ಪಟ್ಟಿಯಲ್ಲಿರುವ ಮತದಾರರನ್ನು 2002ರ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡುವ ಪೂರ್ವಭಾವಿ ಕಾರ್ಯಪ್ರಗತಿಯಲ್ಲಿದೆ. ಜ. 28ರವರೆಗೆ ಶೇ 62.59ರಷ್ಟು ಮತದಾರರ ಮ್ಯಾಪಿಂಗ್ ಆಗಿದೆ ಎಂದು ರಾಜ್ಯ ಸರ್ಕಾರಕ್ಕೆ ಮುಖ್ಯ ಚುನಾವಣಾಧಿಕಾರಿ (ಸಿಇಒ) ಮಾಹಿತಿ ನೀಡಿದ್ದಾರೆ.

ಮುಖ್ಯ ಚುನಾವಣಾಧಿಕಾರಿ ನೀಡಿರುವ ಮಾಹಿತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ಫೆ. 6ರಂದು ನಡೆದ ಸಚಿವ ಸಂಪುಟ ಸಭೆಗೆ ಮಂಡಿಸಿದೆ. ಅದರ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಈ ಬಗ್ಗೆ ಅಲ್ಪಾವಧಿ ಚರ್ಚೆ ನಡೆಸಿದ್ದ ಸಚಿವ ಸಂಪುಟ ಮುಂದಿನ ಸಭೆಗೆ ಮುಂದೂಡಿದೆ.

ಪ್ರಸ್ತಾವದಲ್ಲಿ ಏನಿದೆ?: ಕರ್ನಾಟಕದಲ್ಲಿ 2002ರಲ್ಲಿ ಕೊನೆಯದಾಗಿ ಎಸ್‌ಐಆರ್ ನಡೆದಿದ್ದು, ಅದನ್ನು ಮತದಾರರ ಮೂಲ ಪಟ್ಟಿ ಎಂದು ಪರಿಗಣಿಸಲಾಗಿದೆ. 2025ರ ಎಸ್‌ಐಆರ್‌ಗೆ ಆ ಪಟ್ಟಿ ಪ್ರಮುಖ ಉಲ್ಲೇಖದ ದಾಖಲೆಯಾಗಿದೆ. ಆಗ ರಾಜ್ಯದಲ್ಲಿ ಒಟ್ಟು 28 ಜಿಲ್ಲೆಗಳು, 224 ವಿಧಾನಸಭಾ ಕ್ಷೇತ್ರಗಳಿದ್ದವು.

'2002ರ ಮತದಾರರ ಪಟ್ಟಿಯಲ್ಲಿ ಹೆಸರಿದ್ದು, ಪ್ರಸ್ತುತ 40 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮತದಾರರ ಮ್ಯಾಪಿಂಗ್ ಅನ್ನು ಬಿಎಲ್‌ಒ ಪರಿಶೀಲನೆಯ ನಂತರ, ಆ್ಯಪ್ ಮೂಲಕ ಕಡ್ಡಾಯವಾಗಿ ದೃಢೀಕರಿಸಿ ಮ್ಯಾಪಿಂಗ್ ಮಾಡಲಾಗುತ್ತಿದೆ. 2002ರ ಮತದಾರರ ಪಟ್ಟಿಯಲ್ಲಿ ಹೆಸರಿರದಿದ್ದರೂ 40 ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಮತದಾರರ ವಂಶವೃಕ್ಷದ ಮ್ಯಾಪಿಂಗ್ ಕೂಡಾ ಕೈಗೊಳ್ಳಲಾಗುತ್ತಿದೆ. ಇಂತಹ ಮತದಾರರನ್ನು 2002ರ ಪಟ್ಟಿಯಲ್ಲಿ ಹೆಸರು ಹೊಂದಿರುವ ಅವರ ತಂದೆ, ತಾಯಿ, ತಾತ, ಅಜ್ಜಿಯೊಂದಿಗೆ ಮ್ಯಾಪಿಂಗ್ ಮಾಡಲಾಗುತ್ತಿದೆ. ಆಯೋಗದ ನಿರ್ದೇಶನದಂತೆ ವಂಶವೃಕ್ಷ ಮ್ಯಾಪಿಂಗ್ ಮಗ, ಮಗಳು, ಮೊಮ್ಮಗ, ಮೊಮ್ಮಗಳು ಇವರಿಗೆ ಅನ್ವಯವಾಗುತ್ತದೆ' ಎಂದೂ ಪ್ರಸ್ತಾವದಲ್ಲಿದೆ.

ಎನ್‌ಎಂಡಿಸಿ: 20 ಟನ್ ಅಕ್ರಮ ಸಾಗಣೆ • ತನಿಖೆ ವೇಳೆ ಮಹತ್ವದ ಸಂಗತಿಗಳು ಬಯಲು

ಸಾವಿರಾರು ಟನ್ ಅದಿರು ಕಳ್ಳತನ

• ಹರಿಶಂಕರ್ ಆರ್.

ಬಳ್ಳಾರಿ: ಕೇಂದ್ರದ ಉಕ್ಕು ಸಚಿವಾಲಯದ ಒಡೆತನದ, ರಾಷ್ಟ್ರೀಯ ನವರತ್ನ ಕಂಪನಿಗಳಲ್ಲಿ ಒಂದಾದ 'ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ (ಎನ್‌ಎಂಡಿಸಿ) ಕಬ್ಬಿಣದ ಅದಿರು ಗಣಿಯಿಂದ ಸಾವಿರಾರು ಟನ್ ಅದಿರು ಅಕ್ರಮವಾಗಿ ಸಾಗಣೆ ಆಗಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಸಂಡೂರಿನಲ್ಲಿರುವ ಎನ್‌ಎಂಡಿಸಿ ಗಣಿ ಸಂಖ್ಯೆ 1111ರ 'ಸಿ' ಬ್ಲಾಕ್‌ನಿಂದ ಉತ್ಕೃಷ್ಟ (60–62 ಗ್ರೇಡ್) ಗುಣಮಟ್ಟದ 20 ಟನ್ ಕಬ್ಬಿಣದ ಅದಿರನ್ನು ಹೊತ್ತ ಲಾರಿಯೊಂದು ಜನವರಿ 16ರಂದು ಪತ್ತೆಯಾಗಿದ್ದು, ಸಂಡೂರು ಪೊಲೀಸರು ತನಿಖೆ ನಡೆಸಿದ್ದಾರೆ.



'ಆಂಧ್ರಪ್ರದೇಶದ ಕಬ್ಬಿಣ ಕಾರ್ಖಾನೆಯಲ್ಲಿ 1,000 ಟನ್, ಬಳ್ಳಾರಿ ಹೊರವಲಯದ ಕಾರ್ಖಾನೆಯಲ್ಲಿ 1,500 ಟನ್ ಜಪ್ತಿ ಮಾಡಲಾಗಿದೆ. ಬಳ್ಳಾರಿ ಕಾರ್ಖಾನೆಯು ರಾಜ್ಯದ ಆಡಳಿತ ಪಕ್ಷದ ನಾಯಕರೊಬ್ಬರಿಗೆ ಸಂಬಂಧಿಸಿದ್ದು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣ ಸಂಬಂಧ ಮೊದಲು ಬಂಧಿಸಲಾಗಿದ್ದ ಚಾಲಕ ತಿಪ್ಪೇಸ್ವಾಮಿ, ಅಂದಾಜು 250 ಟನ್‌ಗೂ ಅಧಿಕ ಅದಿರನ್ನು ಅಕ್ರಮ ಮಾರ್ಗದಲ್ಲಿ ಸಾಗಿಸಿದ್ದುಗೊತ್ತಾಗಿದೆ. ಪ್ರಕರಣದಲ್ಲಿ ಐದಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆಯಲಾಗಿದೆ. ಲಾರಿ ಚಾಲಕರಿಗೆ ಕಾರ್ಖಾನೆಗಳೊಂದಿಗೆ ಸಂಪರ್ಕ ಕಲ್ಪಿಸಿದ ಕಿಂಗ್‌ಪಿನ್‌ಗಾಗಿ ಹುಡುಕಾಟ ನಡೆದಿದೆ' ಎಂದು ಹೇಳಲಾಗುತ್ತಿದೆ.

ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವ ಸರೋಜಿನಿ ಮಹಿಷಿ ವರದಿ ಅನುಷ್ಠಾನದಿಂದ ತಪ್ಪಿಸಿಕೊಳ್ಳಲು ಎನ್‌ಎಂಡಿಸಿ, ಗಣಿಯಲ್ಲಿ ಎಲ್ಲ ಕೆಲಸಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡಿ, ಅಕ್ರಮಗಳನ್ನು ನಡೆಸಿದೆ.
ಇ.ತುಕಾರಾಂ, ಬಳ್ಳಾರಿ ಸಂಸದ

ಅದಿರು ಸಾಗಣೆಯಲ್ಲಿ ಅಕ್ರಮ ಸಾಧ್ಯತೆ ಇದೆ. ಸದ್ಯ, ಭಾರಿ ಪ್ರಮಾಣದ ಅದಿರು ವಶಕ್ಕೆ ಪಡೆಯಲಾಗಿದೆ. ತನಿಖೆ ಪೂರ್ಣಗೊಂಡ ಬಳಿಕ ಸತ್ಯಾಸತ್ಯತೆ ತಿಳಿಯಲಿದೆ.
ಸುಮನ್ ಡಿ.ಪಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಳ್ಳಾರಿ

ಇನ್ನು ಈ ಅಕ್ರಮ ಬಯಲಾಗುತ್ತಲೇ ಎನ್‌ಎಂಡಿಸಿಯು ಆಡಳಿತಾತ್ಮಕ ಬದಲಾವಣೆ ಮಾಡಿದೆ ಎಂದು ಹೇಳಲಾಗಿದೆ. ಇದನ್ನು ಖಚಿತಪಡಿಸಿಕೊಳ್ಳಲು ಎನ್‌ಎಂಡಿಸಿ ಅಧಿಕಾರಿಯ ಸಂಪರ್ಕ ಸಾಧ್ಯವಾಗಲಿಲ್ಲ.

2011ರ ಅಕ್ರಮ ಗಣಿಗಾರಿಕೆ ಯುಗ ಅಂತ್ಯವಾದ ಬಳಿಕ ಸುಪ್ರೀಂ ಕೋರ್ಟ್ ನೇಮಿಸಿದ ಮೇಲುಸ್ತುವಾರಿ ಪ್ರಾಧಿಕಾರದ ನೇರ ಪರಿವೀಕ್ಷಣೆಯಲ್ಲಿ ಬಳ್ಳಾರಿಯಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಯುತ್ತಿದೆ. ಗಣಿಗಳಿಂದ ಲಾರಿಗಳು ಹೊರಬರಲು ಹಲವು ಹಂತಗಳ ಪರಿಶೀಲನಾ ವ್ಯವಸ್ಥೆಗಳಿವೆ. ಲಾರಿಗಳಿಗೆ ಜಿಪಿಎಸ್ ಅಳವಡಿಸಲಾಗಿದೆ. ಪರ್ಮಿಟ್, ಟ್ರಿಪ್‌ಶೀಟ್ ಪಡೆದೇ ಅದಿರು ಒಯ್ಯಲಾಗುತ್ತದೆ.

ಎನ್‌ಎಂಡಿಸಿಯ ಗಣಿಯಲ್ಲಿ ಸಿಐಎಸ್‌ಎಫ್ ಭದ್ರತೆ ಜೊತೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಯೊಬ್ಬರು ಇರುತ್ತಾರೆ. ಇದು ಎಲ್ಲವನ್ನೂ ಮೀರಿ ಸಾವಿರಾರು ಟನ್ ಅದಿರು ಹೊರಗೆ ಸಾಗಣೆ ಆಗಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ.

‘ಸ್ಪೆಷಾಲಿಟಿ’ ಸೇವೆಗೆ ಪ್ರತ್ಯೇಕ ಕಟ್ಟಡ

ಸಿಎಸ್‌ಆರ್ ನಿಧಿಯಡಿ ಕಟ್ಟಡ ನಿರ್ಮಾಣಕ್ಕೆ ಸಿಐಎಲ್ ಕ್ರಮ

• ವರುಣ ಹೆಗಡೆ

ಬೆಂಗಳೂರು: ಇಂದಿರಾನಗರದಲ್ಲಿರುವ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯು ಸೂಪರ್ ಸ್ಪೆಷಾಲಿಟಿ ಸೇವೆಗೆ ತೆರೆದುಕೊಳ್ಳಲು ಸಜ್ಜಾಗುತ್ತಿದ್ದು, ಆಸ್ಪತ್ರೆಯ ಆವರಣದಲ್ಲಿ ಪ್ರತ್ಯೇಕ ಕಟ್ಟಡ ತಲೆಯೆತ್ತಲಿದೆ.

ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಈ ಆಸ್ಪತ್ರೆ, ನಗರದ ಪ್ರಮುಖ ಆಸ್ಪತ್ರೆಗಳಲ್ಲಿ ಒಂದಾಗಿದೆ. 250 ಹಾಸಿಗೆಗಳ ಈ ಆಸ್ಪತ್ರೆಗೆ ದಿನಕ್ಕೆ 500ರಿಂದ 600 ಹೊರರೋಗಿಗಳು ಭೇಟಿ ನೀಡುತ್ತಾರೆ. ಆದರೆ, ಇಲ್ಲಿ ಸೂಪರ್ ಸ್ಪೆಷಾಲಿಟಿ ಸೇವೆ ಇಲ್ಲದ ಕಾರಣ, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಜಯದೇವ ಹೃದ್ರೋಗ ಸಂಸ್ಥೆ ಸೇರಿ ರೋಗಿಯ ಕಾಯಿಲೆ ಆಧರಿಸಿ ಪ್ರಮುಖ ವೈದ್ಯಕೀಯ ಸಂಸ್ಥೆಗಳಿಗೆ ಶಿಫಾರಸು ಮಾಡಲಾಗುತ್ತಿತ್ತು. ಈಗ ಆಸ್ಪತ್ರೆಯು ತನ್ನ ಆವರಣದಲ್ಲಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಪ್ರತ್ಯೇಕ ಬ್ಲಾಕ್ ನಿರ್ಮಾಣಕ್ಕೆ ಮುಂದಾಗಿದೆ.

ಸಿ.ವಿ. ರಾಮನ್ ಆಸ್ಪತ್ರೆ

ಸೂಪರ್ ಸ್ಪೆಷಾಲಿಟಿ ಬ್ಲಾಕ್ ನಿರ್ಮಾಣಕ್ಕೆ ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಸಂಸ್ಥೆಯು ಮುಂದೆ ಬಂದಿದೆ. ಇದರಿಂದಾಗಿ ಆಸ್ಪತ್ರೆಯ ಆವರಣದಲ್ಲಿ ಸ್ಥಳ ಗುರುತಿಸಲಾಗಿದೆ. 10 ಸಾವಿರ ಚದರ ಅಡಿಯಲ್ಲಿ ಈ ಕಟ್ಟಡ ತಲೆಯೆತ್ತಲಿದೆ. ಈ ಕಟ್ಟಡವನ್ನು ಸಿಐಎಲ್ ನಿರ್ಮಿಸಿ, ಅಗತ್ಯ ವೈದ್ಯರನ್ನೂ ಒದಗಿಸಲಿದೆ. ಸಿಎಸ್‌ಆರ್ ಅನುದಾನದಡಿ ನಿರ್ವಹಣಾ ವೆಚ್ಚವನ್ನೂ ಭರಿಸಲಿದೆ.

ನಾಲ್ಕು ವಿಭಾಗ: ಸೂಪರ್ ಸ್ಪೆಷಾಲಿಟಿ ಬ್ಲಾಕ್ ನಾಲ್ಕು ವಿಭಾಗಗಳನ್ನು ಒಳಗೊಳ್ಳಲಿದೆ. ಹೃದಯ ವಿಜ್ಞಾನ, ನರ ವಿಜ್ಞಾನ, ಮೂತ್ರಪಿಂಡ–ಮೂತ್ರಕೋಶ ವಿಜ್ಞಾನ ಹಾಗೂ ಜಠರಕರುಳಿನ ವಿಜ್ಞಾನ ವಿಭಾಗಗಳು ಕಾರ್ಯನಿರ್ವಹಿಸಲಿವೆ. ನಾಲ್ಕೂ ವಿಭಾಗಗಳಲ್ಲಿ ಹೊರರೋಗಿ ವಿಭಾಗದ ಸೇವೆ ದೊರೆಯಲಿದ್ದು, ಪರ್ಯಾಯ ದಿನಗಳಲ್ಲಿ ವೈದ್ಯರು ಲಭ್ಯರಿರುತ್ತಾರೆ. ಕಟ್ಟಡವು ಒಂದು ಅಂತಸ್ತು ಹೊಂದಿರಲಿದ್ದು, 10 ಹಾಸಿಗೆಗಳನ್ನು ಒಳಗೊಳ್ಳಲಿದೆ. ಇಲ್ಲಿ ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳನ್ನು ನಡೆಸಿ, ವಾರ್ಡ್‌ಗಳಿಗೆ ಸ್ಥಳಾಂತರ ಮಾಡಲಾಗುತ್ತದೆ.

‘ಸೂಪರ್ ಸ್ಪೆಷಾಲಿಟಿ ಬ್ಲಾಕ್ ನಿರ್ಮಾಣದಿಂದ ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡದೆ, ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಒದಗಿಸಲು ಸಾಧ್ಯವಾಗುತ್ತದೆ. ಖಾಸಗಿ ವ್ಯವಸ್ಥೆಯಡಿ ವಿವಿಧ ಶಸ್ತ್ರಚಿಕಿತ್ಸೆಗಳು ದುಬಾರಿ ಆಗಿರುವುದರಿಂದ, ಸರ್ಕಾರಿ ವ್ಯವಸ್ಥೆಯಡಿ ಶಸ್ತ್ರಚಿಕಿತ್ಸೆಗೆ ರಾಜ್ಯದ ವಿವಿಧೆಡೆಯಿಂದ ರೋಗಿಗಳು ನಗರದ ವೈದ್ಯಕೀಯ ಸಂಸ್ಥೆಗಳಿಗೆ ಬರುತ್ತಾರೆ. ಇಲ್ಲಿ ಸೂಪರ್ ಸ್ಪೆಷಾಲಿಟಿ ಘಟಕ ನಿರ್ಮಾಣದಿಂದ ಆ ಸಂಸ್ಥೆಗಳ ಮೇಲಿನ ಭಾರವು ಕೊಂಚ ಇಳಿಯಲಿದೆ’ ಎಂದು ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ್ ಕೆ.ಎಸ್. ಅವರು ತಿಳಿಸಿದರು.



ಇಂದಿರಾನಗರದಲ್ಲಿರುವ ಸರ್‌ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯ ಹೊರನೋಟ ಚಿತ್ರ: ಎಂ.ಎಸ್‌ ಮಂಜುನಾಥ್



ಕಟ್ಟಡದ ಕಾಮಗಾರಿ ಪ್ರಾರಂಭವಾದರೆ ನಾಲ್ಕೈದು ತಿಂಗಳಲ್ಲಿ ಪೂರ್ಣಗೊಂಡು, ಇದೇ ವರ್ಷ ಸೇವೆ ದೊರೆಯಲಿದೆ. ಬಿಪಿಎಲ್ ಕುಟುಂಬದವರಿಗೆ ಉಚಿತವಾಗಿ ಚಿಕಿತ್ಸೆ ಲಭ್ಯವಾಗಲಿದೆ
ಡಾ.ರಾಜೇಶ್ ಕೆ.ಎಸ್.
ವೈದ್ಯಕೀಯ ಅಧೀಕ್ಷಕ, ಸರ್ ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ

ಕ್ಯಾಥ್ ಲ್ಯಾಬ್ ಅಳವಡಿಕೆ

ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯು ಕ್ಯಾಥ್ ಲ್ಯಾಬ್ ಅಳವಡಿಸಿಕೊಳ್ಳಲು ಮುಂದಾಗಿದೆ. ಈ ಸಂಬಂಧ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಜತೆಗೆ ಮಾತುಕತೆ ನಡೆಸಿದ್ದು, ಸಂಸ್ಥೆಯ ಪ್ರತಿನಿಧಿಗಳು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಮಲ್ಲೇಶ್ವರದಲ್ಲಿರುವ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿರುವ ಜಯದೇವ ಘಟಕದ ಮಾದರಿಯಲ್ಲಿಯೇ, ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿಯೂ ಪ್ರತ್ಯೇಕ ಘಟಕ ನಿರ್ಮಾಣವಾಗುವ ಸಾಧ್ಯತೆಯಿದೆ. ಹೃದಯ ಮತ್ತು ರಕ್ತನಾಳಗಳ ಕಾಯಿಲೆಗಳನ್ನು ಪತ್ತೆ ಹಚ್ಚಲು ಹಾಗೂ ಚಿಕಿತ್ಸೆ ನೀಡಲು ಕ್ಯಾಥ್ ಲ್ಯಾಬ್ ಸಹಕಾರಿಯಾಗಿದೆ.

‘ಕ್ರೌರ್ಯ ಕೊನೆಗಾಣಿಸುವ ರನ್ನನ ಕಾವ್ಯಗಳು’

ಬೆಂಗಳೂರು: ‘ಶಾಸನಗಳನ್ನೂ ಬರೆದು ಸಮಕಾಲೀನ ಚರಿತ್ರೆ ದಾಖಲಿಸಿದ ಮೊದಲ ಕವಿ ರನ್ನ’ ಎಂದು ಸಾಹಿತಿ ಬಾಳಾಸಾಹೇಬ ಲೋಕಾಪುರ ಹೇಳಿದರು.

ಜೈನ ಮಿಲನ್ ಬೆಂಗಳೂರು ಸೆಂಟ್ರಲ್‌ನಿಂದ ಜಯನಗರದ ಚಕ್ರೇಶ್ವರಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜೈನ ಸಾಹಿತ್ಯ ಸಿರಿ ಕಾರ್ಯಕ್ರಮದ ತಿಂಗಳ ಉಪನ್ಯಾಸದಲ್ಲಿ ಮಾತನಾಡಿದರು.

‘ಜೈನಧರ್ಮದ ಕೈಪಿಡಿಯಾದ ಅಜಿತನಾಥ ಪುರಾಣದಲ್ಲಿ ರನ್ನ ದಾಖಲಿಸುವ ಪಂಚಕಲ್ಯಾಣಗಳನ್ನು ಹಾಗೂ ಅಭಿಷೇಕಗಳನ್ನು ಇಂದಿಗೂ ಧಾರ್ಮಿಕ ಕ್ರಿಯೆಯಾಗಿ ಜೈನರು ಆಚರಿಸುತ್ತಿದ್ದಾರೆ. ಅಂತಹ ಪ್ರಥಮಗಳನ್ನು ನೀಡಿದ ಮಹತ್ವದ ಕವಿ ಚಕ್ರವರ್ತಿ ರನ್ನ’ ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಮಾತನಾಡಿ, ‘ಜೈನಧರ್ಮ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಬಹು ದೊಡ್ಡದು. ಅಹಿಂಸೆಯನ್ನು ಬಹು ದೊಡ್ಡಮಟ್ಟದಲ್ಲಿ ಆಚರಿಸುತ್ತಿರುವ ಧರ್ಮವಿದು. ಈ ಜಗತ್ತಿಗೆ ಅಹಿಂಸೆ ಇಂದು ಅತ್ಯಂತ ಮುಖ್ಯವಾದದ್ದು’ ಎಂದರು.

ಜೈನ್ ಮಿಲನ್ ಸೆಂಟ್ರಲ್ ಘಟಕದ ಅಧ್ಯಕ್ಷೆ ಮಮತಾ ಕಾಂತರಾಜ್, ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷೆ ನಾಗಶ್ರೀ ಮುಪ್ಪಾನೆ, ಜೈನ ಸಾಹಿತ್ಯ ಸಿರಿ ಸಂಚಾಲಕಿ ಪದ್ಮಿನಿ ನಾಗರಾಜು, ದೀಪಾಂಜಲಿ ಗೌರಾಜ್ ಉಪಸ್ಥಿತರಿದ್ದರು.

ಜಾಗೃತಿ ಮೂಡಿಸಲು ಪಾಡ್‌ಕಾಸ್ಟ್ ಆರಂಭಿಸಲು ಸೂಚನೆ

ಹವಾಮಾನ ಕ್ರಿಯಾ ಯೋಜನೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಂದ ತಲಾ ಒಂದು ವಾರ್ಡ್ ಅನ್ನು ಆಯ್ಕೆ ಮಾಡಿ, ‘ಹವಾಮಾನ ಕ್ರಿಯಾ ಯೋಜನೆ’ಗಳನ್ನು ಸಿದ್ಧಪಡಿಸಲಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ತಿಳಿಸಿದರು.



ಮಹೇಶ್ವರ್ ರಾವ್

ಐದು ನಗರ ಪಾಲಿಕೆಗಳ ವಾರ್ಷಿಕ ಆಯವ್ಯಯ ಅಂದಾಜು ಪಟ್ಟಿಗಳೊಂದಿಗೆ ಹವಾಮಾನ ಕ್ರಿಯಾ ಯೋಜನೆಗಳ ಏಕೀಕರಣದ ಕುರಿತು ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಜಿಬಿಎ ಹವಾಮಾನ ಕ್ರಿಯಾ ಕೋಶ ಅಡಿಯಲ್ಲಿ, ವರ್ಕಿಂಗ್ ಗ್ರೂಪ್‌ಗಳ ಸಹಾಯದೊಂದಿಗೆ ಆಯ್ಕೆಯಾದ ಐದು ವಾರ್ಡ್‌ಗಳಲ್ಲಿ ಇಂಧನ ಮತ್ತು ಕಟ್ಟಡಗಳು, ಸಾರಿಗೆ, ಘನ ತ್ಯಾಜ್ಯ ನಿರ್ವಹಣೆ, ನಗರ ಯೋಜನೆ, ಹಸಿರೀಕರಣ ಮತ್ತು ಜೀವವೈವಿಧ್ಯ, ನೀರು ಹಾಗೂ ಮಳೆನೀರು ನಿರ್ವಹಣೆ, ವಿಪತ್ತು ನಿರ್ವಹಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶ್ಲೇಷಣೆ ನಡೆಸಿ ಯೋಜನೆಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಶಾಂತಿನಗರ, ಜಕ್ಕೂರು, ಬೇಗೂರು, ವಿಜಿನಾಪುರ, ನಾಲ್ವಡಿ ಕೃಷ್ಣರಾಜ ಒಡೆಯರ್ ವಾರ್ಡ್‌ಗಳಲ್ಲಿನ ಕ್ರಿಯಾ ಯೋಜನೆಗಳ ಮಾದರಿಯಲ್ಲೇ ಉಳಿದ ವಾರ್ಡ್‌ಗಳಿಗೂ ಕ್ರಿಯಾ ಯೋಜನೆ ರಚಿಸಲಾಗುವುದು ಎಂದು ಮಾಹಿತಿ ನೀಡಿದರು.

ಹವಾಮಾನ ಬದಲಾವಣೆಗೆ ಸಂಬಂಧಿಸಿದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಐಇಸಿ ಸೆಲ್ ರಚಿಸಿ, ವಾರ್ಡ್ ಮಟ್ಟದಲ್ಲಿ ಹವಾಮಾನ ಕ್ರಿಯಾ ಯೋಜನೆಗಳ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವಂತೆ ಸೂಚನೆ ನೀಡಿದರು.

ಹವಾಮಾನ ಕ್ರಿಯಾ ಯೋಜನೆ ಕುರಿತು ನಾಗರಿಕರಲ್ಲಿ ಜಾಗೃತಿ ಮತ್ತು ಆಸಕ್ತಿ ಮೂಡಿಸಲು ಪಾಡ್‌ಕಾಸ್ಟ್ ಆರಂಭಿಸುವಂತೆ ಸೂಚಿಸಿದರು.

ಶ್ಲಾಘನೆ: ಇಂಡೊ–ಆಸ್ಟ್ರೇಲಿಯನ್ ಕ್ರೀಡಾಪಟು ಓಂ ಸತಿಜಾ ಅವರು, ಯುವಕರಿಗೆ ಪ್ರೇರಣೆ ನೀಡುವ ಹಾಗೂ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಸಹಾಯ ಮಾಡುವ ಉದ್ದೇಶದಿಂದ ದೇಶದಾದ್ಯಂತ ಓಟವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಮಹೇಶ್ವರ್ ರಾವ್ ಹೇಳಿದರು.

‘ಒನ್ ರನ್ ಇಂಡಿಯಾ’ ಉಪಕ್ರಮದಡಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 5,000 ಕಿ.ಮೀ. ದೂರದ ಅಪರೂಪದ ಓಟವನ್ನು ಕೈಗೊಂಡಿರುವ ಓಂ ಸತಿಜಾ ಅವರನ್ನು ಜಿಬಿಎ ಕಚೇರಿಯಲ್ಲಿ ಸನ್ಮಾನಿಸಲಾಯಿತು.

ವಿದ್ಯುತ್ ಸ್ವಾವಲಂಬನೆಗೆ ಯೋಜನೆ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಎಲ್ಲ ಕಟ್ಟಡಗಳ ಮೇಲೆ ಸೋಲಾರ್ ಪ್ಯಾನಲ್ ಅಳವಡಿಸಿ, ವಿದ್ಯುತ್ ಬಳಕೆಯಲ್ಲಿ ಸ್ವಾವಲಂಬಿಯಾಗಲು ಅಗತ್ಯವಿರುವ ಯೋಜನೆ ಮತ್ತು ಅನುದಾನದ ಬಗ್ಗೆ ವಿಸ್ತೃತ ವರದಿ ಸಿದ್ಧಪಡಿಸಲು ಆಯುಕ್ತ ಡಿ.ಎಸ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ಜಿಬಿಎ ಮತ್ತು ಐದು ನಗರ ಪಾಲಿಕೆ ವತಿಯಿಂದ ₹1,526 ಕೋಟಿಯನ್ನು ಬೆಸ್ಕಾಂಗೆ ಪಾವತಿ ಮಾಡಲು ಬಾಕಿ ಇದೆ ಎಂದರು.

1,200 ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ನೆರವು

ಬೆಂಗಳೂರು: ‘ಪ್ರತಿಭಾವಂತ ಬಡ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರಾರಂಭಿಸಲಾದ ಉಡಾನ್ ಯೋಜನೆಯಡಿ, 12 ವರ್ಷಗಳಲ್ಲಿ 1,200 ಎಂಬಿಬಿಎಸ್ ಮತ್ತು 600ಕ್ಕೂ ಅಧಿಕ ನರ್ಸಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಒದಗಿಸಲಾಗಿದೆ’ ಎಂದು ನಾರಾಯಣ ಹೆಲ್ತ್‌ನ ಅಧ್ಯಕ್ಷ ಡಾ.ದೇವಿ ಪ್ರಸಾದ್ ಶೆಟ್ಟಿ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಬಡ ರೈತರು, ಕಾರ್ಮಿಕರ ಮಕ್ಕಳಿಗೆ ‘ಉಡಾನ್’ ಯೋಜನೆಯಡಿ ನೆರವು ನೀಡಲಾಗುತ್ತಿದೆ. 1,500ಕ್ಕೂ ಹೆಚ್ಚು ನೀಟ್ ಆಕಾಂಕ್ಷಿಗಳಿಗೆ ಕೋಚಿಂಗ್ ಪಡೆಯಲು ನೆರವು ನೀಡಲಾಗಿದೆ’ ಎಂದು ಹೇಳಿದರು.

‘ಕಳೆದ ಆರ್ಥಿಕ ವರ್ಷದಲ್ಲಿ ಈ ಕಾರ್ಯಕ್ರಮದಡಿ ಒಬ್ಬ ವೈದ್ಯರಿಗೆ ತರಬೇತಿ ಪಡೆಯಲು ಸರಾಸರಿ ₹50,400 ಭರಿಸಲಾಗಿದೆ’ ಎಂದರು.

ಐಐಎಚ್‌ಆರ್‌ಗೆ ಚೌಹಾಣ್ ಭೇಟಿ

ಬೆಂಗಳೂರು: ‘ಹೂವು, ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ನಮ್ಮ ದೇಶ ಆತ್ಮನಿರ್ಭರವಾಗಬೇಕು’ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಹೇಳಿದರು.

ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಗೆ (ಐಐಎಚ್‌ಆರ್) ಭಾನುವಾರ ಭೇಟಿ ನೀಡಿದ ಅವರು ರೈತರು ಹಾಗೂ ವಿಜ್ಞಾನಿಗಳೊಂದಿಗೆ ಸಂವಾದ ನಡೆಸಿ, ಅವರು ಮಾತನಾಡಿದರು.

‘ರೈತರ ಆದಾಯವನ್ನು ದ್ವಿಗುಣಗೊಳಿಸಲು ಸಮಗ್ರ ಕೃಷಿಯ ಜೊತೆಗೆ ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಜೇನು ಸಾಕಾಣಿಕೆ ಮಾಡಬೇಕು. ಇದರ ಜೊತೆಗೆ ವಿಜ್ಞಾನಿಗಳು ರೈತರಿಗೆ ಹೆಚ್ಚು ಆದಾಯ ತಂದುಕೊಡುವ ಪ್ರಭೇದಗಳು ಹಾಗೂ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಬೇಕು. ನೂತನ ತಂತ್ರಜ್ಞಾನ ಅಳವಡಿಸಿಕೊಳ್ಳುವ ಕುರಿತು ರೈತರಿಗೆ ಕಾಲ–ಕಾಲಕ್ಕೆ ತರಬೇತಿ ನೀಡಬೇಕು’ ಎಂದು ಸಲಹೆ ನೀಡಿದರು.

‘ಯುವ ಮನಸು ಬೆಸೆಯುವ ಸಂಘ ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಭಾಷೆ, ಸಾಹಿತ್ಯ ಹಾಗೂ ನಮ್ಮ ಸಂಸ್ಕೃತಿಯ ಬೆಳವಣಿಗೆಗೆ ಯುವ ಮನಸುಗಳನ್ನು ಬೆಸೆಯುವ ಸಂಘ–ಸಂಸ್ಥೆಗಳ ಸಂಖ್ಯೆ ಹೆಚ್ಚಾಗಬೇಕು’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಸುಮಂಗಲಿ ಸೇವಾಶ್ರಮ ಹಾಗೂ ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ 10ನೇ ಯುವಜನ ಸಾಹಿತ್ಯ ಸಂಸ್ಕೃತಿ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕನ್ನಡ ಭಾಷೆಯ ಬೆಳವಣಿಗೆಗೆ ಯುವಕರನ್ನು ಸನ್ನದುಗೊಳಿಸುವುದು ಇಂದಿನ ತುರ್ತು ಕೆಲಸವಾಗಿದೆ. ಈ ನಿಟ್ಟಿನಲ್ಲಿ 25 ವರ್ಷಗಳಿಂದ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಕೆಲಸ ಮಾಡುತ್ತಿದೆ. ಕಾವ್ಯ, ಕಥಾ–ಕಮ್ಮಟ, ಯುವಜನ ಮೇಳ, ಮಹಿಳಾ ಸಾಂಸ್ಕೃತಿಕ ಸಮಾವೇಶಗಳನ್ನು ಆಯೋಜಿಸುತ್ತಿದೆ. ಸರ್ಕಾರದ ನೆರವು ಪಡೆಯದೇ ಕನ್ನಡ ಸಾಹಿತ್ಯದ ಬೆಳವಣಿಗೆಗೆ ದುಡಿಯುತ್ತಿದೆ’ ಎಂದು ಶ್ಲಾಘಿಸಿದರು.

‘ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್ ಯುವ ಸಾಹಿತ್ಯ ದತ್ತಿ ಪ್ರಶಸ್ತಿ’ಯನ್ನು ಲೇಖಕಿ ವಿ. ನಿಶಾ ಗೋಪಿನಾಥ್ ಹಾಗೂ ಉಪನ್ಯಾಸಕ ಸಿದ್ಧಲಿಂಗಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ‘ಪ್ರಜಾವಾಣಿ’ ಪತ್ರಿಕೆಯ ಹಿರಿಯ ಛಾಯಾಗ್ರಾಹಕ ಎಂ.ಎಸ್. ಮಂಜುನಾಥ್, ಪ್ರಾಧ್ಯಾಪಕ ಪಾರ್ಶ್ವನಾಥ್, ಸಮಾಜ ಸೇವಕ ಡ್ಯಾನಿಯಲ್ ಪಿ., ಎಸ್. ರಾಧಾಕೃಷ್ಣ, ರೂಪಾ ಗೌಡ, ಪತ್ರಕರ್ತೆ ಮಾಲಾ ಹಾಸನ, ಎಂ. ಅಂಬರೀಶ್ ಹಾಗೂ ಪರಿಸರ ಮಂಜು ಅವರಿಗೆ ‘ಕುವೆಂಪು ಶ್ರೀ ಪ್ರಶಸ್ತಿ’ಯನ್ನು ಪ್ರದಾನ ಮಾಡಲಾಯಿತು.



ಸಮ್ಮೇಳನ ಅಧ್ಯಕ್ಷ ಎಂ.ಆರ್ ಉಪೇಂದ್ರ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಸಿದ್ಧಲಿಂಗಸ್ವಾಮಿ, ವಿ. ನಿಶಾ ಗೋಪಿನಾಥ್ ಅವರಿಗೆ ಪುನೀತ್ ರಾಜಕುಮಾರ್ ಯುವ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಲೇಖಕ ಚಿನ್ನು ಪ್ರಕಾಶ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮನು ಬಳಿಗಾರ್, ಎಲ್.ಎನ್. ಮುಕುಂದರಾಜ್, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್‌ನ ಮುಖ್ಯಸ್ಥೆ ಇಂದಿರಾ ಕೃಷ್ಣಪ್ಪ, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಮಲಿಂಗೇಶ್ವರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮರಗಳ ಬುಡಕ್ಕೆ ಬೆಂಕಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮುತ್ತರಾಯನಗರ ರೈಲ್ವೆ ಗೇಟ್‌ನಿಂದ ಬೈರೇಶ್ವರ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಬದಿಯಲ್ಲಿರುವ ಮರಗಳ ಬುಡಕ್ಕೆ ಬೆಂಕಿ ಹಾಕಲಾಗುತ್ತಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಮುತ್ತರಾಯನಗರದಿಂದ ಅರಣ್ಯ ನೌಕರ ಬಡಾವಣೆವರೆಗೆ ಬೆಳೆದಿರುವ ಮರದ ಬುಡಗಳಿಗೆ, ಪ್ಲಾಸ್ಟಿಕ್, ಕಸದ ರಾಶಿಯನ್ನು ತಂದು ಸುರಿದು ಪ್ರತಿನಿತ್ಯ ಬೆಂಕಿ ಹಚ್ಚುವುದರಿಂದ ನಿಧಾನವಾಗಿ ಬೆಂಕಿಯ ಕೆನ್ನಾಲಿಗೆಗೆ ಮರಗಳು ಆಹುತಿಯಾಗುತ್ತಿವೆ.

‘ಮರಗಳನ್ನು ನಾಶ ಮಾಡಲು ಬುಡಕ್ಕೆ ಆ್ಯಸಿಡ್ ಹಾಕುವುದು, ಬೆಂಕಿ ಹಚ್ಚುವುದು, ಮರಗಳನ್ನು ಕಡಿಯುವುದನ್ನು ಮಾಡುತ್ತಿದ್ದಾರೆ. ದೂರು ನೀಡಿದರೂ ನಗರ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ನಿವಾಸಿಗಳಾದ ರಾಜೇಶ್ ಮತ್ತು ಅನಿಲ್ ದೂರಿದರು.

ವಲಯ ಅರಣ್ಯ ಅಧಿಕಾರಿ ಜಗದೀಶ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರು ಕರೆ ಸ್ವೀಕರಿಸಲಿಲ್ಲ.

ಸುದ್ದಿ 2 ನಿಮಿಷ

‘ಚಂದ್ರನ ಮೇಲಿನ ಮೂಲಸೌಕರ್ಯಕ್ಕೆ ಎಐ ಬಳಕೆ’

ಬೆಂಗಳೂರು: ‘ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಕೃತಕ ಬುದ್ಧಿಮತ್ತೆ (ಎಐ) ಬಳಕೆ ಅಗತ್ಯವಾಗಿದ್ದು, ಚಂದ್ರ ಮತ್ತು ಮಂಗಳ ಗ್ರಹದ ಮೇಲಿನ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಪ್ರಾಮುಖ್ಯ ಹೊಂದಿದೆ’ ಎಂದು ಅಮೆರಿಕದ ಇನ್‌ಸ್ಟಿಟ್ಯೂಟ್ ಆಫ್ ಹಜಾರ್ಡ್ ಮೆಟೀರಿಯಲ್ಸ್ ಮ್ಯಾನೇಜ್‌ಮೆಂಟ್‌ನ (ಐಎಚ್‌ಎಂಎಂ) ಡಾ. ರಾಬರ್ಟ್ ಎ. ವೆಸ್ಟ್ ಅಭಿಪ್ರಾಯಪಟ್ಟರು.

ದಯಾನಂದ ಸಾಗರ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಸಿವಿಲ್ ಎಂಜಿನಿಯರಿಂಗ್ ವಿಭಾಗ, ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ (ಇಂಡಿಯಾ– ಐಇಐ), ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಮತ್ತು ಬೆಂಗಳೂರು ಜಲಮಂಡಳಿ ಸಹಯೋಗದೊಂದಿಗೆ ‘ಇನೊವೇಶನ್ ಇನ್ ಸಸ್ಟೈನಬಲ್ ಆ್ಯಂಡ್ ಡಿಜಿಟಲ್ ಕನ್‌ಸ್ಟ್ರಕ್ಷನ್ ಪ್ರಾಕ್ಟೀಸಸ್’ ಎಂಬ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಎಚ್. ಕೆ. ರಾಮರಾಜು, ಅಮೆರಿಕದ ಎಕ್ಸ್‌ಕಿಲೆನ್ಸ್ ಸಂಸ್ಥೆಯ ಸಿಇಒ ಡಾ. ಎಸ್. ಆರ್. ಸುಬ್ರಹ್ಮಣ್ಯ, ಫ್ಲಾರಿಡಾ ಇಂಟರ್‌ನ್ಯಾಷನಲ್ ಯೂನಿವರ್ಸಿಟಿಯ ಡಾ. ಇನೆಸ್ ಆರ್. ಟ್ರೈಯ್, ಲಾಸ್ ವೇಗಾಸ್‌ನ ನಿಯೋಗದ ಮುಖ್ಯಸ್ಥ ಡಾ. ರಾಂಪುರ ವಿ. ವಿವಿಧ ವಿಷಯಗಳ ಕುರಿತು ಮಾತನಾಡಿದರು. ದಯಾನಂದ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಬಿ. ಜಿ. ಪ್ರಸಾದ್ ಉಪಸ್ಥಿತರಿದ್ದರು.



ಈ ಸಮ್ಮೇಳನಕ್ಕೆ ವಿಶ್ವದಾದ್ಯಂತ ಒಟ್ಟು 300 ಪ್ರಬಂಧಗಳು ಬಂದಿದ್ದು, ಅವುಗಳಲ್ಲಿ 165 ಪ್ರಬಂಧಗಳನ್ನು ಪ್ರಸ್ತುತಪಡಿಸಲು ಆಯ್ಕೆ ಮಾಡಲಾಗಿತ್ತು.

ದಲಿತರ ಆತ್ಮಕಥೆ– ಶಕ್ತಿ ಹೀನರ ಚರಿತ್ರೆ: ಕೋಟಿಗಾನಹಳ್ಳಿ

ಬೆಂಗಳೂರು: ‘ದಲಿತರ ಆತ್ಮಕಥೆಗಳು ಶಕ್ತಿ ಕೇಂದ್ರದ ಚರಿತ್ರೆಯಲ್ಲ. ಅವು ಶಕ್ತಿಹೀನರ ಚರಿತ್ರೆ’ ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ತಿಳಿಸಿದರು.

ಕೆ. ದೊರೈರಾಜು ಅವರ ‘ನಮ್ಮ ಹಟ್ಟಿ ಆತ್ಮಕಥೆ’ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಹದಿನೈದು ವರ್ಷಗಳ ಈಚೆಗೆ ಬಿಡುಗಡೆಯಾದ ಆತ್ಮಕಥೆಗಳಲ್ಲಿ ಬಹುತೇಕ ಕೃತಿಗಳು ‘ಸೆಲ್ಫಿ’ ಚಿತ್ರದಂತೆ ಇವೆ. ಚಳವಳಿಯೊಂದಿಗಿನ ಸಂಬಂಧ ಮತ್ತು ಅವರ ಕಥನಗಳು ಇರುತ್ತವೆ. ಸಾಮೂಹಿಕ ಚಿತ್ರದಂತೆ ಗೋಚರಿಸುವುದಿಲ್ಲ. ಚಳವಳಿಯ ಚರಿತ್ರೆಯಾಗಿ ಸಾಮೂಹಿಕವಾಗಿ ನೋಡಲು ಅಲ್ಲಿ ಸಿಗುವುದಿಲ್ಲ. ‘ನಮ್ಮ ಹಟ್ಟಿ ಆತ್ಮಕಥೆ’ಯು ಚಳವಳಿಯ ಸಾಮೂಹಿಕ ಚಿತ್ರವನ್ನು ಕಟ್ಟಿಕೊಡುತ್ತದೆ’ ಎಂದು ಹೇಳಿದರು.

‘ತಮ್ಮ ಅನುಭವಗಳನ್ನು ದಾಟಿಸಬೇಕಾದ ರೀತಿಯನ್ನು ಅರಿಯದೇ ಹೋದ ಆತ್ಮಕಥೆಗಳಿಗೆ ಇದುವರೆಗೆ ಸಾಕ್ಷಿಯಾಗಿದ್ದೇವೆ. ಈ ಕೃತಿ ಆ ಮಿತಿಯನ್ನು ಮೀರುತ್ತದೆ. ದಲಿತ ಚಳವಳಿಗೆ ಬೂಸಾ ಚಳವಳಿಗಿಂತಲೂ ಹಿಂದಿನ ಚರಿತ್ರೆ ಇದೆ. ಆದರೆ, ದಲಿತ ಚಳವಳಿಯನ್ನು ಬೂಸಾ ಚಳವಳಿಯ ಮೂಲಕ ಗುರುತಿಸುವ ಮಿತಿಗೆ ಒಳಪಡಿಸಲಾಗಿದೆ’ ಎಂದು ತಿಳಿಸಿದರು.

ಪ್ರಾಧ್ಯಾಪಕ ರವಿಕುಮಾರ್ ಬಾಗಿ ಮಾತನಾಡಿದರು. ಬಸವರಾಜ್ ಕೌತಾಳ್ ಅಧ್ಯಕ್ಷತೆ ವಹಿಸಿದ್ದರು. ಗಂಗಮ್ಮ ಕೆಂಪಮ್ಮ, ವಿ.ಎಲ್. ನರಸಿಂಹಮೂರ್ತಿ, ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿದರು.

ನಗರದಲ್ಲಿ ಇಂದು

ಧಾರ್ಮಿಕ ಸೌಧ ನಿರ್ಮಾಣದ ಗುದ್ದಲಿ ಪೂಜೆ ಕಾರ್ಯಕ್ರಮ: ಉಪಸ್ಥಿತಿ: ರಾಮಲಿಂಗಾರೆಡ್ಡಿ, ರಿಜ್ವಾನ್ ಅರ್ಷದ್, ಪಿ.ಸಿ. ಮೋಹನ್, ರಾಜೇಂದ್ರ ಕುಮಾರ್ ಕಟಾರಿಯಾ, ಶರತ್, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ರಾಮಾಂಜನೇಯ ದೇವಸ್ಥಾನದ ಪಕ್ಕದ ಜಾಗ, ಎಂ.ಎಸ್. ಬಿಲ್ಡಿಂಗ್, ವಿಕಾಸಸೌಧದ ಹಿಂಭಾಗ, ಬೆಳಿಗ್ಗೆ 10.15

69ನೇ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನ ಸಮಾರೋಪ ಸಮಾರಂಭ: ಅಧ್ಯಕ್ಷತೆ: ಟಿ. ಫಾಲಾಕ್ಷ, ಅತಿಥಿಗಳು: ಚಂದ್ರಲಾಲ್, ಐ. ವೆಂಕಟೇಶ್ವರರಾವ್, ಆಯೋಜನೆ: ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ, ಸ್ಥಳ: ಸೇಂಟ್ ಕ್ಲಾರೆಟ್ ಪಿ.ಯು. ಕಾಲೇಜು, ಜಾಲಹಳ್ಳಿ, ಮಧ್ಯಾಹ್ನ 2

ಇಂಡಿಯನ್ ಆರ್ಟ್ ಹಿಸ್ಟರಿ ಕಾಂಗ್ರೆಸ್‌ನ ಸಮಾರೋಪ ಸಮಾರಂಭ: ಅತಿಥಿ: ಶತಾವಧಾನಿ ಆರ್. ಗಣೇಶ್, ಅಧ್ಯಕ್ಷತೆ: ಎಂ.ಎನ್.ಪಿ. ತಿವಾರಿ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಮಾಗಡಿ ಮುಖ್ಯರಸ್ತೆ, ಸಂಜೆ 4.30

‘ಹಾರ್ಮನಿ’ ಕಲಾಕೃತಿಗಳ ಪ್ರದರ್ಶನಕ್ಕೆ ಚಾಲನೆ: ಎನ್. ಮನು ಚಕ್ರವರ್ತಿ, ಎಸ್.ಎನ್. ಶಶಿಧರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256



‘ಬಸ್‌ಗಳ ಸಂಖ್ಯೆ ಹೆಚ್ಚಿಸಿ’

ಮೈಸೂರು ರಸ್ತೆಯಿಂದ ಕೆಂಗೇರಿ, ಕುಂಬಳಗೋಡು, ಬಿಡದಿ, ರಾಮನಗರ ಮಾರ್ಗವಾಗಿ ತೆರಳಲು ಸರಿಯಾದ ಬಸ್‌ಗಳ ವ್ಯವಸ್ಥೆ ಇಲ್ಲ. ಈ ಭಾಗದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳಿದ್ದು, ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ. ಕಾರ್ಖಾನೆಗೆ ತೆರಳುವ ನೌಕರರು ಸಮಸ್ಯೆ ಎದುರಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ಆರ್. ಶಂಕರಮಣಿ, ಜ್ಯೋತಿಲಕ್ಷ್ಮಿ, ವರುಣ, ಪ್ರಯಾಣಿಕರು

‘ನಿವೇಶನ ಸ್ವಚ್ಛಗೊಳಿಸಿ’

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರದಲ್ಲಿರುವ ರಾಜರಾಜೇಶ್ವರಿ ದೇವಸ್ಥಾನದಿಂದ ಪಟ್ಟಣಗೆರೆಗೆ ಹೋಗುವ ಮುಖ್ಯರಸ್ತೆಯ ಅಕ್ಕಪಕ್ಕದ ನಿವೇಶನಗಳಲ್ಲಿ ತ್ಯಾಜ್ಯ ತುಂಬಿ ತುಳುಕುತ್ತಿದೆ. ಈ ಬಗ್ಗೆ ನಗರ ಪಾಲಿಕೆಯ ಅಧಿಕಾರಿಗಳಿಗೆ ಸಾಕಷ್ಟು ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ನಿವೇಶನ ಸ್ವಚ್ಛ ಇಲ್ಲದಿದ್ದರೆ ದಂಡ ಹಾಕುವುದಾಗಿ ನಗರ ಪಾಲಿಕೆ ಆಯುಕ್ತರು ಹೇಳಿಕೆಯಲ್ಲಿ ತಿಳಿಸುತ್ತಿದ್ದಾರಷ್ಟೆ. ಆದರೆ, ಇದು ಕಾರ್ಯಗತವಾಗಿಲ್ಲ. ಆಯುಕ್ತರು ಇತ್ತ ಪರಿಶೀಲನೆಗೆ ಬರಲಿ.

ಉಷಾ, ರಾಮಣ್ಣ, ರಾಮಚಂದ್ರ, ಪಟ್ಟಣಗೆರೆ

‘ರಸ್ತೆಯಲ್ಲಿ ಹರಿಯುವ ತ್ಯಾಜ್ಯ ನೀರು’

ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ–138ರ ಛಲವಾದಿ ಪಾಳ್ಯದ ಸಿದ್ದಾರ್ಥ ನಗರದಲ್ಲಿ ಒಳಚರಂಡಿ ಕಟ್ಟಿಕೊಂಡ ಕಾರಣ ತ್ಯಾಜ್ಯ ನೀರು ರಸ್ತೆಯಲ್ಲಿಯೇ ಹರಿಯುತ್ತಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ಎದುರಾಗಿದೆ. ಈ ಬಗ್ಗೆ ಜಲಮಂಡಳಿಯ ಅಧಿಕಾರಿಗಳಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ. ತ್ಯಾಜ್ಯ ನೀರು ರಸ್ತೆಯಲ್ಲಿ ಹರಿಯುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಕೂಡಲೇ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.



ಎಸ್.ಪ್ರಭಾಕರ್, ಚಾಮರಾಜಪೇಟೆ



‘ಪಾದಚಾರಿ ಮಾರ್ಗದಲ್ಲಿ ಮಣ್ಣಿನ ರಾಶಿ’

ಕನಕಪುರ ರಸ್ತೆಗೆ ಇತ್ತೀಚೆಗೆ ಡಾಂಬರೀಕರಣ ಮಾಡುವ ಸಂದರ್ಭದಲ್ಲಿ ರಸ್ತೆಯ ಮಣ್ಣನ್ನು ಪಾದಚಾರಿ ಮಾರ್ಗದಲ್ಲಿ ಹಾಕಲಾಗಿದೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ. ಈಗ ರಸ್ತೆ ಬಹಳ ಅಗಲವಾಗಿದ್ದು, ವಾಹನ ಸಂಚಾರಕ್ಕೆ ಅನುಕೂಲವಾಗಿದೆ. ಪಾದಚಾರಿ ಮಾರ್ಗದಲ್ಲಿ ಹಾಕಿದ್ದ ಮಣ್ಣಿನ ರಾಶಿಯನ್ನು ವಿಲೇವಾರಿ ಮಾಡಿಲ್ಲ. ಇದರಿಂದ ರಸ್ತೆಯಲ್ಲ ದೂಳುಮಯವಾಗಿದೆ. ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಮಣ್ಣಿನ ರಾಶಿಯನ್ನು ಬೇರೆ ಕಡೆಗೆ ಸಾಗಿಸಬೇಕು.

ಮಂಜುನಾಥ್, ಪ್ರಯಾಣಿಕ




ಬೀದರ್ ವಿದ್ಯಾರ್ಥಿ ಮುಳುಗಿ ಸಾವು

ಕನಕಪುರ: ತಾಲ್ಲೂಕಿನ ಚುಂಚಿ ಫಾಲ್ಸ್ ನೋಡಲು ಶನಿವಾರ ಬೆಂಗಳೂರಿನಿಂದ ಬಂದಿದ್ದ ಜಯನಗರದ ಜೈನ್ ಕಾಲೇಜಿನ 3ನೇ ವರ್ಷದ ಬಿಸಿಎ ವಿದ್ಯಾರ್ಥಿ ಸಾಯಿ ಪ್ರಸಾದ್ ಪಾಟೀಲ (21) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಬೀದರ್‌ನ ಸಾಯಿ ಪ್ರಸಾದ್ ಬೆಂಗಳೂರಿನ ಅಕ್ಕನ ಮನೆಯಲ್ಲಿದ್ದುಕೊಂಡು ಓದುತ್ತಿದ್ದರು. ಶನಿವಾರ ಬೆಳಿಗ್ಗೆ ನಾಲ್ಕು ದ್ವಿಚಕ್ರ ವಾಹನಗಳಲ್ಲಿ ಎಂಟು ಸ್ನೇಹಿತರು ಚುಂಚಿ ಫಾಲ್ಸ್‌ಗೆ ಬಂದಿದ್ದರು.

ಈ ವೇಳೆ ಎಲ್ಲರೂ ಫಾಲ್ಸ್‌ನ ನೀರಿನಲ್ಲಿ ಇಳಿದು ಆಟವಾಡುತ್ತಿದ್ದರು. ಸಾಯಿ ಪ್ರಸಾದ್ ಪಾಟೀಲ ಮತ್ತು ಆದಿತ್ಯ ಆಳವಾದ ನೀರಿನಲ್ಲಿ ಸಿಲುಕಿದ್ದಾರೆ. ಈ ವೇಳೆ ಆದಿತ್ಯ ಅವರನ್ನು ಸ್ನೇಹಿತರು ರಕ್ಷಣೆ ಮಾಡಿದ್ದಾರೆ. ಆದರೆ ಸಾಯಿ ಪ್ರಸಾದ್ ಆಳವಾದ ನೀರಿನಲ್ಲಿ ಮುಳುಗಿದ್ದರಿಂದ ಸ್ನೇಹಿತರು ರಕ್ಷಣೆ ಮಾಡಲು ವಿಫಲರಾದರು.


ಸಾಯಿ ಪ್ರಸಾದ್

ಸ್ನೇಹಿತರು ವಿಚಾರವನ್ನು ಸಾತನೂರು ಪೊಲೀಸರಿಗೆ ತಿಳಿಸಿದರು. ಸಬ್ ಇನ್‌ಸ್ಪೆಕ್ಟರ್ ದುರ್ಗೇಗೌಡ ಮತ್ತು ತಂಡದವರು, ಅರಣ್ಯ ಇಲಾಖೆ ಅಧಿಕಾರಿಗಳು, ಅಗ್ನಿಶಾಮಕ ದಳ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿದರು. ಮಧ್ಯಾಹ್ನ 1 ಗಂಟೆಯ ನಂತರ ಶವವನ್ನು ಹೊರ ತೆಗೆದಿದ್ದಾರೆ.

ಮೃತ ವಿದ್ಯಾರ್ಥಿಯ ಭಾವ ಸಂತೋಷ್ ದೂರು ನೀಡಿದ್ದಾರೆ. ಯುಡಿಆರ್ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಶವವನ್ನು ಕನಕಪುರ ಸಾರ್ವಜನಿಕ ಆಸ್ಪತ್ರೆಗೆ ಸ್ಥಳಾಂತರಿಸಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಿದರು.

ಜಿಮ್ ತರಬೇತುದಾರ ಆತ್ಮಹತ್ಯೆ

ಪ್ರೀತಿಸಿದ ಯುವತಿಗೆ ಬೇರೊಬ್ಬನ ಜತೆ ಮದುವೆ ನಿಶ್ಚಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀತಿಸಿದ ಯುವತಿ ಬೇರೊಬ್ಬನ ಜತೆ ಮದುವೆ ನಿಶ್ಚಯ ಮಾಡಿಕೊಂಡ ಕಾರಣ ಮನನೊಂದ ಜಿಮ್ ತರಬೇತುದಾರ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಕಿರಣ್

ಗೆಳೆಯರ ಬಳಗ ಬಡಾವಣೆಯ ನಿವಾಸಿ ಶ್ರೀಧರ್ ಅವರ ಮಗ ಕಿರಣ್ (26) ಆತ್ಮಹತ್ಯೆ ಮಾಡಿಕೊಂಡವರು.

ಜಿಮ್ ತರಬೇತುದಾರರಾಗಿದ್ದ ಕಿರಣ್, ರಾಜ್ಯಮಟ್ಟದ ದೇಹದಾರ್ಢ್ಯ ಪಟುವಾಗಿದ್ದರು. ಮೂರು ವರ್ಷಗಳಿಂದ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದರು. ಆ ಯುವತಿ ಏಳೆಂಟು ತಿಂಗಳ ಹಿಂದೆ ಕಿರಣ್ ಮನೆಗೆ ಬಂದು ಪೋಷಕರಿಗೆ ತಮ್ಮ ಪ್ರೀತಿ ವಿಚಾರ ತಿಳಿಸಿ ಮದುವೆ ಮಾಡಿಸುವಂತೆ ಕೇಳಿದ್ದರು. ಅದಕ್ಕೆ ಒಪ್ಪಿದ್ದ ಪೋಷಕರು, ಕಿರಣ್ ಅವರ ಅಣ್ಣನ ಮದುವೆಯ ನಂತರ ಮದುವೆ ಮಾಡಿಸುವುದಾಗಿ ಹೇಳಿ ಕಳುಹಿಸಿದ್ದರು ಎಂದು ಪೊಲೀಸರು ಹೇಳಿದರು.

ಈ ನಡುವೆ ಬೇರೊಬ್ಬನ ಜತೆ ತನ್ನ ಮದುವೆ ನಿಶ್ಚಯ ಮಾಡಿಕೊಂಡ ಯುವತಿ, ಕಿರಣ್‌ಗೆ ವಿವಾಹದ ಆಮಂತ್ರಣ ಪತ್ರಿಕೆ ಕೊಟ್ಟಿದ್ದರು. ಅಲ್ಲದೆ, ವರನ ಕಡೆಯವರು ಮದುವೆಗೆ ಕೊಡಿಸಿದ್ದ ಸೀರೆಯನ್ನು ತೋರಿಸಿದ್ದರು. ಇದರ ಬಳಿಕ ಆತ ಕುಟುಂಬದ ಸದಸ್ಯರ ಜತೆ ಹೆಚ್ಚು ಮಾತನಾಡುತ್ತಿರಲಿಲ್ಲ ಎಂದು ತಿಳಿಸಿದರು.

ಸಾವಿಗೆ ಪ್ರೇಯಸಿಯೇ ಕಾರಣ: 'ಪ್ರೇಯಸಿ ಬೇರೊಬ್ಬರನ್ನು ಮದುವೆ ಆಗುತ್ತಿರುವ ವಿಚಾರ ತಿಳಿದು ಮಾನಸಿಕವಾಗಿ ಕಿರಣ್ ಕುಗ್ಗಿಹೋಗಿದ್ದರು. ತನ್ನ ಸಾವಿಗೆ ಪ್ರೇಯಸಿ ಹಾಗೂ ಆಕೆಯ ತಾಯಿಯೇ ಕಾರಣ ಎಂದು ಆತ್ಮಹತ್ಯೆಗೂ ಮುನ್ನ ಪತ್ರ ಬರೆದಿಟ್ಟಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮಗನ ಸಾವಿಗೆ ಆತನ ಪ್ರೇಯಸಿಯೇ ಕಾರಣ ಎಂದು ಕಿರಣ್ ಪೋಷಕರು ದೂರು ಕೊಟ್ಟಿದ್ದಾರೆ. ಪ್ರೇಯಸಿ ಹಾಗೂ ಆಕೆಯ ತಾಯಿಯ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

₹40 ಲಕ್ಷ ಸಾಲ ತೀರಿಸಿದ್ದ

'ಮೂಟೆ ಹೊತ್ತು ಮಕ್ಕಳನ್ನು ಸಾಕಿದ್ದೆ. ಎಡಗೈ ತುಂಡಾಗಿದ್ದರೂ ಮಕ್ಕಳನ್ನು ಚೆನ್ನಾಗಿ ಸಾಕಿದ್ದೆ. ಇದೆಲ್ಲಾ ಗೊತ್ತಿದ್ದರೂ ಮಗ ಕಿರಣ್, ಪ್ರೀತಿಸಿದ ಹುಡುಗಿಗಾಗಿ ಪ್ರಾಣ ಕಳೆದುಕೊಂಡಿದ್ದಾನೆ. ಪ್ರೇಯಸಿಯ ಕುಟುಂಬದವರ ಸುಮಾರು ₹40 ಲಕ್ಷ ಸಾಲ ತೀರಿಸಿದ್ದ. ಆದರೆ, ಆಕೆ ಪ್ರೀತಿಯ ನಾಟಕವಾಡಿ ಮಗನಿಗೆ ಮೋಸ ಮಾಡಿದ್ದಾಳೆ. ಆಕೆಗೆ ಶಿಕ್ಷೆಯಾಗಬೇಕು' ಎಂದು ಶ್ರೀಧರ್ ಅವರು ಮಾಧ್ಯಮ ಪ್ರತಿನಿಧಿಗಳ ಎದುರು ಕಣ್ಣೀರಿಟ್ಟರು.

ಅಪರಾಧ ಸುದ್ದಿ

ಕ್ಯಾಬ್ ಚಾಲಕನ ಮೇಲೆ ಯುವತಿಯರ ಹಲ್ಲೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಅಪಘಾತ ಮಾಡಿ, ಕ್ಯಾಬ್ ಚಾಲಕನ ಮೇಲೆ ಇಬ್ಬರು ಯುವತಿಯರು ಹಲ್ಲೆ ನಡೆಸಿದ್ದಾರೆ.

ಯುವತಿಯರು ಜೆ.ಪಿ.ನಗರ ಹಾಗೂ ಕೋರಮಂಗಲದಲ್ಲಿ ವಾಸವಾಗಿದ್ದಾರೆ. ಕ್ಯಾಬ್ ಚಾಲಕನ ಜತೆ ಗಲಾಟೆ ಮಾಡಿಕೊಂಡು, ರಂಪಾಟ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಹುಳಿಮಾವು ಪೊಲೀಸ್ ಠಾಣೆ ವ್ಯಾಪ್ತಿಯ ಬನ್ನೇರುಘಟ್ಟ ರಸ್ತೆಯ ಖಾಸಗಿ ಹೋಟೆಲ್‌ಗೆ ಸ್ನೇಹಿತರೊಂದಿಗೆ ಬಂದಿದ್ದ ಉತ್ತರ ಭಾರತದ ಲೀಸಾ ಹಾಗೂ ಮ್ಯಾಥ್ಯೂ ಅವರು ತಮ್ಮ ದ್ವಿಚಕ್ರ ವಾಹನವನ್ನು ಕ್ಯಾಬ್‌ಗೆ ಡಿಕ್ಕಿ ಹೊಡೆಸಿದ್ದಾರೆ. ಇದನ್ನು ಪ್ರಶ್ನಿಸಿದ್ದ ಚಾಲಕ ಅಹ್ಮದ್ ಜತೆ ವಾಗ್ವಾದಕ್ಕೆ ಇಳಿದಿದ್ದಾರೆ. ಈ ವೇಳೆ ಬುದ್ಧಿ ಹೇಳಲು ಬಂದ ಸ್ಥಳೀಯರ ಜತೆಗೂ ಗಲಾಟೆ ಮಾಡಿಕೊಂಡಿದ್ದಾರೆ.

ಸ್ಥಳಕ್ಕೆ ಹುಳಿಮಾವು ಠಾಣೆ ಪೊಲೀಸರು ಭೇಟಿ ನೀಡಿ ಯುವತಿಯರನ್ನು ನಿಯಂತ್ರಿಸಿದ್ದಾರೆ. ಇಬ್ಬರನ್ನೂ ಠಾಣೆಗೆ ಕರೆದೊಯ್ದ ಪೊಲೀಸರು, ಹೇಳಿಕೆ ದಾಖಲಿಸಿಕೊಂಡು, ಬುದ್ಧಿವಾದ ಹೇಳಿ ಕಳುಹಿಸಿದ್ದಾರೆ.

ಬೆದರಿಕೆ: ರೌಡಿಶೀಟರ್ ಬಂಧನ

ಬೆಂಗಳೂರು: ಕರ್ತವ್ಯಕ್ಕೆ ಅಡ್ಡಿಪಡಿಸಿ, ಜೀವಬೆದರಿಕೆ ಹಾಕಿದ ರೌಡಿಶೀಟರ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಪಳನಿ ಅಲಿಯಾಸ್ ಕರ್ಚೀಫ್ ಪಳನಿ (42) ಬಂಧಿತ. ಬೆಳ್ಳಂದೂರು ಠಾಣೆ ವ್ಯಾಪ್ತಿಯ ರೌಡಿಶೀಟರ್‌ಗಳು, ಕೋಣನಕುಂಟೆ, ಕೆ.ಎಸ್. ಲೇಔಟ್, ವಿಲ್ಸನ್ ಗಾರ್ಡನ್, ಬೆಳ್ಳಂದೂರು ಸೇರಿ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಕೊಲೆ, ಕೊಲೆಗೆ ಯತ್ನ ಮತ್ತು ಮಕ್ಕಳ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದವರ ಬಗ್ಗೆ ಸಿಸಿಬಿ ಪೊಲೀಸರು ಪರಿಶೀಲನೆ ನಡೆಸುತ್ತಿದ್ದರು.

ಈ ವೇಳೆ ಅಶೋಕ ನಗರ ಪೊಲೀಸ್ ಠಾಣೆಯ ರೌಡಿಶೀಟರ್ ಪಳನಿ, ಕಸವನಹಳ್ಳಿಯ ಸ್ಲಂಬೋರ್ಡ್ ಮನೆಯಲ್ಲಿ ವಾಸವಾಗಿದ್ದುಕೊಂಡು ಸ್ಥಳೀಯರಿಗೆ ಬೆದರಿಕೆ ಹಾಕಿ, ಹಣ ವಸೂಲು ಮಾಡುತ್ತಿದ್ದ.

ಸ್ಥಳಕ್ಕೆ ತೆರಳಿದ್ದ ಸಿಸಿಬಿ ಪೊಲೀಸರ ಮೇಲೆ ಏರುಧ್ವನಿಯಲ್ಲಿ ಮಾತನಾಡಿ, ಬೆದರಿಕೆ ಹಾಕಿ, ಕಲ್ಲಿನಿಂದ ಹಲ್ಲೆಗೆ ಯತ್ನ ನಡೆಸಿದ್ದ. ಆರೋಪಿ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ, ಕೊಲೆಗೆ ಯತ್ನ, ಸುಲಿಗೆ, ದರೋಡೆ, ಕಳ್ಳತನ ಸೇರಿ ಒಟ್ಟು ಹದಿನೈದಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಐಐಎಸ್‌ಸಿ ಶುಲ್ಕ ಏರಿಕೆ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ


ಮಲ್ಲೇಶ್ವರದಲ್ಲಿ ಎಐಡಿಎಸ್‌ಒ ಸದಸ್ಯರು ಭಾನುವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಶಿಕ್ಷಣ ಶುಲ್ಕ ಹೆಚ್ಚಿಸಿರುವುದನ್ನು ಖಂಡಿಸಿ ಎಐಡಿಎಸ್‌ಒ ಸದಸ್ಯರು ಮಲ್ಲೇಶ್ವರದ ಕುವೆಂಪು ಪ್ರತಿಮೆಯ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.

2026-27ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಪದವಿ ಹಂತದ 'ಬ್ಯಾಚುಲರ್ ಆಫ್ ಸೈನ್ಸ್ (ಬಿ.ಎಸ್) ಕೋರ್ಸ್'ನ ಶುಲ್ಕವನ್ನು ₹10,000ರಿಂದ ₹80,000ಕ್ಕೆ ಏರಿಕೆ ಮಾಡಿದೆ. ಇದು ಉನ್ನತ ಶಿಕ್ಷಣದ ಲಭ್ಯತೆಯ ಮೇಲಿನ ನೇರ ದಾಳಿಯಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಬಿ.ಜೆ ಮಾತನಾಡಿ, 'ಶುಲ್ಕ ಹೆಚ್ಚಳವು ಬಡ ಮತ್ತು ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೇಶದ ಅತ್ಯುನ್ನತ ವಿಜ್ಞಾನ ಸಂಸ್ಥೆಯ ಬಾಗಿಲನ್ನು ಶಾಶ್ವತವಾಗಿ ಮುಚ್ಚುವಂತೆ ಮಾಡುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಈ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಮತ್ತು ಪಿಎಚ್.ಡಿ ಕೋರ್ಸ್‌ಗಳ ಶುಲ್ಕವನ್ನು ಪರಿಷ್ಕರಿಸುವ ಸಂಸ್ಥೆಯ ಯೋಜನೆಯು ದೇಶದ ಕೈಗೆಟುಕುವ ಸಂಶೋಧನಾ ವ್ಯವಸ್ಥೆಯನ್ನೇ ಧ್ವಂಸಗೊಳಿಸಲಿದೆ. ಶಿಕ್ಷಣ ಎಂಬುದು ಹಕ್ಕು, ಅದು ಕೇವಲ ಶ್ರೀಮಂತರ ಐಷಾರಾಮಿ ವಸ್ತುವಾಗಬಾರದು' ಎಂದರು.

'ಹೆಚ್ಚಿಸಿರುವ ಶುಲ್ಕವನ್ನು ತಕ್ಷಣವೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದ ಪ್ರತಿಭಟನಕಾರರು, ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುವ ಬದಲು ಸಂಶೋಧನಾ ಸಂಸ್ಥೆಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ಉಪಾಧ್ಯಕ್ಷರಾದ ಅಪೂರ್ವ ಸಿ.ಎಂ. ಮತ್ತು ಚಂದ್ರಕಲಾ, ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್ ಉಪಸ್ಥಿತರಿದ್ದರು.

'ವ್ಯಂಗ್ಯಚಿತ್ರಗಳ ಮೊನಚು ಉಳಿಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ಸಂಪಾದಕೀಯ ಎಂದೇ ಬಣ್ಣಿಸಲ್ಪಟ್ಟಿದ್ದ ವ್ಯಂಗ್ಯಚಿತ್ರಗಳು ಮೊನಚು ಕಳೆದುಕೊಳ್ಳುತ್ತಿವೆ ಎಂದು ಪತ್ರಕರ್ತ ಜಿ.ಎನ್. ಮೋಹನ್ ವಿಷಾದಿಸಿದರು.

ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ ಶನಿವಾರ ನಗರದಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ ವ್ಯಂಗ್ಯಚಿತ್ರ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವ್ಯಂಗ್ಯಚಿತ್ರಗಳು ಜನಸಾಮಾನ್ಯರ ಮನಸ್ಸನ್ನು ಬಿಂಬಿಸುವ ಕನ್ನಡಿಯಾದ ಕಾರಣದಿಂದಲೇ ಅವನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಆಳುವ ವರ್ಗ ಸದಾ ಯತ್ನಿಸುತ್ತಲೇ ಇರುತ್ತದೆ. ಈಗಾಗಲೇ ವ್ಯಂಗ್ಯಚಿತ್ರಗಳನ್ನು ಕೇವಲ ಚಿತ್ರವಾಗಿಸುವ ಹುನ್ನಾರ ನಡೆದಿದೆ ಎಂದರು.

ಇಂದು ವ್ಯಂಗ್ಯಚಿತ್ರಗಳನ್ನು ಬಿಟ್ಟ ಜಾಗವನ್ನು ತುಂಬುವ ಪದಾರ್ಥದಂತೆ ಬಳಸಲಾಗುತ್ತಿರುವುದು ದುರದೃಷ್ಟಕರ ಎಂದು ಹೇಳಿದರು.

ಪ್ರದರ್ಶನವನ್ನು ಉದ್ಘಾಟಿಸಿದ ವ್ಯಂಗ್ಯಚಿತ್ರಕಾರ ಬಿ.ವಿ. ಪಾಂಡುರಂಗ ರಾವ್ ಅವರು ವ್ಯಂಗ್ಯಚಿತ್ರಕಾರರ ಸಂಘ ನಡೆದು ಬಂದ ಹಾದಿಯನ್ನು ನೆನಪು ಮಾಡಿಕೊಂಡರು.

ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿ, 'ವ್ಯಂಗ್ಯಚಿತ್ರ ಕ್ಷೇತ್ರದಲ್ಲಿ ಯುವ ತಲೆಮಾರು ಹೆಚ್ಚಿನ ಆಸಕ್ತಿ ವಹಿಸಲು ಸಾಧ್ಯವಾಗುವಂತೆ ವ್ಯಂಗ್ಯಚಿತ್ರ ಪ್ರದರ್ಶನ, ಸಂಕಿರಣ, ಕಮ್ಮಟಗಳನ್ನು ಆಯೋಜಿಸಲಾಗುವುದು' ಎಂದರು.


ವಾರ್ಷಿಕ ವ್ಯಂಗ್ಯಚಿತ್ರ ಪ್ರದರ್ಶನದಲ್ಲಿ ಜಿ. ಎನ್. ಮೋಹನ್ ಚಿತ್ರ ಬಿಡಿಸಿದರು

ಹಿರಿಯ ವ್ಯಂಗ್ಯಚಿತ್ರಕಾರರಾದ ಬಿ.ಜಿ. ಗುಜ್ಜಾರಪ್ಪ, ವಿ.ಆರ್. ಸಿ ಶೇಖರ್, ರಾಮಧ್ಯಾನಿ, ಎಚ್.ಬಿ. ಮಂಜುನಾಥ್. ಜೇಮ್ಸ್ ವಾಜ್ ಅವರನ್ನು ಸನ್ಮಾನಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಸ್. ನಾಗನಾಥ್, ಸಂಕೇತ ಗುರುದತ್ತ, ಎಂ. ವಿಶ್ವನಾಥ್ ಉಪಸ್ಥಿತರಿದ್ದರು.

ವ್ಯಂಗ್ಯಚಿತ್ರ ಪ್ರದರ್ಶನವು ಫೆ.9ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ನಡೆಯಲಿದೆ.

ನಿರ್ಮಾಪಕ ಶ್ರೀನಿವಾಸ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಚಿತ್ರ ನಿರ್ದೇಶಕ ಪ್ರೇಮ್ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದ ನಿರ್ಮಾಪಕ ಕನಕಪುರ ಆರ್.ಶ್ರೀನಿವಾಸ್ ವಿರುದ್ಧ ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿರ್ಮಾಪಕ ಶ್ರೀನಿವಾಸ್, ಇತ್ತೀಚೆಗೆ ಸಿನಿಮಾ ಸಂಬಂಧಿತ ಕಾರ್ಯಕ್ರಮದಲ್ಲಿ ಪ್ರೇಮ್ ಅವರನ್ನು ಅವಹೇಳನ ಮಾಡಿದ್ದರು. ಪ್ರೇಮ್ ಸಾಕಷ್ಟು ನಿರ್ಮಾಪಕರನ್ನು ಹಾಳು ಮಾಡಿದ್ದಾರೆ ಎಂದು ಸಾರ್ವಜನಿಕವಾಗಿ ಆರೋಪ ಮಾಡಿದ್ದ ಶ್ರೀನಿವಾಸ್, ಹಲವು ಚಿತ್ರ ನಟರ ವರ್ತನೆ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದ್ದರು.

ಇದರ ಬೆನ್ನಲ್ಲೇ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದ ಪ್ರೇಮ್, ಶ್ರೀನಿವಾಸ್ ವಿರುದ್ಧ ದೂರು ಕೊಟ್ಟಿದ್ದರು. ಶ್ರೀನಿವಾಸ್ ವಿರುದ್ಧ ಸಾರ್ವಜನಿಕ ಶಾಂತಿಭಂಗ, ಉದ್ದೇಶಪೂರ್ವಕ ಅವಮಾನ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ.

ಪ್ರೇಮ್ ದೂರಿನ ಸಾರಾಂಶ: 'ಚಿತ್ರ ನಿರ್ದೇಶಕನಾದ ನಾನು ಸಣ್ಣಪುಟ್ಟ ಚಲನಚಿತ್ರಗಳಲ್ಲಿ ನಟಿಸಿಕೊಂಡು ಹಾಗೂ ಹಲವು ಸಿನಿಮಾಗಳ ನಿರ್ದೇಶನ ಮಾಡಿ ಹಂತ ಹಂತವಾಗಿ ಬೆಳೆದಿದ್ದೇನೆ. ನನ್ನ ನಿರ್ದೇಶನದ ಚಲನಚಿತ್ರಗಳು ದೇಶದಾದ್ಯಂತ ಬಿಡುಗಡೆಯಾಗಿವೆ. ಈ ಮೂಲಕ ನನ್ನದೇ ಆದ ಜನಪ್ರಿಯತೆ ಹಾಗೂ ಗೌರವ ಸಂಪಾದಿಸಿಕೊಂಡು ಸಮಾಜದಲ್ಲಿ ಒಳ್ಳೆಯ ನಿರ್ದೇಶಕನಾಗಿ ಗೌರವಯುತ ಜೀವನ ನಡೆಸುತ್ತಿದ್ದೇನೆ. ಆದರೆ, ನಿರ್ಮಾಪಕ ಆರ್. ಶ್ರೀನಿವಾಸ್ ಅಲಿಯಾಸ್ ಕನಕಪುರ ಶ್ರೀನಿವಾಸ್ ಎಂಬವರು ತಮ್ಮ ಸಿನಿಮಾ ಬಿಡುಗಡೆಯ ಪತ್ರಿಕಾಗೋಷ್ಠಿಯಲ್ಲಿ ನನ್ನನ್ನು ವೈಯಕ್ತಿಕವಾಗಿ ಗುರಿಯಾಗಿಸಿ ಸಾರ್ವಜನಿಕ ವೇದಿಕೆಯಲ್ಲಿ ಅವಾಚ್ಯವಾಗಿ ನಿಂದಿಸಿದ್ದಾರೆ' ಎಂದು ಪ್ರೇಮ್ ಪೊಲೀಸರಿಗೆ ದೂರು ಕೊಟ್ಟಿದ್ದರು.

'ಸಾರ್ವಜನಿಕವಾಗಿ ನನಗೆ ನಿಂದಿಸಿ ಗೌರವಯುತ ವೃತ್ತಿ ಜೀವನಕ್ಕೆ ಧಕ್ಕೆ ತಂದಿರುವ ಹಾಗೂ ಮಾನಹಾನಿ ಮಾಡಿರುವ ಶ್ರೀನಿವಾಸ್‌ರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಪ್ರೇಮ್ ದೂರಿನಲ್ಲಿ ಕೋರಿದ್ದರು.

'ಪ್ರೇಮ್ ಊರಿನಲ್ಲಿ ಎಮ್ಮೆ, ಕುರಿ ಮೇಯಿಸುತ್ತಿದ್ದಿದ್ದು ಗೊತ್ತಿದೆ. ಪ್ರೇಮ್, ನಿರ್ಮಾಪಕರ ತಲೆ ಒಡೆದು ನೂರಾರು ಕೋಟಿ ಆಸ್ತಿ ಮಾಡಿ ಆರಾಮಾಗಿದ್ದಾರೆ. ಆತ ಸಿನಿಮಾ ಮಾಡಿದ ಯಾವೊಬ್ಬ ನಿರ್ಮಾಪಕನೂ ಉದ್ಧಾರ ಆಗಿಲ್ಲ' ಎಂದು ಶ್ರೀನಿವಾಸ್, ನಿರ್ದೇಶಕ ಪ್ರೇಮ್ ವಿರುದ್ಧ ಗಂಭೀರ ಆರೋಪ ಮಾಡಿದ್ದರು.

ಬ್ರೇಕ್ ವೈಫಲ್ಯ: ಹೋಟೆಲ್‌ಗೆ ಬಸ್ ಡಿಕ್ಕಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮಹಾಲಕ್ಷ್ಮಿ ಲೇಔಟ್‌ನ ಕಮಲಾ ನಗರದತ್ತ ಸಂಚರಿಸುತ್ತಿದ್ದ ಬಿಎಂಟಿಸಿ ಬಸ್‌ವೊಂದು ಬ್ರೇಕ್ ವೈಫಲ್ಯದಿಂದ ನಿಯಂತ್ರಣ ತಪ್ಪಿ ಮರ ಹಾಗೂ ಹೋಟೆಲ್‌ಗೆ ಡಿಕ್ಕಿ ಹೊಡೆದಿದೆ.

ಹಲವು ಪ್ರಯಾಣಿಕರಿಗೆ ಗಾಯಗಳಾಗಿದ್ದು, ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು.

ಇದೇ ವೇಳೆ ಬ್ರೇಕ್ ವೈಫಲ್ಯದಿಂದ ನಿಂತಿದ್ದ ಬಸ್‌ಗೆ ಹಿಂಬದಿಯಿಂದ ಬೈಕ್ ಹಾಗೂ ಕಾರು ಡಿಕ್ಕಿ ಹೊಡೆದ ಘಟನೆ ಸಹ ನಡೆದಿದೆ. ಯಾವುದೇ ಗಂಭೀರ ಅನಾಹುತ ಸಂಭವಿಸಿಲ್ಲ.

ಘಟನೆಯ ಮಾಹಿತಿ ತಿಳಿದ ಕೂಡಲೇ ಕ್ಷೇತ್ರದ ಶಾಸಕ ಕೆ. ಗೋಪಾಲಯ್ಯ ಅವರು ಸ್ಥಳಕ್ಕೆ ಭೇಟಿ ನೀಡಿ ಬಸ್‌ನಲ್ಲಿದ್ದ ಪ್ರಯಾಣಿಕರ ಯೋಗಕ್ಷೇಮ ವಿಚಾರಿಸಿದರು. ಅಲ್ಲದೇ ಸ್ಥಳಕ್ಕೆ ಬಿಎಂಟಿಸಿ ಅಧಿಕಾರಿಗಳನ್ನು ಕರೆಸಿ ಘಟನೆ ಸಂಬಂಧ ಮಾಹಿತಿ ಪಡೆದುಕೊಂಡರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ





‘ನೀರಾವರಿ ಯೋಜನೆ: ಕೇಂದ್ರದಿಂದ ನಿರ್ಲಕ್ಷ್ಯ’

ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ತಡೆ ಕಾಮಗಾರಿ ಶಂಕುಸ್ಥಾಪನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕಳಸಾ-ಬಂಡೂರಿ ನಾಲಾ ಯೋಜನೆ, ಭದ್ರಾ ಮೇಲ್ದಂಡೆ, ಕೃಷ್ಣಾ ಮೇಲ್ದಂಡೆ-3ನೇ ಹಂತದ ಯೋಜನೆ, ಮೇಕೆದಾಟು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಸಹಕರಿಸದೇ ನಿರ್ಲಕ್ಷ್ಯ ವಹಿಸಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಇಲ್ಲಿ ಆರೋಪಿಸಿದರು.

ತಾಲ್ಲೂಕಿನ ಶಿರಗುಪ್ಪಿಯಲ್ಲಿ ನಡೆದ ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ತಡೆ ಕಾಮಗಾರಿ ಶಂಕುಸ್ಥಾಪನೆ, ನವಲಗುಂದ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

‘2023-24ರ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನ ಘೋಷಿಸಿದ್ದರು. ಈವರೆಗೆ ಒಂದು ರೂಪಾಯಿ ಬಂದಿಲ್ಲ’ ಎಂದು ದೂರಿದರು.

‘ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಜ್ಯದ ಪ್ರಥಮ ರಾಷ್ಟ್ರೀಯ ನೀರಾವರಿ ಯೋಜನೆಯಾಗಿ ಘೋಷಿಸುತ್ತೇವೆ ಎಂದು ಬಜೆಟ್‌ನಲ್ಲೇ ಪ್ರಸ್ತಾಪಿಸಿದ್ದರು. ಅದೂ ಸಹ ಆಗಿಲ್ಲ’ ಎಂದು ದೂರಿದರು.

‘ಮಹದಾಯಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಪರಿಸರ ಇಲಾಖೆಯಿಂದ ಇಂದಿಗೂ ಅನುಮತಿ ಸಿಕ್ಕಿಲ್ಲ. ಅನುಮತಿ ದೊರೆತರೆ ನಾವು ನಾಳೆಯಿಂದಲೇ ಯೋಜನೆಯ ಕಾಮಗಾರಿ ಆರಂಭಿಸಲು ಸಿದ್ಧರಿದ್ದೇವೆ. ಆದರೆ, ಇದೂ ಕೂಡ ಆಗುತ್ತಿಲ್ಲ’ ಎಂದರು.

‘ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಹಂತ-3 ಅನುಷ್ಠಾನಕ್ಕೆ ಕೇಂದ್ರದ ಗೆಜೆಟ್ ಅಧಿಸೂಚನೆ ಬಾಕಿಯಿದೆ. ಇದರಿಂದ 3ನೇ ಹಂತದ ಯೋಜನೆ ಜಾರಿಗೆ ಅಡಚಣೆಯಾಗಿದೆ. ಇದಕ್ಕೂ ಕೇಂದ್ರವೇ ಕಾರಣ’ ಎಂದರು.

‘ಮೇಕೆದಾಟು ಯೋಜನೆ ವಿಚಾರವಾಗಿ ತಮಿಳುನಾಡು ಹಾಗೂ ಕೇಂದ್ರ ಸರ್ಕಾರ ಅನಗತ್ಯವಾಗಿ ರಾಜಕೀಯ ಮಾಡುತ್ತಿವೆ. ಈ ಯೋಜನೆಯಿಂದ ಎರಡೂ ರಾಜ್ಯಗಳಿಗೆ ಅನುಕೂಲ. ಇದಕ್ಕೂ ಕೇಂದ್ರದ್ದೇ ಅಡಚಣೆಯಿದೆ’ ಎಂದರು.

‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಈ ಕಾರ್ಯಕ್ರಮಕ್ಕೆ ಬಂದಿದ್ದರೆ, ಯೋಜನೆಗಳಿಗೆ ಯಾಕೆ ಹಿನ್ನಡೆ ಆಗಿದೆ ಎಂಬುದನ್ನು ಅವರಿಗೆ ನೇರವಾಗಿ ಕೇಳುತ್ತಿದ್ದೆ. ಆದರೆ, ಅವರು ಬಂದಿಲ್ಲ’ ಎಂದರು.

‘ವಿಬಿ ಜಿ ರಾಮ್ ಜಿ: ಶ್ರೀರಾಮ ಇಲ್ಲ’

‘ವಿಬಿ ಜಿ ರಾಮ್ ಜಿ’ ಯೋಜನೆಯಲ್ಲಿ ಶ್ರೀರಾಮನ ಹೆಸರಿದೆ ಎಂದು ಬಿಜೆಪಿಯವರು ಹೇಳುತ್ತಾರೆ. ಇದರ ಹೆಸರು ‘ವಿಕಸಿತ ಭಾರತ – ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ)’. ಇದರಲ್ಲಿ ಯಾವ ರಾಮನೂ ಇಲ್ಲ. ಕೌಶಲ್ಯ ರಾಮನೂ ಇಲ್ಲ. ದಶರಥ ರಾಮನೂ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಮನರೇಗಾ’ ಯೋಜನೆ ಪುನರ್ ಸ್ಥಾಪನೆ ಆಗುವವರೆಗೆ ನಾವು ಹೋರಾಟ ಮಾಡುತ್ತೇವೆ. ನಮ್ಮೊಂದಿಗೆ ನೀವು ಎಲ್ಲರೂ ಕೈಜೋಡಿಸಬೇಕು’ ಎಂದು ಸಭಿಕರಿಗೆ ಹೇಳಿದರು.

ಬೆಣ್ಣೆಹಳ್ಳ: ₹200 ಕೋಟಿ ಬಿಡುಗಡೆ

‘ಬೆಣ್ಣೆಹಳ್ಳ ಪ್ರವಾಹದಿಂದ ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿನ 37 ಗ್ರಾಮಗಳಿಗೆ ತೊಂದರೆ ಆಗುತ್ತಿತ್ತು. 20 ಸಾವಿರ ಹೆಕ್ಟೇರ್ ಪ್ರದೇಶದ ಬೆಳೆ ಹಾನಿ ಆಗುತ್ತಿತ್ತು. ಇದರ ತಪ್ಪಿಸಲು ಬೆಣ್ಣೆಹಳ್ಳ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಬಜೆಟ್‌ನಲ್ಲಿ ಘೋಷಿಸಿದಂತೆ ₹200 ಕೋಟಿ ಬಿಡುಗಡೆ ಮಾಡಿದ್ದೇನೆ. ಶಂಕುಸ್ಥಾಪನೆ ಮಾಡಲಾಗಿದೆ. ಕಾಮಗಾರಿ ಆರಂಭವೂ ಆಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಶಾಸಕರಾದ ಎಫ್‌.ಎಚ್‌.ಜಕ್ಕಪ್ಪನವರ, ಪ್ರಸಾದ್ ಅಬ್ಬಯ್ಯ, ಸಚಿವರಾದ ಸತೀಶ ಜಾರಕಿಹೊಳಿ, ಸಂತೋಷ ಲಾಡ್, ಎಚ್‌.ಕೆ.ಪಾಟೀಲ, ಶಾಸಕ ಎನ್‌.ಎಚ್‌.ಕೋನರಡ್ಡಿ, ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮ್ಮದ್ ಹಾಜರಿದ್ದರು

> **ಮಹದಾಯಿ ಯೋಜನೆ ರಾಜ್ಯ ಸರ್ಕಾರದಿಂದಲೇ ನಿಂತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮಾತನ್ನು ನಂಬಬೇಡಿ. ಅವರೊಬ್ಬ ಸುಳ್ಳುಗಾರ. ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಪ್ರಲ್ಹಾದ ಜೋಶಿ ಅವರೇ ನೀವು ಮಹದಾಯಿ ಯೋಜನೆ ಅನುಷ್ಠಾನಕ್ಕೆ ಕೇಂದ್ರದ ಪರಿಸರ ಇಲಾಖೆಯಿಂದ ಅನುಮತಿ ಕೊಡಿಸಬೇಕು. ಇಲ್ಲದಿದ್ದರೆ ನಮ್ಮ ಭಾಗದಲ್ಲಿ ಕಾಲಿಡಲು ನಿಮಗೆ ನೈತಿಕ ಹಕ್ಕಿಲ್ಲ**
> **ಎಚ್‌.ಕೆ.ಪಾಟೀಲ,** ಕಾನೂನು ಸಚಿವ

‘ಮುಖ್ಯಮಂತ್ರಿ, ಡಿಸಿಎಂ, ಹೈಕಮಾಂಡ್‌ಗೆ ಮಾತ್ರ ಗೊತ್ತು’

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ಬೆಂಗಳೂರು: ‘ಏನು ನಡೆದಿದೆ ಎಂಬುದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ಗೆ ಮಾತ್ರ ಗೊತ್ತಿದೆ. ಹೈಕಮಾಂಡ್ ಸುಮ್ಮನೆ ಇದ್ದರೆ ನಾವು ಏನೆಂದು ಅರ್ಥ ಮಾಡಿಕೊಳ್ಳುವುದು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

‘ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಎಂಬುದು ತೀರ್ಮಾನ ಆಗಿರುವ ವಿಚಾರ’ ಎಂದು ಡಾ. ಯತೀಂದ್ರ ಹೇಳಿಕೆ ವಿಚಾರವಾಗಿ ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ಅದು ಅವರ ವೈಯಕ್ತಿಕ ಹೇಳಿಕೆ’ ಎಂದರು.

‘ನಾವು ಹೈಕಮಾಂಡ್‌ಅನ್ನು ಅವಲಂಬಿಸಿದ್ದೇವೆ. ಅಧಿಕಾರ ಒಪ್ಪಂದ ಆಗಿದೆ ಎಂದು ಯಾರು ಹೇಳಿದ್ದು? ಹೈಕಮಾಂಡ್‌ನವರು ಹೇಳಿದ್ದಾರಾ? ಅದನ್ನು ಹೈಕಮಾಂಡ್ ಹೇಳಬೇಕು. ಅದರ ಬಗ್ಗೆ ಡಿ.ಕೆ. ಶಿವಕುಮಾರ್ ಹೇಳಿರಬಹುದು. ಅದು ಅವರ ಅಭಿಪ್ರಾಯ. ಅವರಿಗೆ ಗೊತ್ತಿರುವ ವಿಚಾರ ನಮಗೆ ಗೊತ್ತಿಲ್ಲ’ ಎಂದರು.

‘ಒಪ್ಪಂದ ಆಗಿದ್ದರೆ ಹೈಕಮಾಂಡ್ ಹೇಳಬಹುದು ಅಥವಾ ಕ್ರಮ ತೆಗೆದುಕೊಳ್ಳಬಹುದು. ಹೈಕಮಾಂಡ್ ಏನೂ ಹೇಳದೆ, ಏನೂ ತೀರ್ಮಾನ ಮಾಡದೆ ನಮಗೆ ಕೇಳಿದರೆ ಪ್ರಯೋಜನ ಇಲ್ಲ. ಹೈಕಮಾಂಡ್‌ಗೆ ಏನು ಮಾಡಬೇಕು, ಯಾವ ರೀತಿ ನಿಭಾಯಿಸಬೇಕೆಂದು ಗೊತ್ತಿದೆ. ಅಂತಿಮ ನಿರ್ಧಾರ ಹೈಕಮಾಂಡ್ ಮಾಡಬೇಕು. ಅನೇಕರು ಹೇಳಿಕೆಗಳನ್ನು ಕೊಡಬಹುದು. ಅವು ಹೇಳಿಕೆಗಷ್ಟೇ ಸೀಮಿತ. ಹೈಕಮಾಂಡ್ ಕರೆ ಬಂದರೆ ಮಾತ್ರ ಎಲ್ಲ ಇತ್ಯರ್ಥ ಆಗಲಿದೆ’ ಎಂದರು.

‘ಸಿ.ಎಂ ಆಗಲು ಎಲ್ಲರಿಗೂ ಆಸೆ ಇದೆ..’



ಎಂ.ಬಿ.ಪಾಟೀಲ

ವಿಜಯಪುರ: ‘ನಾನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಸ್ವಯಂ ಘೋಷಿಸಿಕೊಳ್ಳುವಷ್ಟು ಮೂರ್ಖನಲ್ಲ. ಯಾರೂ ಸನ್ಯಾಸಿಯಲ್ಲ. ಎಲ್ಲರಿಗೂ ಸಿ.ಎಂ ಆಗುವ ಆಸೆ ಇರುತ್ತದೆ’ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

‘ಯಾರು ಮುಖ್ಯಮಂತ್ರಿ ಎಂಬುದನ್ನು ಹೈಕಮಾಂಡ್ ನಿರ್ಧರಿಸಲಿದೆ. ಶಾಸಕರ ಅಭಿಪ್ರಾಯ ಪಡೆದು, ಅಂತಿಮ ನಿರ್ಣಯವನ್ನು ಹೈಕಮಾಂಡ್ ಕೈಗೊಳ್ಳುತ್ತದೆ’ ಎಂದರು.

ಚುಟುಕೆ ಸುದ್ದಿ

ಸ್ಕೂಟಿ ಡಿಕ್ಕಿ: ಒಂದೇ ಕುಟುಂಬದ ಮೂವರ ಸಾವು

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಹಳ್ಳಿಖೇಡ್ (ಬಿ) ಪಟ್ಟಣ ಸಮೀಪ ಭಾನುವಾರ ಸೇತುವೆಗೆ ಸ್ಕೂಟಿ ಡಿಕ್ಕಿ ಹೊಡೆದು ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದು, ಬಾಲಕನಿಗೆ ಗಂಭೀರ ಗಾಯವಾಗಿದೆ.

ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರ ಗ್ರಾಮದ ವೆಂಕಟ್ (40), ಅವರ ಪತ್ನಿ ಶಿಲ್ಪಾ (35), ಮಗಳು ರಕ್ಷಿತಾ (12) ಮೃತರು. ಗಾಯಗೊಂಡಿರುವ ಹಿರಿಯ ಮಗ ದಿಗಂಬರ್‌ನನ್ನು ಬ್ರಿಮ್ಸ್‌ಗೆ ದಾಖಲಿಸಲಾಗಿದೆ. ಕುಟುಂಬ ಸಮೇತರಾಗಿ ಬೀದರ್‌ನಿಂದ ಸ್ವಗ್ರಾಮಕ್ಕೆ ಹೋಗುವಾಗ ಅವಘಡ ಜರುಗಿದೆ.

ನೀಲ್‌ಗಾಯ್ ಸಾವು ಗಳಲೆ ರೋಗ ಕಾರಣ

ಗದಗ: ತಾಲ್ಲೂಕಿನ ಬಿಂಕದಕಟ್ಟಿ ಮೃಗಾಲಯದಲ್ಲಿ ಮೃತಪಟ್ಟಿದ್ದ ನೀಲ್‌ಗಾಯ್ ಪ್ರಾಣಿ ಸಾವಿಗೆ ಗಳಲೆ ರೋಗ (ಹೆಮರಾಜಿಕ್ ಸೆಪ್ಟಿಸೆಮಿಯಾ) ಕಾರಣ ಎಂಬುದು ವೈದ್ಯಕೀಯ ವರದಿಯಲ್ಲಿ ದೃಢಪಟ್ಟಿದೆ.

‘ನೀಲ್‌ಗಾಯ್ ಸಾವಿನ ಕಾರಣ ತುರ್ತು ಆರೋಗ್ಯ ಸಲಹಾ ಸಮಿತಿ ಸಭೆ ನಡೆಸಲಾಗಿದೆ. ಈ ರೋಗ ವೇಗವಾಗಿ ಹರಡುವ ಕಾರಣ ಮುನ್ನೆಚ್ಚರಿಕೆ ವಹಿಸಿದೆ’ ಎಂದು ಮೃಗಾಲಯದ ಆರ್‌ಎಫ್‌ಒ ಸ್ನೇಹಾ ಕೊಪ್ಪಳ ತಿಳಿಸಿದ್ದಾರೆ.

‘ತಜ್ಞರ ಸಲಹೆಯಂತೆ ಚುಕ್ಕೆ ಜಿಂಕೆ, ಕಡವೆ, ಕೃಷ್ಣಮೃಗ ಮತ್ತು ನೀಲ್‌ಗಾಯ್ ಪ್ರಾಣಿಗಳ ವಿಭಾಗಕ್ಕೆ ಜನರಿಗೆ ಒಂದು ವಾರ ಪ್ರವೇಶ ನಿರ್ಬಂಧಿಸಲಾಗಿದೆ. ಸದ್ಯ ಆತಂಕದ ಸ್ಥಿತಿ ಇಲ್ಲ’ ಎಂದು ತಿಳಿಸಿದರು.

ಮೂರೂವರೆ ವರ್ಷದ ನೀಲ್‌ಗಾಯ್ ಫೆ.3ರಂದು ಮೃತಪಟ್ಟಿತ್ತು. ಶವಪರೀಕ್ಷೆ ವರದಿ ಫೆ.7ರಂದು ಬಂದಿದೆ.

ತಕೈಚಿ ನೇತೃತ್ವದ ಮೈತ್ರಿಕೂಟಕ್ಕೆ ಬಹುಮತ?

ಟೋಕಿಯೊ (ಎಪಿ): ಭಾನುವಾರ ನಡೆದ ಸಂಸತ್ ಚುನಾವಣೆಯಲ್ಲಿ ಜಪಾನ್ ಪ್ರಧಾನಿ ಸನೇ ತಕೈಚಿ ನೇತೃತ್ವದ ಆಡಳಿತಾರೂಢ ಮೈತ್ರಿಕೂಟವು ಬಹುಮತ ಪಡೆಯುವುದು ನಿಚ್ಚಳವಾಗಿದೆ ಎಂದು ಎನ್‌ಎಚ್‌ಕೆ ಪಬ್ಲಿಕ್ ಟೆಲಿವಿಷನ್ ಸೇರಿದಂತೆ ಪ್ರಮುಖ ಮಾಧ್ಯಮ ಸಂಸ್ಥೆಗಳು ಅಂದಾಜಿಸಿವೆ.

ಚುನಾವಣೋತ್ತರ ಸಮೀಕ್ಷೆಯ ಫಲಿತಾಂಶವು ಹೊರಬಿದ್ದಿದ್ದು, ತಕೈಚಿ ಅವರ ಲಿಬರಲ್ ಡೆಮಾಕ್ರಟಿಕ್ ಪಕ್ಷದ ನೇತೃತ್ವದ ಮೈತ್ರಿಕೂಟವು ಮೂರನೇ ಎರಡಷ್ಟು ಕ್ಷೇತ್ರಗಳಲ್ಲಿ ವಿಜಯ ಸಾಧಿಸಲಿದೆ ಎಂದು ಎನ್‌ಎಚ್‌ಕೆ ಹೇಳಿದೆ.

ಎತ್ತಿನಬಂಡಿ ಓಟ

ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ



ಧಾರವಾಡ ತಾಲ್ಲೂಕಿನ ಗರಗ ಗ್ರಾಮದಲ್ಲಿ ಗುರು ಮಡಿವಾಳೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಭಾನುವಾರ ನಡೆದ ಖಾಲಿ ಗಾಡಿ ಓಟ ಸ್ಪರ್ಧೆಯಲ್ಲಿ ಎತ್ತುಗಳು ಗುರಿಯತ್ತ ಮುನ್ನುಗ್ಗಿದವು

ಪರಿಶ್ರಮದಿಂದ ಏಳಿಗೆ: ರಾಹುಲ್ ಕಿವಿಮಾತು

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಇತರರು ನಿಮ್ಮ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಆತಂಕಗೊಳ್ಳಬೇಡಿ, ಸರಿಯಾದ ಕೆಲಸ ಮಾಡಬೇಕು ಎಂಬುದಷ್ಟೇ ನಿಮ್ಮ ಆಲೋಚನೆಯಾಗಿರಲಿ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಯುವ ಸಮುದಾಯಕ್ಕೆ ಕಿವಿಮಾತು ಹೇಳಿದರು.

‘ನಿಮ್ಮ ಬಗ್ಗೆ ಜಗತ್ತು ಏನನ್ನಾದರೂ ಹೇಳಬಹುದು. ನೀವು ಯಾರು ಎಂಬುದನ್ನು ಹೇಳಲೂ ಪ್ರಯತ್ನಿಸಬಹುದು. ಆದರೆ ನಿಜವಾಗಿಯೂ ಮುಖ್ಯವಾದದ್ದು ಏನೆಂದರೆ, ನೀವು ಸತ್ಯದ ಹಾದಿಯಲ್ಲಿದ್ದೀರಿ ಎಂಬುದು ನಿಮಗೆ ಸ್ಪಷ್ಟವಾಗಿರಬೇಕು. ಜೀವನದಲ್ಲಿ ಹೀಗೆಯೇ ಆಗಬೇಕು ಎಂಬುದೇನೂ ಇರುವುದಿಲ್ಲ. ನಮ್ರತೆ ಮತ್ತು ಪರಿಶ್ರಮದಿಂದಲೇ ಏಳಿಗೆ ಸಾಧ್ಯ’ ಎಂದು ಅವರು ಸಲಹೆ ನೀಡಿದರು.



ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಎನ್‌ಆರ್‌ಐ ವಿದ್ಯಾರ್ಥಿಗಳ ಗುಂಪಿನ ಜತೆ ಸಂವಾದ ನಡೆಸಿದರು —ಪಿಟಿಐ ಚಿತ್ರ

ಎನ್‌ಆರ್‌ಐ ವಿದ್ಯಾರ್ಥಿಗಳ ಗುಂಪಿನ ಜತೆ ಸಂವಾದ ನಡೆಸಿದ ಅವರು ಯುವ ಜನರಲ್ಲಿನ ಆತಂಕ ಮತ್ತು ಸಮಸ್ಯೆಗಳ ಕುರಿತು ಚರ್ಚಿಸಿದರು. ಈ ಕುರಿತ ವಿಡಿಯೊವನ್ನು ಅವರು ಯೂಟ್ಯೂಬ್ ಚಾನೆಲ್‌ನಲ್ಲಿ ಹಂಚಿಕೊಂಡಿದ್ದಾರೆ.

ಆತ್ಮವಿಶ್ವಾಸದ ಕೊರತೆ, ತಮ್ಮನ್ನು ಇತರರು ನಿರ್ಣಯಿಸುವುದು ಹಾಗೂ ಅಭದ್ರತೆಗಳ ಕುರಿತು ತಾವು ಎದುರಿಸುತ್ತಿರುವ ಆತಂಕಗಳನ್ನು ವಿದ್ಯಾರ್ಥಿಗಳು ಈ ವೇಳೆ ರಾಹುಲ್ ಗಮನಕ್ಕೆ ತಂದರು.

‘ಸತ್ಯ ಮತ್ತು ಅಹಿಂಸೆ ಪ್ರಮುಖವಾದ ಮೌಲ್ಯಗಳಾಗಿದ್ದು, ಅವುಗಳನ್ನು ಪಾಲಿಸಿ. ಇತರರಿಗೆ ಅಥವಾ ನಿಮಗೆ ಹಿಂಸಾತ್ಮಕವಾಗಿ ಇರಬೇಡಿ. ಅದೇ ವೇಳೆ ಇತರರಿಗೆ ಮತ್ತು ನಿಮಗೆ ಸತ್ಯವಾಗಿರಿ. ಇದಿಷ್ಟಿದ್ದರೆ ಬೇರೆ ಅಗತ್ಯವಿರುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಶೋಭಾಯಾತ್ರೆಯಲ್ಲಿ ಕಾಂಗ್ರೆಸ್ ಶಾಸಕ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಹಿಂದೂ ಸಮಾಜೋತ್ಸವ ನಿಮಿತ್ತ ಭಾನುವಾರ ನಡೆದ ಶೋಭಾಯಾತ್ರೆಯಲ್ಲಿ ಕಾಂಗ್ರೆಸ್ ಶಾಸಕ ಬಾಬಾಸಾಹೇಬ ಪಾಟೀಲ, ಪಟ್ಟಣ ಪಂಚಾಯಿತಿ ಸದಸ್ಯರು, ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಕೊರಳಲ್ಲಿ ಕೇಸರಿ ಪಟ್ಟಿ ಧರಿಸಿಕೊಂಡು ಹೆಜ್ಜೆಹಾಕಿದರು.

ಜಾಂಝ್ ಪಥಕ, ಡೊಳ್ಳು ಕುಣಿತ, ಕಾರ್ಯಕರ್ತರ ಜಯಘೋಷಗಳ ಮಧ್ಯೆ ನಂದಿಕೋಲು ಮೆರವಣಿಗೆ ಸಾಗಿತು. ರಸ್ತೆಯುದ್ದಕ್ಕೂ ಕೇಸರಿ ಪರಪರಿ, ಧ್ವಜಕಟ್ಟಿ ಇಡೀ ಪಟ್ಟಣವನ್ನು ಅಂದಗೊಳಿಸಲಾಗಿತ್ತು.

ಶೋಭಾಯಾತ್ರೆಯಲ್ಲಿ ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಕೆಪಿಸಿಸಿ ಸದಸ್ಯೆ ರೋಹಿಣಿ ಪಾಟೀಲ, ಉತ್ತರ ಕರ್ನಾಟಕದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಹ ವ್ಯವಸ್ಥಾಪಕ ಪ್ರಮುಖ ಕೃಷ್ಣಾನಂದ ಕಾಮತ, ವಿಎಚ್‌ಪಿ ಮುಖಂಡ ಕೃಷ್ಣ ಭಟ್, ಸಾಗರ ಕಾಮಕರ, ಪ್ರತಿಭಾ ಉಣಕಲ್ಲಕರ, ರಾಷ್ಟ್ರೀಯ ಸ್ವಯಂಸೇವಕ ಸಂಘ, ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದ ಕಾರ್ಯಕರ್ತರು ಭಾಗವಹಿಸಿದ್ದರು.



ಚನ್ನಮ್ಮನ ಕಿತ್ತೂರಿನಲ್ಲಿ ಭಾನುವಾರ ನಡೆದ ಶೋಭಾಯಾತ್ರೆಯಲ್ಲಿ ಶಾಸಕ ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮತ್ತು ಮುಖಂಡರು ಪಾಲ್ಗೊಂಡಿದ್ದರು

ರಾಜ್ಯದಲ್ಲಿ ಕೇಂದ್ರ ವಲಯದ ಯೋಜನೆಗಳ ಮೊತ್ತ ₹15,000 ಕೋಟಿ ಹೆಚ್ಚಳ

ಏರುತ್ತಲೇ ಇದೆ ಯೋಜನಾ ವೆಚ್ಚ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ ವಲಯದ 70 ಮೂಲ ಸೌಕರ್ಯ ಯೋಜನೆಗಳ ಮೊತ್ತ ಸೆನ್ಸೆಕ್ಸ್‌ನಂತೆ ಜಿಗಿದು ₹15,000 ಕೋಟಿಗಳಷ್ಟು ಹೆಚ್ಚಾಗಿದೆ.

ರಾಜ್ಯದಲ್ಲಿ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿರುವುದರಿಂದ ವೆಚ್ಚ ತೀವ್ರಗತಿಯಲ್ಲಿ ಏರಿದೆ ಎಂದು ಕೇಂದ್ರ ಸಾಂಖ್ಯಿಕ ಹಾಗೂ ಯೋಜನೆಗಳ ಅನುಷ್ಠಾನ ಸಚಿವಾಲಯದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

₹150 ಕೋಟಿಗಿಂತ ಹೆಚ್ಚು ಮೊತ್ತದ ಹೆದ್ದಾರಿ, ನಗರಾಭಿವೃದ್ಧಿ, ರೈಲ್ವೆ ಸೇರಿದಂತೆ ವಿವಿಧ ವಲಯಗಳ ಯೋಜನೆಗಳ ವೆಚ್ಚ ₹1.40 ಲಕ್ಷ ಕೋಟಿಯಿಂದ ₹1.55 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ. ದೇಶದ ಎಲ್ಲ ರಾಜ್ಯಗಳಲ್ಲಿ ಕಾರ್ಯಗತಗೊಳ್ಳುತ್ತಿರುವ 1,392 ಯೋಜನೆಗಳ ಪ್ರಗತಿ ವರದಿಯನ್ನು ಸಚಿವಾಲಯ ಗುರುವಾರ ಬಿಡುಗಡೆ ಮಾಡಿದೆ.

ಭಾರಿ ವೆಚ್ಚ ಏರಿಕೆಯ ಸ್ಯಾಂಪಲ್‌ಗಳು


₹26,405 ಕೋಟಿಯಿಂದ ₹30,695 ಕೋಟಿ
‘ನಮ್ಮ ಮೆಟ್ರೊ’ ಎರಡನೇ ಹಂತ

₹770 ಕೋಟಿಯಿಂದ ₹1,606 ಕೋಟಿ
ತುಂಗಾ ಮೇಲ್ದಂಡೆ ಯೋಜನೆ


ರಾಜ್ಯದಲ್ಲಿ ಕಾರ್ಯಗತಗೊಳ್ಳುತ್ತಿರುವ ಯೋಜನೆಗಳು

ವಲಯ	ಯೋಜನೆಗಳು	ಮೂಲ ವೆಚ್ಚ (₹ಕೋಟಿಗಳಲ್ಲಿ)	ಪರಿಷ್ಕೃತ ವೆಚ್ಚ (₹ಕೋಟಿಗಳಲ್ಲಿ)
ರಿಯಲ್ ಎಸ್ಟೇಟ್	1	1701	1701
ಜಲಸಂಪನ್ಮೂಲ	1	770	1606
ವಿಮಾನಯಾನ	3	1143	1143
ನಗರ ಸಾರಿಗೆ	2	41,193	45,483
ತ್ಯಾಜ್ಯ ಮತ್ತು ನೀರು	2	338	338
ಆರೋಗ್ಯ	2	429	429
ಇಂಧನ ಸಂಗ್ರಹ	1	678	1732
ತೈಲ ಮತ್ತು ಅನಿಲ	5	9,662	12,693
ಶಿಪ್ಪಿಂಗ್	1	153	153
ವಿದ್ಯುತ್ ಮಾರ್ಗ	9	21,604	21,604
ರೈಲ್ವೆ	18	41,130	47,549
ಹೆದ್ದಾರಿ	24	20,248	19,697
ಉಕ್ಕು	1	1043	1043
ಒಟ್ಟು	70	1,40,095	1,55,171

ಉತ್ತರದ ರಾಜ್ಯಗಳಿಗೆ ಅಗ್ರಪಾಲು



ಎದ್ದೇಳಲು ಒದ್ದಾಡುತ್ತಿರುವ ಯೋಜನೆಗಳು



‘8,505 ಅಧಿಕಾರಿ ನಿಯೋಜಿಸಲು ಬದ್ಧ’

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಪೂರಕವಾಗುವಂತೆ 8,505 ಮಂದಿ ‘ಬಿ ಗ್ರೂಪ್’ ಅಧಿಕಾರಿಗಳನ್ನು ಒದಗಿಸಲು ಸಿದ್ಧವಿರುವುದಾಗಿ ಪಶ್ಚಿಮ ಬಂಗಾಳ ಸರ್ಕಾರವು ಕೇಂದ್ರ ಚುನಾವಣಾ ಆಯೋಗಕ್ಕೆ ಹೇಳಿದೆ.

ಜಾಹೀರಾತಿನಲ್ಲಿ ಗಾಂಧಿ ತತ್ವಗಳ ಹತ್ಯೆ: ವೂಡೇ ಪಿ.ಕೃಷ್ಣ

ಬೆಂಗಳೂರು: ‘ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ ಮಹಾತ್ಮ ಗಾಂಧಿ ಅವರ ಅಹಿಂಸಾ ತತ್ವ, ಸತ್ಯಾಗ್ರಹ ಮತ್ತು ಸರ್ವೋದಯ ಆಶಯಗಳಿಗೆ ವಿರುದ್ಧವಾದ ಜಾಹೀರಾತಿನಲ್ಲಿ ಗಾಂಧೀಜಿ ಅವರ ಚಿತ್ರ ಬಳಸಿಕೊಳ್ಳಲಾಗಿದೆ. ಇದರಿಂದ ಗಾಂಧೀಜಿ ಅವರ ಮೌಲ್ಯಗಳ ಹತ್ಯೆಯಾಗಿದೆ’ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಅವರು ಹೇಳಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಗಾಂಧೀಜಿ ಅವರ ತತ್ವಗಳನ್ನು ಅರಿತಿರುವ ಯಾರಿಗೇ ಆದರೂ, ಈ ಜಾಹಿರಾತು ಆಘಾತವನ್ನುಂಟು ಮಾಡುತ್ತದೆ. ಗಾಂಧೀಜಿ ಅವರನ್ನು ಈಚೆಗೆ ಕೆಲವು ರಾಜಕೀಯ ಪಕ್ಷಗಳು, ಸುದ್ದಿ ಮಾಧ್ಯಮಗಳು ರಾಜಕೀಯಕ್ಕೆ ಮತ್ತು ಅವಹೇಳನಕ್ಕೆ ಬಳಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದರಿಂದ ಯುವ ಜನತೆಗೆ ತಪ್ಪು ಸಂದೇಶ ಹೋಗುತ್ತದೆ’ ಎಂದು ಹೇಳಿದ್ದಾರೆ.

‘ಗಾಂಧೀಜಿ ಅವರ ತತ್ವಗಳನ್ನು ಎಲ್ಲರಿಗೂ ತಲುಪಿಸಲು ಸಾಧ್ಯವಾಗದೇ ಇದ್ದರೂ, ಕನಿಷ್ಠ ಅವರ ತತ್ವಗಳಿಗೆ ಅಪಚಾರವಾಗುವ ರೀತಿಯಲ್ಲಿ ನಡೆದುಕೊಳ್ಳಬಾರದು. ಗಾಂಧೀಜಿ ಅವರನ್ನು ಈ ರೀತಿ ದುರ್ಬಳಕೆ ಮಾಡಿಕೊಳ್ಳುವುದನ್ನು ಗಾಂಧಿ ಸ್ಮಾರಕ ನಿಧಿಯು ತೀವ್ರವಾಗಿ ಖಂಡಿಸುತ್ತದೆ’ ಎಂದಿದ್ದಾರೆ. ಪತ್ರಿಕಾ ಹೇಳಿಕೆಗೆ ನಿಧಿಯ ಗೌರವ ಕಾರ್ಯದರ್ಶಿ ಎಂ.ಸಿ.ನರೇಂದ್ರ ಅವರೂ ಸಹಿ ಮಾಡಿದ್ದಾರೆ.

‘ಕೃಷಿ ಕ್ಷೇತ್ರ: ರಾಜ್ಯಕ್ಕೆ ಕೇಂದ್ರದ ಬೆಂಬಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ಬೆಳೆಗಳ ವಿಚಾರದಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನ ಕಾಯ್ದುಕೊಂಡಿದೆ. ರಾಜ್ಯದಲ್ಲಿ ಕೃಷಿ ವಲಯವನ್ನು ಇನ್ನಷ್ಟು ಅಭಿವೃದ್ಧಿಪಡಿಸುವಲ್ಲಿ ಮೌಲ್ಯವರ್ಧನೆಗೆ ಒತ್ತು ನೀಡಬೇಕಿದ್ದು, ಕೇಂದ್ರ ಸರ್ಕಾರವು ಅದಕ್ಕೆ ಬೆಂಬಲ ನೀಡಲಿದೆ’ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ಕೃಷಿ ಇಲಾಖೆಯು ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಉತ್ಪಾದನೋತ್ತರ ಕೃಷಿ ಪರಿಕಲ್ಪನೆಯ ‘ಅಂತರರಾಷ್ಟ್ರೀಯ ವಾಣಿಜ್ಯ ಮೇಳ’ದಲ್ಲಿ ಅವರು ಮಾತನಾಡಿದರು.

‘ಕರ್ನಾಟಕದಲ್ಲಿ ಆರಂಭವಾದ ಸಿರಿಧಾನ್ಯ ಪರಿಕಲ್ಪನೆ ಈಗ ಇಡೀ ಜಗತ್ತಿನಲ್ಲಿ ಖ್ಯಾತವಾಗಿದೆ. ಇಲ್ಲಿನ ಕಾಫಿ, ತೆಂಗು, ಕೋಕೊ ಮತ್ತಿತರ ಬೆಳೆಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇದೆ. ಆದರೆ ರಾಜ್ಯದ ಉತ್ತರ ಭಾಗದಲ್ಲಿ ತೊಗರಿಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ಮೌಲ್ಯವರ್ಧನೆಯ ಕೊರತೆ ಇದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ರೈತರು ಯೋಚನೆ ಮಾಡಬೇಕು. ನಿಮ್ಮೊಂದಿಗೆ ನಾವು ನಿಲ್ಲುತ್ತೇವೆ’ ಎಂದರು.

> **ರೈತರನ್ನು ಕೃಷಿ ಉದ್ಯಮಿಗಳನ್ನಾಗಿಸಲು ಮತ್ತು ಕೃಷಿ ಆರ್ಥಿಕತೆಯನ್ನು ಬಲಪಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಸಮನ್ವಯದ ಅತ್ಯಗತ್ಯ**
> **ಚಲುವರಾಯಸ್ವಾಮಿ,** ಕೃಷಿ ಸಚಿವ

> **ರೈತರ ವಿಚಾರದಲ್ಲಿ ನಾವು ರಾಜಕೀಯ ಮಾಡುವುದಿಲ್ಲ. ಕರ್ನಾಟಕ ಸರ್ಕಾರ ಮತ್ತು ರೈತರ ಜತೆಗೆ ಕೇಂದ್ರ ಸರ್ಕಾರವು ಹೆಗಲುಕೊಟ್ಟು ನಿಲ್ಲಲಿದೆ**
> **ಶಿವರಾಜ್ ಸಿಂಗ್ ಚೌಹಾಣ್,** ಕೇಂದ್ರ ಕೃಷಿ ಸಚಿವ

‘ಕಡಿಮೆ ನೀರಿನಲ್ಲಿ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಭಿವೃದ್ಧಿಪಡಿಸಬೇಕು. ಅಂತಹ ತಳಿಗಳು ಇದ್ದರೆ, ರೈತರು ಅವುಗಳನ್ನು ಸಂಸ್ಕರಿಸಿ ಜತನ ಮಾಡಬೇಕು. ಇದಕ್ಕಾಗಿ ಬೀಜ ಗ್ರಾಮಗಳನ್ನು ಸ್ಥಾಪಿಸಬೇಕು. ಈ ಕಾರ್ಯದಲ್ಲಿ ತೊಡಗುವ ರೈತರಿಗೆ ₹10,000 ಪ್ರೋತ್ಸಾಹಧನ ನೀಡಲಾಗುವುದು’ ಎಂದು ಘೋಷಿಸಿದರು.

ಅನುಮೋದನಾ ಪತ್ರ ಹಸ್ತಾಂತರ: ‘2026-27ನೇ ಸಾಲಿನ ಬಜೆಟ್‌ನಲ್ಲಿ ರಾಷ್ಟ್ರೀಯ ಕೃಷಿ ಅಭಿವೃದ್ಧಿ ಯೋಜನೆಯ ಭಾಗವಾಗಿ ರಾಜ್ಯಕ್ಕೆ ₹191.67 ಕೋಟಿ ಹಂಚಿಕೆ ಮಾಡಲಾಗುತ್ತಿದೆ. ಇದರಲ್ಲಿ ಶೀಘ್ರವೇ ₹150 ಕೋಟಿಯನ್ನು ಬಿಡುಗಡೆ ಮಾಡುತ್ತೇವೆ’ ಎಂದು ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು. ಅನುದಾನ ಅನುಮೋದನಾ ಪತ್ರವನ್ನು ಚಲುವರಾಯಸ್ವಾಮಿ ಅವರಿಗೆ ಹಸ್ತಾಂತರಿಸಿದರು.

ಇದಕ್ಕೂ ಮುನ್ನ ಮಾತನಾಡಿದ ರಾಜ್ಯ ಕೃಷಿ ಸಚಿವ ಚಲುವರಾಯಸ್ವಾಮಿ, ‘ಕರ್ನಾಟಕ, ಕೇಂದ್ರದ ಕೃಷಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದೆ. ಕೃಷಿ ಕ್ಷೇತ್ರದಲ್ಲಿ ರಫ್ತು ಉತ್ತೇಜನ ಮತ್ತು ಮೂಲಸೌಕರ್ಯ ಅಭಿವೃದ್ಧಿಪಡಿಸುವಲ್ಲಿ ಕೇಂದ್ರ ಸರ್ಕಾರದ ನೆರವಿನ ಅಗತ್ಯವಿದೆ’ ಎಂದರು. ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು.



ಉತ್ಪಾದನೋತ್ತರ ಕೃಷಿ ಪರಿಕಲ್ಪನೆಯ ವಸ್ತು ಪ್ರದರ್ಶನದಲ್ಲಿ ಚಲುವರಾಯಸ್ವಾಮಿ, ಶಿವರಾಜ್ ಸಿಂಗ್ ಚೌಹಾಣ್ ಜೇನನ್ನು ಸವಿದರು. ಕೃಷಿ ಇಲಾಖೆ ಕಾರ್ಯದರ್ಶಿ ಸೆಲ್ವಕುಮಾರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಅಮೆರಿಕ-ಭಾರತ ವ್ಯಾಪಾರ ಒಪ್ಪಂದ ಸೇರಿ ಹಲವು ವಿಚಾರಗಳ ಪ್ರಸ್ತಾಪಕ್ಕೆ ವಿಪಕ್ಷಗಳು ಸಜ್ಜು

ಅಧಿವೇಶನ: ಮತ್ತೆ ಗದ್ದಲ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ–ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ಕುರಿತು ಪ್ರಸ್ತಾಪಿಸುವ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಚಾಟಿ ಬೀಸಲು ವಿರೋಧ ಪಕ್ಷಗಳು ಸಜ್ಜಾಗಿವೆ. ಹೀಗಾಗಿ, ಸೋಮವಾರದಿಂದ ಮತ್ತೆ ಆರಂಭವಾಗಲಿರುವ ಸಂಸತ್‌ನ ಬಜೆಟ್ ಅಧಿವೇಶನ ಕಾವೇರಿದ ಚರ್ಚೆ, ಗದ್ದಲಕ್ಕೆ ಸಾಕ್ಷಿಯಾಗುವ ಎಲ್ಲ ಸಾಧ್ಯತೆಗಳಿವೆ.

ಭಾರತವು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸುವ ಬಗ್ಗೆ ಅಮೆರಿಕ ನೀಡುತ್ತಿರುವ ಸೂಚನೆಗಳು, ಚೀನಾ ಜೊತೆಗಿನ ಸಂಘರ್ಷಕ್ಕೆ ಸಂಬಂಧಿಸಿ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಅಭಿಪ್ರಾಯಗಳ ಕುರಿತು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಶ್ನೆ ಕೇಳುವುದಕ್ಕೆ ಅವಕಾಶ ನೀಡದಿರುವ ವಿಚಾರವನ್ನು ಕೂಡ ವಿಪಕ್ಷಗಳು ಪ್ರಸ್ತಾಪಿಸುವ ನಿರೀಕ್ಷೆ ಇದೆ.

ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದವು ದೇಶದ ರೈತರ ಹಿತಾಸಕ್ತಿಗೆ ವಿರುದ್ಧವಾಗಿದೆ. ಈ ಕಾರಣಕ್ಕೆ ಈ ಒಪ್ಪಂದದ ವಿರುದ್ಧ ಅಧಿವೇಶನದಲ್ಲಿ ಧ್ವನಿ ಎತ್ತಲಾಗುವುದು ಎಂಬ ಸುಳಿವನ್ನು ವಿಪಕ್ಷಗಳ ನಾಯಕರು ನೀಡಿದ್ದಾರೆ. ಭಾರತವು ರಷ್ಯಾದಿಂದ ತೈಲ ಖರೀದಿ ವಿಚಾರವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಾರ್ಯಕಾರಿ ಆದೇಶ ಹೊರಡಿಸುತ್ತಿರುವ ಬಗ್ಗೆಯೂ ಪ್ರಶ್ನೆ ಎತ್ತಲಾಗುವುದು. ಟ್ರಂಪ್ ನಡೆ ಭಾರತದ ಸಾರ್ವಭೌಮತೆ ಮೇಲಿನ ದಾಳಿ ಎಂದೂ ವಿರೋಧ ಪಕ್ಷಗಳು ಹೇಳುತ್ತಿವೆ.

ಸುಗಮ ಕಲಾಪ ಸಂಶಯ?: ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆ ಕಳೆದ ಗುರುವಾರವೇ ಆರಂಭವಾಗಬೇಕಿತ್ತು. ವಿಪಕ್ಷಗಳ ಪ್ರತಿಭಟನೆಯಿಂದಾಗಿ ನಡೆಯಲಿಲ್ಲ.

‘ಸೋಮವಾರದಿಂದ ಆರಂಭವಾಗುವ ಕಲಾಪವು ಸುಗಮವಾಗಲು ಬಿಡುವಿರಾ’ ಎಂಬ ಪ್ರಶ್ನೆಗೆ, ‘ಈ ಬಗ್ಗೆ ನಾಳೆಯೇ ನಮಗೆ ಗೊತ್ತಾಗಲಿದೆ’ ಎಂದು ವಿರೋಧ ಪಕ್ಷದ ಹಿರಿಯ ನಾಯಕರೊಬ್ಬರು ಪ್ರತಿಕ್ರಿಯಿಸಿದರು.

ಚೀನಾದೊಂದಿಗಿನ ಸಂಘರ್ಷ ಕುರಿತಂತೆ ರಾಹುಲ್ ಗಾಂಧಿ ಅವರಿಗೆ ಮಾತನಾಡಲು ಅವಕಾಶ ನೀಡದ್ದನ್ನು ವಿರೋಧಿಸಿ ಕಾಂಗ್ರೆಸ್ ನೇತೃತ್ವದಲ್ಲಿ ವಿಪಕ್ಷಗಳ ಸಂಸದರು ಪ್ರತಿಭಟಿಸಿದರು. ಇದರಿಂದಾಗಿ, ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವಾರ ಲೋಕಸಭೆಯಲ್ಲಿ ಉತ್ತರ ನೀಡಲಿಲ್ಲ.

ರಾಹುಲ್ ಅವರಿಗೆ ಮಾತನಾಡಲು ಅವಕಾಶ ನೀಡದ್ದನ್ನು ಪ್ರತಿಭಟಿಸಿದ್ದಕ್ಕಾಗಿ 8 ಸಂಸದರನ್ನು ಅಮಾನತು ಮಾಡಲಾಗಿದೆ. ಈ ಕುರಿತ ಹೋರಾಟದಿಂದ ವಿಪಕ್ಷಗಳ ಸಂಸದರು ಹಿಂದೆ ಸರಿಯುವ ಸಾಧ್ಯತೆಯೂ ಕಡಿಮೆ.

ಬಜೆಟ್ ಅಧಿವೇಶನದ ಮೊದಲ ಹಂತವು ಇದೇ ಶುಕ್ರವಾರ ಅಂತ್ಯಗೊಳ್ಳಲಿದೆ. ನಂತರ, ವಿವಿಧ ಸಚಿವಾಲಯಗಳ ಬೇಡಿಕೆಗಳ ಕುರಿತು ಚರ್ಚೆ ನಡೆಯಲಿದ್ದು, ಏಪ್ರಿಲ್ 12ರಂದು ಅಧಿವೇಶನ ಮುಕ್ತಾಯವಾಗಲಿದೆ.

ನಗರದೊಳಗೆ ಬಾರದ ಮೆಮು

ಒಂದೂವರೆ ವರ್ಷದಿಂದ ವೈಟ್‌ಫೀಲ್ಡ್–ಬಂಗಾರಪೇಟೆ ನಡುವೆ ಮಾತ್ರ ಸಂಚಾರ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ನಿಲ್ದಾಣಕ್ಕೆ ಬರುತ್ತಿದ್ದ ಬೆಂಗಳೂರು–ಬಂಗಾರಪೇಟೆ ಮೆಮು ರೈಲು ಇತ್ತೀಚೆಗೆ ವೈಟ್‌ಫೀಲ್ಡ್‌ನಿಂದಲೇ ಹಿಂತಿರುಗುತ್ತಿರುವುದರಿಂದ ಬೆಂಗಳೂರಿನ ಪ್ರಯಾಣಿಕರಿಗೆ ಪ್ರಯೋಜನವಿಲ್ಲದಂತಾಗಿದೆ.

2017ರ ಜನವರಿಯಲ್ಲಿ ಬೆಂಗಳೂರು–ವೈಟ್‌ಫೀಲ್ಡ್ ನಡುವೆ ಮೆಮು ರೈಲು ಸಂಚಾರ ಆರಂಭಿಸಲಾಗಿತ್ತು. ಅದೇ ರೈಲನ್ನು 2019ರ ನವೆಂಬರ್ ನಂತರ ಬಂಗಾರಪೇಟೆಗೆ ವಿಸ್ತರಿಸಲಾಗಿತ್ತು. ಕೋವಿಡ್ ಕಾರಣದಿಂದ 2020ರಲ್ಲಿ ಸ್ಥಗಿತಗೊಂಡಿತ್ತು. ಸುಮಾರು ಎಂಟು ತಿಂಗಳ ಬಳಿಕ 2021 ಫೆ.1ಕ್ಕೆ ಮತ್ತೆ ಆರಂಭಿಸಲಾಗಿತ್ತು.

> ರೈಲ್ವೆಯ ವಿವಿಧ ಕಾಮಗಾರಿಗಳಿಗಾಗಿ ಮೆಮು ರೈಲು ತಾತ್ಕಾಲಿಕವಾಗಿ ವೈಟ್‌ಫೀಲ್ಡ್‌ನಿಂದ ಸಂಚರಿಸುತ್ತಿದೆ. ಪ್ರಯಾಣಿಕರ ಬೇಡಿಕೆಯನ್ನು ಪರಿಶೀಲಿಸಲಾಗುವುದು
> **ಮಂಜುನಾಥ ಕನಮಡಿ,** ನೈರುತ್ಯ ರೈಲ್ವೆ ಅಧಿಕಾರಿ

ಈ ರೈಲು ಬೆಂಗಳೂರು ಕಂಟೋನ್ಮೆಂಟ್, ಬೈಯಪ್ಪನಹಳ್ಳಿ, ಕೃಷ್ಣರಾಜಪುರ, ವೈಟ್‌ಫೀಲ್ಡ್, ದೇವನಗೊಂದಿ, ಮಾಲೂರು ಮತ್ತು ಟೇಕಲ್ ನಿಲ್ದಾಣಗಳಲ್ಲಿ ನಿಲ್ಲುತ್ತಿತ್ತು. ಕಂಟೋನ್ಮೆಂಟ್ ರೈಲು ನಿಲ್ದಾಣದ ನವೀಕರಣ ಮತ್ತು ಉನ್ನತೀಕರಣ ಕಾಮಗಾರಿ ಹಾಗೂ ಈ ಮಾರ್ಗದಲ್ಲಿ ನಾಲ್ಕು ಪಥದ ಹಳಿ ನಿರ್ಮಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬೆಂಗಳೂರು–ಬಂಗಾರಪೇಟೆ ರೈಲು ವೈಟ್‌ಫೀಲ್ಡ್–ಬಂಗಾರಪೇಟೆ ನಡುವೆ ಮಾತ್ರ ಸಂಚರಿಸಲು ರೈಲ್ವೆ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಒಂದೂವರೆ ವರ್ಷದಿಂದ ಈ ರೈಲು ಬೆಂಗಳೂರಿಗೆ ಪ್ರವೇಶಿಸುತ್ತಿಲ್ಲ.

‘ರೈಲ್ವೆಯವರು ಯಾವ ಕಾರಣಕ್ಕೆ ಈ ರೈಲನ್ನು ವೈಟ್‌ಫೀಲ್ಡ್‌ಗೆ ಸೀಮಿತಗೊಳಿಸಿದರು ಎಂಬುದು ಗೊತ್ತಾಗುತ್ತಿಲ್ಲ. ಕಾಮಗಾರಿ ಕಾರಣಕ್ಕೆ ರೈಲನ್ನು ನಗರಕ್ಕೆ ಬಾರದಂತೆ ತಡೆದಿರುವುದು ನಿಜವಾಗಿದ್ದರೆ ಉಳಿದ ಎಲ್ಲ ರೈಲುಗಳು ಸಂಚರಿಸುತ್ತಿವೆ. ಕಾಮಗಾರಿ ಇದೊಂದೇ ರೈಲಿಗೆ ಅಡ್ಡಿಯಾಗುತ್ತಿದೆಯೇ’ ಎಂದು ಪ್ರಯಾಣಿಕರ ಕರಿಬಸಪ್ಪ ಪ್ರಶ್ನಿಸಿದರು.



ಇದೇ ಮಾರ್ಗದಲ್ಲಿ ಬೆಂಗಳೂರಿನಿಂದ ಚೆನ್ನೈಗೆ ಬೃಂದಾವನ ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತಿದೆ. ಮಧ್ಯಾಹ್ನ 3.15ಕ್ಕೆ ಕೆಎಸ್‌ಆರ್‌ನಿಂದ ಹೊರಡುವ ಈ ರೈಲು ಕೆ.ಆರ್. ಪುರದಲ್ಲಿ ನಿಲುಗಡೆ ನೀಡಿ ಅನಂತರ ಬಂಗಾರಪೇಟೆಯಲ್ಲೇ ನಿಲ್ಲುತ್ತಿದೆ. ಮಧ್ಯೆ ಎಲ್ಲಿಯೂ ನಿಲುಗಡೆ ಇಲ್ಲದ ಕಾರಣ ಬೈಯಪ್ಪನಹಳ್ಳಿ, ವೈಟ್‌ಫೀಲ್ಡ್, ದೇವನಗೊಂದಿ, ಮಾಲೂರಿನಲ್ಲಿ ಇಳಿಯುವ, ಹತ್ತುವ ಪ್ರಯಾಣಿಕರಿಗೆ ಪ್ರಯೋಜನವಿಲ್ಲದಂತಾಗಿದೆ. ಈ ರೈಲನ್ನು ಬೆಂಗಳೂರು ಕೆಎಸ್‌ಆರ್‌ನಿಂದಲೇ ಓಡಿಸಬೇಕು ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಒತ್ತಾಯಿಸಿದ್ದಾರೆ.

ನಾಟಕ ನಿಲ್ಲಿಸಿ ಎಂಬ ಬರಹವಿದ್ದ ಟಿ– ಶರ್ಟ್ ಧರಿಸಿದ್ದ ತೇಜಸ್ವಿ ಸೂರ್ಯ

ಹೊಸ ದರ ನಿಗದಿ ಸಮಿತಿಗಾಗಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸಚಿವರೊಂದಿಗೆ ಮಾತನಾಡಿ, ಸದ್ಯಕ್ಕೆ ಮೆಟ್ರೊ ದರ ಹೆಚ್ಚಳವನ್ನು ನಿಲ್ಲಿಸಲಾಗಿದೆ. ದರ ನಿಗದಿ ಸಮಿತಿಯನ್ನು ಹೊಸದಾಗಿ ರಚಿಸಲು ರಾಜ್ಯ ಸರ್ಕಾರವು ಒತ್ತಾಯಿಸಬೇಕು’ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

‘ಮುಖ್ಯಮಂತ್ರಿಗಳೇ ನಾಟಕ ನಿಲ್ಲಿಸಿ’, ‘ದರ ಏರಿಕೆ ಬೇಡ’ ಎಂಬ ಘೋಷಣೆಗಳಿದ್ದ, ದರ ನಿರ್ಧಾರ ಸಮಿತಿಯ ವರದಿಯ ಆಯ್ದ ಭಾಗದ ವಿವರವನ್ನು ಹೊಂದಿದ ಟೀ-ಶರ್ಟ್ ಧರಿಸಿ ಆರ್.ವಿ. ರಸ್ತೆ ನಿಲ್ದಾಣಕ್ಕೆ ಬಂದಿದ್ದ ತೇಜಸ್ವಿ ಸೂರ್ಯ, ಮೆಟ್ರೊ ಪ್ರಯಾಣಿಕರೊಂದಿಗೆ ಭಾನುವಾರ ಸಂವಾದ ನಡೆಸಿದರು.



ತೇಜಸ್ವಿ ಸೂರ್ಯ ಅವರು ಮೆಟ್ರೊ ಪ್ರಯಾಣಿಕರೊಂದಿಗೆ ಸಂವಾದ ನಡೆಸಿದರು. ಬಿಜೆಪಿ ಮುಖಂಡ ಸೋಮಶೇಖರ್, ಸಿ.ಕೆ. ರಾಮಮೂರ್ತಿ ಉಪಸ್ಥಿತರಿದ್ದರು

‘ರಾಜ್ಯ ಸರ್ಕಾರವು ದರ ಹೆಚ್ಚಳ ಮಾಡಿದ್ದು, ಕೇಂದ್ರ ಸರ್ಕಾರದ ಕಡೆಗೆ ಬೊಟ್ಟು ಮಾಡುವುದನ್ನು ನಿಲ್ಲಿಸಬೇಕು. ಫೆ.9ರಿಂದ ದರ ಹೆಚ್ಚಿಸಲು ರಾಜ್ಯ ಸರ್ಕಾರ ಹೊರಟಿತ್ತು. ನನ್ನ ಒತ್ತಾಯದ ಮೇರೆಗೆ ಸರಿಯಾದ ಸಮಯದಲ್ಲಿ ಕೇಂದ್ರದ ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಖಟ್ಟರ್ ಹಸ್ತಕ್ಷೇಪ ಮಾಡಿದ್ದರಿಂದ ಜಯ ಸಿಕ್ಕಿದೆ. ಆದರೆ ಇದು ತಾತ್ಕಾಲಿಕ ಪರಿಹಾರ ಮಾತ್ರ’ ಎಂದು ಹೇಳಿದರು.

‘ಹಿಂದಿನ ಸರ್ಕಾರಗಳು ಮಾಡಿದಂತೆ ರಾಜ್ಯ ಸರ್ಕಾರವು ಮೆಟ್ರೊಗೆ ಶ್ಯಾಡೋ ಕ್ಯಾಶ್ ಸಹಾಯವನ್ನು ಪುನಃ ನೀಡಬೇಕು. ನ್ಯಾಯಸಮ್ಮತ, ವೈಜ್ಞಾನಿಕ ಹಾಗೂ ಪಾರದರ್ಶಕವಾಗಿ ದರ ಪರಿಷ್ಕರಣೆಗೆ ಹೊಸ ಸಮಿತಿಯನ್ನು ಪುನರ್‌ರಚಿಸಲು ಮುಂದಾಗಬೇಕು’ ಎಂದು ಆಗ್ರಹಿಸಿದರು.

‘ಸಂಚಾರ ಸಮಸ್ಯೆ ಎದುರಿಸುತ್ತಿರುವ ಬೆಂಗಳೂರಿನಲ್ಲಿ ಕೈಗೆಟುಕುವ ಸಾರ್ವಜನಿಕ ಸಾರಿಗೆಗಾಗಿ ನಮ್ಮ ಹೋರಾಟ ಮುಂದುವರಿಯುತ್ತದೆ’ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು. ಶಾಸಕ ಸಿ.ಕೆ.ರಾಮಮೂರ್ತಿ ಉಪಸ್ಥಿತರಿದ್ದರು.

ಚಿಟಿಕೆ ಸುದ್ದಿ

ಹೇಮಂತ್‌ಗೆ ಕಸಾಪ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2024ನೇ ಸಾಲಿನ ‘ದಿವಂಗತ ಶ್ರೀಮತಿ ಕೆ.ವಿ.ರತ್ನಮ್ಮ ದತ್ತಿ ಪ್ರಶಸ್ತಿ’ಗೆ ಹೇಮಂತ್ ಕೆ. ಲಿಂಗಪ್ಪ ಅವರ ‘ಮತ್ತೆ ಮತ್ತೆ ಮಳೆ’ ಕವನ ಸಂಕಲನ ಆಯ್ಕೆಯಾಗಿದೆ.



ಹೇಮಂತ್

ಹೇಮಂತ್ ಅವರು ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇಲ್ಲದ ಆನೆಗಳಿಗಾಗಿ ಹುಡುಕಾಟ

ಕನಕಪುರ: ಕಾಡಿನಿಂದ 40 ಆನೆಗಳ ಹಿಂಡು ನಾಡಿಗೆ ಬಂದಿದೆ ಎಂದು ಭಾನುವಾರ ಬೆಳಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊ ರೈತರನ್ನು ಭಯಭೀತಗೊಳಿಸಿತ್ತು.

ತಾಲ್ಲೂಕಿನ ಗಡಿ ಗ್ರಾಮವಾದ ಕೋಡಿಹಳ್ಳಿ ಹೋಬಳಿ ಕೊಳಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡುಶಿವನಹಳ್ಳಿ ಗ್ರಾಮದಲ್ಲಿ 40 ಕಾಡಾನೆಗಳು ಬೆಳಗ್ಗೆ ದಿಢೀರ್ ಪ್ರತ್ಯಕ್ಷವಾಗಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಇದರಿಂದ ಆತಂಕಗೊಂಡ ರೈತರು ಭಯದಿಂದ ಕಾಡಾನೆಗಳು ದೊಡ್ಡ ಸಂಖ್ಯೆಯಲ್ಲಿ ತಮ್ಮ ಗ್ರಾಮಗಳ ಸುತ್ತಮುತ್ತ ಬಂದಿವೆ ಎಂದು ಅರಣ್ಯ ಅಧಿಕಾರಿಗಳಿಗೆ ಮಾಹಿತಿ ನೀಡಿ ಆನೆಗಳನ್ನು ಮತ್ತೆ ಕಾಡಿಗೆ ಓಡಿಸಬೇಕೆಂದು ಒತ್ತಾಯ ಮಾಡಿದರು.

ಅರಣ್ಯ ಅಧಿಕಾರಿಗಳ ತಂಡವು ಕರ್ನಾಟಕದ ಗಡಿ ಉದ್ದಕ್ಕೂ ಸಿಬ್ಬಂದಿಯೊಂದಿಗೆ ಬೆಳಗ್ಗೆಯಿಂದಲೇ ಆನೆಗಳ ಪತ್ತೆಗಾಗಿ ಕಾರ್ಯಾಚರಣೆ ಶುರು ಮಾಡಿತು. ಆದರೆ ಅವರಿಗೆ ಆನೆಗಳು ಬಂದಿರುವ ಸುಳಿವು ಎಲ್ಲಿಯೂ ಸಿಗದಿದ್ದರಿಂದ ಗೊಂದಲಕ್ಕೆ ಒಳಗಾಗಿ ಜಾಲತಾಣದಲ್ಲಿ ಹರಿದಾಡಿದ ವಿಡಿಯೊ ಪರಿಶೀಲನೆ ಮಾಡಿದಾಗ ಅದು ಎರಡು ವರ್ಷಗಳ ಹಿಂದಿನ ಹಳೆ ವಿಡಿಯೊ ಎಂದು ಗೊತ್ತಾಗಿದೆ.

ಎಸ್‌ಜೆಎಸ್ ವಾಗ್ದೇವಿ ಕೇಂದ್ರದಿಂದ 30ನೇ ವಾರ್ಷಿಕೋತ್ಸವ ಆಚರಣೆ

‘ಮಕ್ಕಳಲ್ಲಿನ ವಾಕ್‌ಶ್ರವಣ ಸಮಸ್ಯೆ ಗುರುತಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಿದುಳು ಸಮರ್ಪಕವಾಗಿ ಅಭಿವೃದ್ಧಿ ಹೊಂದದಿರುವುದೂ ಸೇರಿ ವಿವಿಧ ಕಾರಣಗಳಿಂದ ಮಕ್ಕಳಲ್ಲಿ ವಾಕ್-ಶ್ರವಣ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಈ ಸಮಸ್ಯೆಯನ್ನು ಬೇಗ ಗುರುತಿಸಿದಲ್ಲಿ ಯಶಸ್ವಿ ಚಿಕಿತ್ಸೆ ಸಾಧ್ಯವಾಗಲಿದೆ’ ಎಂದು ಮೈಸೂರಿನ ಮಾನಸ ಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಎಂ. ಪುಷ್ಪಾವತಿ ಹೇಳಿದರು.

ಎಸ್.ಜಿ.ಎಸ್. ವಾಗ್ದೇವಿ ಕೇಂದ್ರ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 30ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ‘ಮಗು ಜನಿಸಿದ ಬಳಿಕ ಶ್ರವಣ ಪರೀಕ್ಷೆ ಮಾಡಿಸಬೇಕು. ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಯನ್ನು ಪಾಲಕರು ಕಡೆಗಣಿಸಬಾರದು. ಕೇಳಿಸಿಕೊಳ್ಳಲು ಹಾಗೂ ಮಾತನಾಡಲು ಕಷ್ಟಪಡುತ್ತಿರುವ ಮಕ್ಕಳನ್ನು ಸಮೀಪದ ವಾಕ್-ಶ್ರವಣ ಸಂಸ್ಥೆಗೆ ಶಿಫಾರಸು ಮಾಡಬೇಕು. ಇದರಿಂದ ಅವರಿಗೆ ಅಗತ್ಯ ಚಿಕಿತ್ಸೆ ಒದಗಿಸಲು ಸಾಧ್ಯವಾಗಲಿದೆ’ ಎಂದರು.



ಕಾರ್ಯಕ್ರಮದಲ್ಲಿ ದೊಡ್ಡಗುಡ್ಡಯ್ಯ ಮತ್ತು ಕೆ. ಮಾರುತಿ ಕೃಷ್ಣ ಗೌಡ್ ಅವರಿಗೆ ‘ಡಾ. ಶಾಂತ ರಾಧಾಕೃಷ್ಣ ದತ್ತಿ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಎಂ. ಪುಷ್ಪಾವತಿ, ಶಾಂತ ರಾಧಾಕೃಷ್ಣ ಮತ್ತು ಡಿ.ಆರ್. ಅಶೋಕ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕ ಅಶೋಕ್ ಡಿ.ಆರ್., ‘ಅಂಗವಿಕಲರಿಗೆ ಎಲ್ಲ ರೀತಿಯ ಸೌಲಭ್ಯ ಒದಗಿಸಿಕೊಡಲು ನಾವು ಶ್ರಮಿಸಬೇಕು. ಮಗು ಹುಟ್ಟಿದ ಆರು ತಿಂಗಳಲ್ಲಿ ಶ್ರವಣ ಸಮಸ್ಯೆ ಗುರುತಿಸಿ ಚಿಕಿತ್ಸೆ ಒದಗಿಸಬೇಕು. ವಾಕ್, ಶ್ರವಣ ಥೆರಪಿಯಿಂದ ಮಗು ಸಮಾಜದಲ್ಲಿ ಗೌರವಯುತವಾಗಿ, ಸ್ವಾವಲಂಬಿಯಾಗಿ ಬೆಳೆಯಲು ಸಾಧ್ಯ’ ಎಂದರು.

ವೈದ್ಯ ಸಾಹಿತಿ ಡಾ.ನಾ. ಸೋಮೇಶ್ವರ, ‘ನಾನಾ ಕಾರಣಗಳಿಂದ ಮಕ್ಕಳಲ್ಲಿ ವಾಕ್-ಶ್ರವಣ ಸಮಸ್ಯೆ ಕಾಣಿಸಿಕೊಳ್ಳಲಿದೆ. ಗರ್ಭಾವಸ್ಥೆಯಲ್ಲಿ ವೈದ್ಯರ ಸಲಹೆ ಪಡೆಯದೆ ಮಾತ್ರೆಗಳನ್ನು ಸೇವಿಸುವುದರಿಂದ, ಮಗುವಿನ ಶ್ರವಣ ಸಾಮರ್ಥ್ಯ ಕುಗ್ಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಗರ್ಭಾವಸ್ಥೆಯಲ್ಲಿ ಹೆಚ್ಚು ಔಷಧ ಪಡೆಯಬಾರದು. ಈಗಾಗಲೇ ಒಂದು ಮಗು ವಾಕ್-ಶ್ರವಣ ಸಮಸ್ಯೆ ಎದುರಿಸುತ್ತಿದ್ದಲ್ಲಿ, ಎರಡನೇ ಮಗು ಪಡೆಯುವ ಮೊದಲು ವೈದ್ಯರ ಸಲಹೆ ಪಡೆಯಬೇಕು. ರಕ್ತ ಸಂಬಂಧದಲ್ಲಿ ವಿವಾಹವಾಗುವುದರಿಂದ ಶ್ರವಣಕ್ಕೆ ಸಂಬಂಧಿಸಿದ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ’ ಎಂದರು.

ಇದೇ ವೇಳೆ ದೊಡ್ಡಗುಡ್ಡಯ್ಯ ಹಾಗೂ ಕೆ. ಮಾರುತಿ ಕೃಷ್ಣ ಗೌಡ್ ಅವರಿಗೆ ‘ಡಾ. ಶಾಂತ ರಾಧಾಕೃಷ್ಣ ದತ್ತಿ ಪ್ರಶಸ್ತಿ’ಯನ್ನು ಪ್ರದಾನ ಮಾಡಲಾಯಿತು. ಮೈಸೂರಿನ ಅವಧೂತ ದತ್ತ ಪೀಠದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಎಸ್‌ಜಿಎಸ್ ವಾಗ್ದೇವಿ ಟ್ರಸ್ಟ್ ಸ್ಥಾಪಕಿ ಡಾ. ಶಾಂತ ರಾಧಾಕೃಷ್ಣ ಉಪಸ್ಥಿತರಿದ್ದರು. ಎಸ್.ಜಿ.ಎಸ್. ವಾಗ್ದೇವಿ ಶಾಲೆಯ ಮಕ್ಕಳು ನಾಟಕ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಪಡಿಸಿದರು.

‘ಮೆಟ್ರೊ ಪ್ರಯಾಣ ದರ; ಅನವಶ್ಯ ಗೊಂದಲ ಸೃಷ್ಟಿ’

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ‘ಮೆಟ್ರೊ ಪ್ರಯಾಣ ದರ ಏರಿಕೆ ವಿಚಾರದಲ್ಲಿ ರಾಜ್ಯ ಸರ್ಕಾರ ಅನವಶ್ಯ ಗೊಂದಲ ಸೃಷ್ಟಿ ಮಾಡುತ್ತಿದೆ’ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ದೂರಿದರು.

‘ಕಾಂಗ್ರೆಸ್‌ನವರು ಮೆಟ್ರೊ ಯೋಜನೆಯನ್ನು ವಿರೋಧಿಸಿದ್ದರು. ಬಿಳಿ ಆನೆ ಎಂದು ದೂರಿದ್ದರು. ಈಗ ನಿತ್ಯವೂ ಐದಾರು ಲಕ್ಷ ಜನ ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದಾರೆ. ರಾಜ್ಯ ಸರ್ಕಾರ ಪ್ರಯಾಣ ದರ ಏರಿಸಲು ಮುಂದಾಗಿತ್ತು. ಇದಕ್ಕೆ ಕೇಂದ್ರ ಸರ್ಕಾರ ತಾತ್ಕಾಲಿಕ ತಡೆ ನೀಡಿದೆ. ತಾನು ಯಾವುದೇ ಆದೇಶ ಹೊರಡಿಸಿಲ್ಲ ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಆದೇಶ ಲಿಖಿತ ರೂಪದಲ್ಲಷ್ಟೇ ಇರುವುದಿಲ್ಲ. ಸಂಬಂಧಿಸಿದ ಅಧಿಕಾರಿಗಳು ಮೌಖಿಕವಾಗಿಯೂ ಹೇಳಿರುತ್ತಾರೆ’ ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

> **‘ಕೇಂದ್ರ- ರಾಜ್ಯ ಸೇರಿ ನಿರ್ಧಾರ’**
>
> **ಬೆಂಗಳೂರು:** ‘ಮೆಟ್ರೊ ದರ ಬಗ್ಗೆ ಪದೇ ಪದೇ ಗೊಂದಲ ಆಗುತ್ತದೆ. ಕೇಂದ್ರ, ರಾಜ್ಯ ಸೇರಿ ಮಾಡುವ ನಿರ್ಧಾರವಿದು. ಈಗ ದರ ಏರಿಕೆಗೆ ಕೇಂದ್ರ ತಡೆ ನೀಡಿದೆ. ಮುಂದೆ ಏನು ಮಾಡಬೇಕೆಂದು ಎರಡೂ ಕಡೆಯವರು ಚರ್ಚೆ ಆಗಿ ತೀರ್ಮಾನವಾಗುತ್ತದೆ. ದರ ನಿಗದಿ ಸಮಿತಿಗೆ ಸ್ವಾಯತ್ತತೆ ನೀಡಲಾಗಿದೆ’ ಎಂದು ಗೃಹ ಸಚಿವ ಪರಮೇಶ್ವರ ಹೇಳಿದರು.

‘ನಿವೃತ್ತ ಅಧಿಕಾರಿಗಳನ್ನು ಕಟ್ಟಿಕೊಂಡು ರಾಜ್ಯ ಸರ್ಕಾರ ಆಡಿದ್ದೇ ಆಟವಾಗಿದೆ. ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಏನೇನೋ ಹೇಳುತ್ತಿದ್ದಾರೆ. ಇದು ಒಳ್ಳೆಯದಲ್ಲ’ ಎಂದರು.

ಚಿತ್ರಾವಳಿ



ಮೈಂಡ್ ಬ್ಲೂ ಕಂಪನಿಯ ಮಾಲೀಕ ಸೆಂಥಿಲ್ ಕುಮಾರ್ ಹಾಗೂ ಪ್ರಗತಿ ಅಡ್ವರ್‌ಟೈಸರ್ಸ್ ಸಂಸ್ಥೆಯ ಎಚ್.ಎನ್. ಯೋಗೇಶ್ ನೇತೃತ್ವದಲ್ಲಿ ಲಂಡನ್‌ನ ಹೌಸ್ ಆಫ್ ಕಾಮನ್ಸ್‌ನಲ್ಲಿ (ಪಾರ್ಲಿಮೆಂಟ್) ಆಯೋಜಿಸಿದ್ದ ಸಮಾರಂಭದಲ್ಲಿ ವಿವಿಧ ಕ್ಷೇತ್ರದ 25ಕ್ಕೂ ಹೆಚ್ಚು ಸಾಧಕರಿಗೆ ಪ್ರಶಸ್ತಿ ನೀಡಲಾಯಿತು. ಲಂಡನ್‌ನಲ್ಲಿ ನಾಲ್ಕು ಬಾರಿ ಸಂಸದರಾಗಿರುವ ವಿಜೇಂದ್ರಶರ್ಮಾ, ಮಂಡ್ಯ ಕ್ಷೇತ್ರದ ಶಾಸಕ ರವಿಕುಮಾರ್ ಗಣಿಗ ಭಾಗವಹಿಸಿದ್ದರು



ಸುಕೃತಿ ನಾಟ್ಯಾಲಯ ಭಾನುವಾರ ಪ್ರಭಾತ್ ಕಲಾ ಸಂಭ್ರಮ ಸಭಾಂಗಣದಲ್ಲಿ ಆಯೋಜಿಸಿದ್ದ ವೈಷ್ಣವಾಂಜಲಿ ಕಾರ್ಯಕ್ರಮದಲ್ಲಿ ವೈಷ್ಣವಿ ಆಚಾರ್ಯ ಅವರು ಭರತನಾಟ್ಯ ರಂಗಪ್ರವೇಶ ಮಾಡಿದರು ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳು, ಪೋಷಕರಿಗೆ ಪುಷ್ಪವೃಷ್ಟಿ

ಅತ್ತಿಬೆಲೆ(ಆನೇಕಲ್): ತಾಲ್ಲೂಕಿನ ಅತ್ತಿಬೆಲೆಯ ಶಾರದ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಶನಿವಾರ ನಡೆದ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರ ಮೇಲೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು.

ಹೆಲಿಕಾಪ್ಟರ್ ಬರುತ್ತಿದ್ದಂತೆ ವಿದ್ಯಾರ್ಥಿಗಳು ಮತ್ತು ಪೋಷಕರ ಸಂಭ್ರಮ ಮುಗಿಲುಮುಟ್ಟಿತ್ತು. ಗುಲಾಬಿ ಸೇರಿದಂತೆ ವಿವಿಧ ಬಗೆಯ ಹೂವುಗಳನ್ನು ಹೆಲಿಕಾಪ್ಟರ್‌ನಿಂದ ಸುರಿಯುವ ಮೂಲಕ ಗೌರವ ಸಲ್ಲಿಸಲಾಯಿತು. ಪುಟಾಣಿ ಮಕ್ಕಳನ್ನು ಪೋಷಕರು ತಮ್ಮ ಮೇಲೆ ಕೂರಿಸಿಕೊಂಡು ಹೆಲಿಕಾಪ್ಟರ್ ತೋರಿಸಿ ಖುಷಿಪಟ್ಟರು. ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ವಿನೂತನ ರೀತಿಯಲ್ಲಿ ಗೌರವ ಸೂಚಿಸಬೇಕು ಎಂಬ ಕಾರಣಕ್ಕಾಗಿ ಹೆಲಿಕಾಪ್ಟರ್ ನಲ್ಲಿ ಪುಷ್ಪವೃಷ್ಟಿ ಮಾಡಿಸಲಾಗಿದೆ.

‘ಸಂಶೋಧನೆ ಬೌದ್ಧಿಕಯಾನ’

ವಿಚಾರಸಂಕಿರಣದಲ್ಲಿ ರಹಮತ್ ತರೀಕೆರೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಶೋಧನೆಯು ಸಾಮಾಜಿಕ ಜವಾಬ್ದಾರಿಯುಳ್ಳ ಬೌದ್ಧಿಕ ಯಾನವಾಗಿದೆ. ಆದ್ದರಿಂದ ಸಂಶೋಧನಾರ್ಥಿಗಳು ಮುಕ್ತ ಮನಸ್ಸಿನಿಂದ ಸಂಶೋಧನೆಗೆ ತೊಡಗಬೇಕು’ ಎಂದು ಸಾಹಿತಿ ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ಕನ್ನಡ ಸಂಶೋಧನ ಅಕಾಡೆಮಿಯು ಪ್ರಥಮ ವಾರ್ಷಿಕೋತ್ಸವ ಅಂಗವಾಗಿ ‘ಸಮಕಾಲೀನ ಕನ್ನಡ ಸಂಶೋಧನೆಯ ಚಹರೆಗಳು ಮತ್ತು ಸಾಧ್ಯತೆಗಳು’ ಹಾಗೂ ‘ಬಾನು ಮುಷ್ತಾಕ್ ಅವರ ಕಥನ ಸಾಹಿತ್ಯದ ತಾತ್ವಿಕತೆ’ ವಿಷಯದ ಕುರಿತು ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿಚಾರಸಂಕಿರಣ ಉದ್ಘಾಟಿಸಿ, ಮಾತನಾಡಿದರು.



ಗಿಡಕ್ಕೆ ನೀರೆರೆಯುವ ಮೂಲಕ ರಹಮತ್ ತರೀಕೆರೆ ಅವರು ಕಾರ್ಯಕ್ರಮ ಉದ್ಘಾಟಿಸಿದರು. ನಾಗರಾಜ ತಲಘಟ್ಟಪುರ, ರಂಗನಾಥ ಕಂಟನಕುಂಟೆ, ಸರ್ಜಾಶಂಕರ್ ಹರಳಿಮಠ, ರವಿಕುಮಾರ ಪಿ.ಜಿ., ನಾಗೇಶ್ ಎನ್., ಕುಪ್ಪನಹಳ್ಳಿ ಎಂ. ಭೈರಪ್ಪ ಉಪಸ್ಥಿತರಿದ್ದರು

‘ಎಲ್ಲಿ ಜ್ಞಾನವಿರುವುದೋ ಅಲ್ಲಿಗೆ ನಾವೇ ಹೋಗಿ ನಮ್ಮ ಬೌದ್ಧಿಕತೆಯನ್ನು ಹೆಚ್ಚಿಸಿಕೊಳ್ಳಬೇಕು. ನಿಜವಾದ ಸಂಶೋಧನೆ ಆರಂಭವಾಗುವುದೇ ಪಿಎಚ್‌.ಡಿ ನಂತರ. ಪಿಎಚ್‌.ಡಿ ಎಂಬುದು ತರಬೇತಿ ಮಾತ್ರವಾಗಿರುತ್ತದೆ. ಆದರೆ, ಅನೇಕರು ಪಿಎಚ್‌.ಡಿ ಪಡೆದ ನಂತರ ಸಂಶೋಧನೆಯಿಂದ ದೂರ ಸರಿಯುತ್ತಾರೆ. ಸಂಶೋಧನೆಯಲ್ಲಿ ವಿವರಗಳನ್ನು ಸುರಿಯುತ್ತಾ ಹೋಗುವುದನ್ನು ಬಿಟ್ಟು, ಅವುಗಳು ಏನನ್ನು ಧ್ವನಿಸುತ್ತಿವೆ ಎಂಬುದನ್ನು ಶೋಧಿಸಿಕೊಳ್ಳಬೇಕು’ ಎಂದು ಹೇಳಿದರು.

ಲೇಖಕಿ ಬಾನು ಮುಷ್ತಾಕ್ ಅವರ ಕಥನ ಸಾಹಿತ್ಯದ ಒಳನೋಟ ಕುರಿತ ಪ್ರಬಂಧ ಸಂಕಲನ ‘ಎದೆಯ ನುಡಿ’ ಹಾಗೂ ಸಂಶೋಧನಾ ಲೇಖನಗಳ ಸಂಚಿಕೆ ‘ಅರಿವು ಅಸ್ಮಿತೆ’ಯನ್ನು ವಿಮರ್ಶಕ ನಾಗರಾಜ ತಲಘಟ್ಟಪುರ ಜನಾರ್ಪಣೆ ಮಾಡಿದರು. ಲೇಖನ ಸ್ಪರ್ಧೆಯ ವಿಜೇತರಿಗೆ ಇದೇ ವೇಳೆ ‘ಅತ್ಯುತ್ತಮ ಸಂಶೋಧನ ಲೇಖನ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ವಿದ್ವಾಂಸ ಅಮರೇಂದ್ರ ಹೊಲ್ಲಂಬಳ್ಳಿ ಪಾಲ್ಗೊಂಡಿದ್ದರು.

ನಿಗದಿತ ಹೆಲಿಪ್ಯಾಡ್‌ನಲ್ಲಿ ಇಳಿಯದ ಸಿ.ಎಂ ಹೆಲಿಕಾಪ್ಟರ್



ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದ ಹೊರವಲಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಲಿಕಾಪ್ಟರ್ ಇಳಿಯಿತು

ಪ್ರಜಾವಾಣಿ ವಾರ್ತೆ

ಲಿಂಗಸುಗೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿದ್ದ ಹೆಲಿಕಾಪ್ಟರ್ ನಿಗದಿತ ಹೆಲಿಪ್ಯಾಡ್ ಬದಲಾಗಿ ಮತ್ತೊಂದು ಹೆಲಿಪ್ಯಾಡ್‌ನಲ್ಲಿ ಭಾನುವಾರ ಇಳಿದಿದ್ದು, ಗೊಂದಲಕ್ಕೆ ಕಾರಣವಾಯಿತು.

ವಿಧಾನಪರಿಷತ್ ಸದಸ್ಯ ಶರಣಗೌಡ ಪಾಟೀಲ ಬಯ್ಯಾಪುರ ಅವರ ಪುತ್ರನ ಮದುವೆಗಾಗಿ ಮುಖ್ಯಮಂತ್ರಿ ಬರುತ್ತಿದ್ದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರಿಗೆ ಪ್ರತ್ಯೇಕ ಹೆಲಿಪ್ಯಾಡ್ ನಿಗದಿಪಡಿಸಲಾಗಿತ್ತು.

ಆದರೆ, ಪೈಲಟ್ ಗೊಂದಲಕ್ಕೆ ಒಳಗಾಗಿ ಮುಖ್ಯಮಂತ್ರಿ ಅವರು ಇದ್ದ ಹೆಲಿಕಾಪ್ಟರ್ ಅನ್ನು ಸತೀಶ ಜಾರಕಿಹೊಳಿ ಅವರಿದ್ದ ಹೆಲಿಕಾಪ್ಟರ್‌ಗೆ ನಿಗದಿಪಡಿಸಿದ್ದ ಹೆಲಿಪ್ಯಾಡ್‌ನಲ್ಲಿ ಇಳಿಸಿದ್ದಾರೆ. ಇದರಿಂದ ಜಾರಕಿಹೊಳಿ ಅವರಿದ್ದ ಹೆಲಿಕಾಪ್ಟರ್‌ನ ಪೈಲಟ್ ಗೊಂದಲಕ್ಕೆ ಒಳಗಾಗಿದ್ದಾರೆ. ಬಳಿಕ ಅದನ್ನು ಮುಖ್ಯಮಂತ್ರಿ ಹೆಲಿಕಾಪ್ಟರ್‌ಗೆ ನಿಗದಿಪಡಿಸಿದ್ದ ಹೆಲಿಪ್ಯಾಡ್‌ನಲ್ಲಿ ಇಳಿಸಲಾಯಿತು. ಕೆಲಕಾಲ ಅಧಿಕಾರಿಗಳು ಇದರಿಂದಾಗಿ ಗೊಂದಲಕ್ಕೆ ಒಳಗಾದರು.

ಸ್ವಾಗತಕ್ಕೆ ಜನಪ್ರತಿನಿಧಿಗಳು, ಅಧಿಕಾರಿಗಳು ಬಾರದಿರುವುದಕ್ಕೆ ಮುಖ್ಯಮಂತ್ರಿ ಬೇಸರ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ. ಅಧಿಕಾರಿಗಳು ಧಾವಿಸುವಷ್ಟರಲ್ಲಿ ಸಿ.ಎಂ ಅವರಿದ್ದ ಕಾರು ಮದುವೆ ನಡೆಯುವ ಸ್ಥಳಕ್ಕೆ ತೆರಳಲು ಹೆಲಿಪ್ಯಾಡ್ ಬಳಿಯಿಂದ ನಿರ್ಗಮಿಸಿತ್ತು.

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ವಿರೋಧಿಸಿ ಸಮಾವೇಶ

ಬೆಂಗಳೂರು: ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆಗಳ ಮುಚ್ಚುವುದನ್ನು ಸರ್ಕಾರ ನಿಲ್ಲಿಸಬೇಕು ಎಂದು ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಒತ್ತಾಯಿಸಿದರು.

ಎಐಡಿಎಸ್‌ಒ ಕರ್ನಾಟಕ ರಾಜ್ಯ ಸಮಿತಿಯು ಶನಿವಾರ ಆಯೋಜಿಸಿದ್ದ ‘ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಮುಚ್ಚುವ ನಿರ್ಧಾರದ ವಿರುದ್ಧ ಸಮಾವೇಶ’ದಲ್ಲಿ ಅವರು ಮಾತನಾಡಿದರು. ‘ಬಡ ಕುಟುಂಬದ ಮಕ್ಕಳು ಈಗಲೂ ಸರ್ಕಾರಿ ಶಾಲೆಗಳಿಗೇ ಹೋಗುತ್ತಿದ್ದಾರೆ. ಆ ಶಾಲೆಗಳನ್ನು ಮುಚ್ಚಿದರೆ, ಮಕ್ಕಳು ಎಲ್ಲಿಗೆ ಹೋಗಬೇಕು? ಹೆಣ್ಣು ಮಕ್ಕಳಂತೂ 5–7 ಕಿ.ಮೀ.ದೂರದ ಕೆಪಿಎಸ್ ಮತ್ತು ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಿಗೆ ನಡೆದುಕೊಂಡು ಹೋಗುವುದು ಸಾಧ್ಯವಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

ಲೇಖಕಿ ಸಬಿಹಾ ಭೂಮಿ ಗೌಡ, ‘ಶಿಕ್ಷಣವು ವೈಜ್ಞಾನಿಕ ಮನೋಭಾವದ ಮೂಲಕ ಮೌಢ್ಯ ಹಾಗೂ ದಾಸ್ಯವನ್ನು ಹೋಗಲಾಡಿಸುತ್ತದೆ. ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಮೂಲಕ ಅಂತಹ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವ ಹುನ್ನಾರ ನಡೆಸಲಾಗುತ್ತಿದೆ’ ಎಂದರು. ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಘಟಕದ ಉಪಾಧ್ಯಕ್ಷ ವಿ.ಎನ್. ರಾಜಶೇಖರ್, ‘ಊರಿನಾಚೆ ಇರುವ ಮ್ಯಾಗ್ನೆಟ್ ಶಾಲೆಗಳಿಗೆ ಉಚಿತ ಬಸ್ ಒದಗಿಸಲಾಗುತ್ತಿದೆ ಎಂಬುದು ಸುಳ್ಳು. ಅದರ ಸಂಪೂರ್ಣ ಹೊಣೆಯನ್ನು ಸಂಪೂರ್ಣವಾಗಿ ಎಸ್‌ಡಿಎಂಸಿ ಮತ್ತು ಪೋಷಕರ ತಲೆಗೆ ಕಟ್ಟಲಾಗಿದೆ’ ಎಂದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರೆಗೋಡು, ಶಿಕ್ಷಣ ತಜ್ಞ ಪ್ರೊ. ನಿರಂಜನಾರಾಧ್ಯ, ಎಐಡಿಎಸ್‌ಒ ಕರ್ನಾಟಕ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಸಮಾವೇಶದಲ್ಲಿ ವಿಷಯ ಮಂಡಿಸಿದರು.

ದೇವಸ್ಥಾನದ ಹಿಂದಿನ ವ್ಯವಸ್ಥಾಪನಾ ಸಮಿತಿಯಿಂದ ಅವ್ಯವಹಾರ

ಕರಗ: ₹22.5 ಲಕ್ಷ ಹಣ ದುರುಪಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಧರ್ಮರಾಯಸ್ವಾಮಿ ದೇವಾಲಯದ 2024ನೇ ಸಾಲಿನ ಕರಗ ಮಹೋತ್ಸವಕ್ಕೆ ಬಿಡುಗಡೆಯಾಗಿದ್ದ ₹60 ಲಕ್ಷ ಅನುದಾನದಲ್ಲಿ ₹22.5 ಲಕ್ಷ ದುರುಪಯೋಗವಾಗಿದೆ. ಇದನ್ನು ದೇವಾಲಯದ ಹಿಂದಿನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ, ಖಜಾಂಚಿಯಿಂದ ವಸೂಲಿ ಮಾಡಲು ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಕೆಯಾಗಿದೆ.

2024ನೇ ಸಾಲಿನ ಕರಗ ಮಹೋತ್ಸವದಲ್ಲಿ ಹಣ ದುರುಪಯೋಗವಾಗಿದೆ ಎಂಬ ದೂರಿನ ಮೇರೆಗೆ, ಜಿಲ್ಲಾಧಿಕಾರಿಯವರು ಲೆಕ್ಕ ಪರಿಶೋಧನೆ ನಡೆಸಲು ತಂಡವನ್ನು ನಿಯೋಜಿಸಿದ್ದರು. ಜಿಲ್ಲಾಧಿಕಾರಿ ಕಚೇರಿಯ ಮುಖ್ಯ ಲೆಕ್ಕಾಧಿಕಾರಿ, ಧಾರ್ಮಿಕ ದತ್ತಿ ತಹಶೀಲ್ದಾರ್, ವಿನಾಯಕ ಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ, ಬಿಬಿಎಂಪಿಯ ವ್ಯವಸ್ಥಾಪಕರನ್ನು ಒಳಗೊಂಡ ತಂಡ ವರದಿ ನೀಡಿದೆ.



ಸಂಗ್ರಹ ಚಿತ್ರ

ಕರಗ ಮಹೋತ್ಸವದ ಅನುದಾನವನ್ನು ಬಿಬಿಎಂಪಿ, ಶ್ರೀ ಧರ್ಮರಾಯಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಹಾಗೂ ಖಜಾಂಚಿ ಅವರಿಂದ ಚಾಲಿತವಾದ ಖಾತೆಗೆ ₹60 ಲಕ್ಷವನ್ನು ವರ್ಗಾಯಿಸಿದೆ. ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯಿ ದತ್ತಿ ನಿಯಮಗಳ ಪ್ರಕಾರ, ಕಾರ್ಯನಿರ್ವಾಹಕ ಅಧಿಕಾರಿ ಬಟವಾಡೆ ಅಧಿಕಾರಿಯಾಗಿದ್ದು, ಅವರ ಖಾತೆಗೆ ಹಣ ಬಿಡುಗಡೆ ಮಾಡಬೇಕಿತ್ತು. ಆದರೆ, ಬಿಬಿಎಂಪಿಯು ಸಮಿತಿಯ ಬ್ಯಾಂಕ್ ಖಾತೆಗೆ ಹಣ ಬಿಡುಗಡೆ ಮಾಡಿದೆ.

ಲೆಕ್ಕಪರಿಶೋಧನಾ ತಂಡಕ್ಕೆ ಅನುದಾನದ ವೆಚ್ಚದ ಮಾಹಿತಿ ನೀಡಿರುವ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ, ಬಿಲ್‌ದಾರರು ಹಾಗೂ ದೇವಸ್ಥಾನದಲ್ಲಿ ರೂಢಿ–ಪದ್ಧತಿಯಂತೆ ವಾರಸುದಾರರಿಗೆ ನೀಡುವಂತೆ ಸಭೆಯಲ್ಲಿ ತೀರ್ಮಾನಿಸಿ, ನೀಡಲಾಗಿದೆ ಎಂದಿದ್ದಾರೆ. ಸಮಿತಿ ಸಭೆ 2024ರ ಅ.24ರಂದು ನಡೆದಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ ಮತ್ತು ಸಮಿತಿ ಸಭೆ ನಿರ್ಣಯಕ್ಕೂ ಮುನ್ನವೇ ಬ್ಯಾಂಕ್ ಖಾತೆಯಿಂದ ಹಣವನ್ನು ಡ್ರಾ ಮಾಡಲಾಗಿದೆ. ಇದು ಆರ್ಥಿಕ ಸಂಹಿತೆ 1958 ಕಲಂ 14ರ ಉಲ್ಲಂಘನೆಯಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಖಾತೆಯಿಂದ ‘ಸೆಲ್ಫ್’ ಮೂಲಕ ₹22,50,000 ಡ್ರಾ ಮಾಡಿಕೊಳ್ಳಲಾಗಿದೆ. ಇದರ ಲೆಕ್ಕಪತ್ರ ಕೇಳಿದಾಗ, ಯಾರಿಗೆ ಪಾವತಿಯಾಗಿದೆ ಎಂಬುದರ ಮಾಹಿತಿ ನೀಡಿಲ್ಲ. ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಸ್ವಂತ ಧನಾದೇಶದ ಮೇಲೆ ನಗದು ರೂಪದಲ್ಲಿ ಡ್ರಾ ಮಾಡುವುದು ನಿಷಿದ್ಧ. ಅದಕ್ಕೆ ದಾಖಲಾತಿಗಳನ್ನೂ ನೀಡಿಲ್ಲ. ಆದ್ದರಿಂದ ನಗದು ರೂಪದಲ್ಲಿ ಡ್ರಾ ಮಾಡಿರುವ ₹22,50,000 ಅನ್ನು ವಸೂಲು ಮಾಡಲು ಸಂಬಂಧಿಸಿದವರಿಗೆ ಸೂಚಿಸಬಹುದು ಎಂದು ವರದಿಯಲ್ಲಿ ಹೇಳಲಾಗಿದೆ.

2024ರಲ್ಲಿ ದೇವಾಲಯದ ವ್ಯವಸ್ಥಾಪನಾ ಸಮಿತಿಯಲ್ಲಿದ್ದವರು: ಅಧ್ಯಕ್ಷ– ಕೆ. ಸತೀಶ್, ಸದಸ್ಯರು– ಗಾಯತ್ರಿ, ಅಮರನಾರಾಯಣ, ಎಚ್. ಬಿ. ಸುಮಾ, ಬಾಲಕೃಷ್ಣ, ಸಿ. ಶ್ರೀಧರ್, ಬಿ.ಎಚ್. ಕೃಷ್ಣಮೂರ್ತಿ, ಜ್ಞಾನೇಂದ್ರ.

‘ಕರಗ ಉತ್ಸವದ ಅನುದಾನ ಬಿಡುಗಡೆಗೆ ಶೇ 20ರಷ್ಟು ಕಮಿಷನ್ ಕೇಳಲಾಗುತ್ತಿದೆ’ ಎಂದು ಧರ್ಮರಾಯಸ್ವಾಮಿ ದೇವಾಲಯದ ನಿಕಟಪೂರ್ವ ಆಡಳಿತ ಮಂಡಳಿ ಅಧ್ಯಕ್ಷ ಕೆ. ಸತೀಶ್ ಅವರು ಫೆ.3ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು, ದಾಖಲೆ ನೀಡಿದರೆ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರು.



ಪಿಯುಸಿ ನಂತರ ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ಅನುಗುಣವಾಗಿ, ಬದಲಾದ ಕಾಲಕ್ಕೆ ತಕ್ಕಂತೆ ಆಯ್ದುಕೊಳ್ಳಬಹುದಾದ ಬಗೆಬಗೆಯ ಕೋರ್ಸ್‌ಗಳು ಈಗ ವಿವಿಧ ಕಾಲೇಜುಗಳಲ್ಲಿ ಲಭ್ಯ ಇವೆ. ಅಂತಹ ಕೆಲವು ವಿಶೇಷ ಕೋರ್ಸ್‌ಗಳ ಬಗ್ಗೆ ಸೂಕ್ತ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವ ಸರಣಿ ಲೇಖನ ಪ್ರಕಟವಾಗಲಿದೆ

ಪಿಯುಸಿ ಮುಂದೇನು?

ಭಾಗ 1

• ಪ್ರದೀಪ್ ವೆಂಕಟರಾಮ್

ಇತ್ತೀಚಿನ ಪ್ರಕರಣ. ಅನುರಾಧಾಳ ಪೋಷಕರು ತುರ್ತು ಮಾರ್ಗದರ್ಶನಕ್ಕಾಗಿ ಬಂದಿದ್ದರು. 'ಪಿಯುಸಿ ನಂತರ ಏನು?' ಎಂಬ ಪ್ರಶ್ನೆ ಅನುರಾಧಾಳನ್ನು ಸದಾ ಕಾಡುತ್ತಿತ್ತು. ಎಲ್ಲರೂ ವಿಧವಿಧವಾದ ಸಲಹೆ ನೀಡುತ್ತಿದ್ದುದರಿಂದ ಆಕೆ ಗೊಂದಲದಲ್ಲಿದ್ದಳು; ಆತಂಕ, ಭಯ ಹೆಚ್ಚಾಗುತ್ತಿತ್ತು. ಮಾರ್ಗದರ್ಶನ ಪ್ರಕ್ರಿಯೆಯ ಮೂಲಕ ತನ್ನ ಆಸಕ್ತಿ ಮತ್ತು ಸಾಮರ್ಥ್ಯವನ್ನು ಅರಿತು, ಸರಿಯಾದ ಕೋರ್ಸ್ ಆಯ್ಕೆ ಮಾಡಿಕೊಂಡ ಬಳಿಕ ಅವಳ ಆತ್ಮವಿಶ್ವಾಸ ಹೆಚ್ಚಾಗಿ, ಭವಿಷ್ಯ ಸ್ಪಷ್ಟವಾಗಿ ಕಾಣತೊಡಗಿತು.

ಹೊಸ ವರ್ಷ ಶುರುವಾಗುತ್ತಿದ್ದಂತೆ, ಪಿಯುಸಿ ನಂತರ ಮುಂದೇನು ಎನ್ನುವುದರ ಬಗ್ಗೆ ವಿದ್ಯಾರ್ಥಿಗಳು, ಪೋಷಕರ ಆತಂಕ ಸರ್ವೇಸಾಮಾನ್ಯ. ಆರ್ಥಿಕಾಭಿವೃದ್ಧಿ, ತಂತ್ರಜ್ಞಾನ, ಆದಾಯ ಹೆಚ್ಚಳ, ಗ್ರಾಹಕರ ಆದ್ಯತೆಗಳು ಬದಲಾಗುತ್ತಿದ್ದಂತೆ ಕೆಲವು ನೂತನ ಕೋರ್ಸ್‌ಗಳು ಮುನ್ನೆಲೆಗೆ ಬರುವುದು ಸಹಜ. ಅವುಗಳನ್ನು ಆಯ್ದುಕೊಳ್ಳುವುದಕ್ಕೆ ಹೇಗೆ ಸಿದ್ಧರಾಗಬೇಕು? ಇದೋ ಇಲ್ಲಿವೆ ಕೆಲವು ಸಲಹೆಗಳು:

1. ಪಿಯುಸಿ- ಪ್ರಮುಖ ಘಟ್ಟ: ಪಿಯುಸಿ ಒಂದು ನಿರ್ಣಾಯಕ ಹಂತ ಎನ್ನುವುದರಲ್ಲಿ ಸಂಶಯವಿಲ್ಲ. ಎಸ್‌ಎಸ್‌ಎಲ್‌ಸಿ ನಂತರ ವಿಜ್ಞಾನ, ವಾಣಿಜ್ಯ ಅಥವಾ ಕಲಾ ವಿಭಾಗಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಅದೇ ವಿಭಾಗದಲ್ಲಿ ಮುಂದುವರಿಯುವುದು ಸೂಕ್ತ. ಆದರೆ, ಬಲವಾದ ಕಾರಣಗಳಿದ್ದರೆ ಬದಲಾವಣೆ ಸಾಧ್ಯ. ಪಿಯುಸಿ ಪರೀಕ್ಷೆಯ ತಯಾರಿ ಮತ್ತು ಪ್ರವೇಶ ಪರೀಕ್ಷೆಗಳ ಸಿದ್ಧತೆ ಜೊತೆಗೆ ಸೂಕ್ತವೆನಿಸುವ ಕೋರ್ಸ್ ಆಯ್ಕೆಯ ನಿರ್ಧಾರ ಪ್ರಕ್ರಿಯೆ ತುಂಬಾ ಕಠಿಣವೂ ಸವಾಲಿನದ್ದೂ ಆಗಿರುತ್ತದೆ. ವಿದ್ಯಾರ್ಥಿಗಳು ತಮ್ಮ ಆಸಕ್ತಿ, ಸಾಮರ್ಥ್ಯ ಮತ್ತು ಭವಿಷ್ಯದ ಗುರಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಈ ಹಂತದಲ್ಲಿ ಸರಿಯಾದ ಮಾರ್ಗದರ್ಶನ ದೊರಕಿದರೆ ಉತ್ತಮ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯ.

2. ಆಸಕ್ತಿ, ಅಭಿರುಚಿ, ಆಕಾಂಕ್ಷೆ: ವಿದ್ಯಾರ್ಥಿಯು ಶಿಕ್ಷಣ ಮತ್ತು ವೃತ್ತಿ ನಿರ್ಧಾರಕ್ಕೆ ಮುನ್ನ, ತನ್ನ ಆಸಕ್ತಿ ಮತ್ತು ಅಭಿರುಚಿಯನ್ನು ಅರಿತುಕೊಳ್ಳುವುದು ಕಡ್ಡಾಯ. ಯಾವ ವಿಷಯದಲ್ಲಿ ವಿದ್ಯಾರ್ಥಿಗೆ ಆಸಕ್ತಿ, ಅಭಿರುಚಿ, ಸ್ವಾಭಾವಿಕ ಪ್ರತಿಭೆ ಇದೆ ಎಂಬುದನ್ನು ಗುರುತಿಸಬೇಕು. ಕೆಲವರಿಗೆ ವಿಜ್ಞಾನ ಅಥವಾ ತಂತ್ರಜ್ಞಾನ ಕ್ಷೇತ್ರದಲ್ಲಿ ಆಸಕ್ತಿಯಿದ್ದರೆ, ಇನ್ನಿತರರು ಕಲೆ, ವಾಣಿಜ್ಯ, ಕ್ರೀಡೆ ಅಥವಾ ಸೃಜನಾತ್ಮಕ ಕ್ಷೇತ್ರಗಳತ್ತ ಆಕರ್ಷಿತರಾಗಿರುತ್ತಾರೆ. ಜೊತೆಗೆ, ವಿದ್ಯಾರ್ಥಿಯ ಆಕಾಂಕ್ಷೆಗಳು, ಅಂದರೆ ಜೀವನದಲ್ಲಿ ಏನು ಸಾಧಿಸಬೇಕು ಎಂಬ ಕನಸುಗಳು, ಕೋರ್ಸ್ ಆಯ್ಕೆಗೆ ದಿಕ್ಕು ತೋರುತ್ತವೆ.

3. ಕೌಟುಂಬಿಕ ಹಿನ್ನೆಲೆ, ಆದ್ಯತೆ: ವಿದ್ಯಾರ್ಥಿಯ ಕೋರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ಕೌಟುಂಬಿಕ ಹಿನ್ನೆಲೆಯನ್ನೂ ಗಮನಿಸಬೇಕು. ಆರ್ಥಿಕ ಸ್ಥಿತಿ, ಪೋಷಕರ ಹಿನ್ನೆಲೆ ಮತ್ತು ನಿರೀಕ್ಷೆಗಳು, ಕುಟುಂಬದ ಮೌಲ್ಯಗಳು ಮತ್ತು ಸಂಪನ್ಮೂಲಗಳು ಕೋರ್ಸ್ ಹಾಗೂ ಕಾಲೇಜು ಆಯ್ಕೆಯ ಮೇಲೆ ಪ್ರಭಾವ ಬೀರುತ್ತವೆ. ಕೆಲ ಸಂದರ್ಭಗಳಲ್ಲಿ ಪೋಷಕರು ತಮ್ಮ ಅಪೇಕ್ಷೆ, ಅನುಭವದ ಆಧಾರದ ಮೇಲೆ ಸಲಹೆ ನೀಡುತ್ತಾರೆ ಅಥವಾ ಒತ್ತಡ ಹೇರುತ್ತಾರೆ. ಆದರೆ, ಅದೇ ನಿರ್ಣಾಯಕ ಆಗಬಾರದು. ಪೋಷಕರ ಸಲಹೆಗಳು ಮತ್ತು ವಿದ್ಯಾರ್ಥಿಯ ಆಸಕ್ತಿ, ಆಕಾಂಕ್ಷೆಗಳ ನಡುವೆ ಸಮತೋಲನ ಇರಬೇಕು. ಇಂತಹ ಸಂದರ್ಭಗಳಲ್ಲಿ, ಪರಸ್ಪರ ಸಂವಾದ ಮತ್ತು ಅರ್ಥಮಾಡಿಕೊಳ್ಳುವಿಕೆ ಅನಿವಾರ್ಯ.

4. ವೃತ್ತಿ ಯೋಜನೆ: ವಿದ್ಯಾಭ್ಯಾಸದ ನಂತರ ಅನುಸರಿಸಬೇಕಾದ ವೃತ್ತಿಯನ್ನು ಗುರುತಿಸಿ, ಅದಕ್ಕೆ ಅನುಗುಣವಾಗಿ ಯಾವ ಕೋರ್ಸ್ ಅಧ್ಯಯನ ಮಾಡಬೇಕು ಎನ್ನುವ ಪರಿಕಲ್ಪನೆಯೇ ವೃತ್ತಿ ಯೋಜನೆ. ಶಿಕ್ಷಣವು ಅಂತಿಮ ಗುರಿಯಲ್ಲ, ಅದು ವೃತ್ತಿಯತ್ತ ಕರೆದೊಯ್ಯುವ ಹಂತ. ಆದ್ದರಿಂದ, ಪಿಯುಸಿ ನಂತರ ಕೋರ್ಸ್ ಆಯ್ಕೆ ಮಾಡುವಾಗ ದೀರ್ಘಕಾಲೀನ ವೃತ್ತಿ ಯೋಜನೆ ಅಗತ್ಯ. ಆಯ್ಕೆ ಮಾಡುವ ಕೋರ್ಸ್ ಯಾವ ರೀತಿಯ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ, ಉನ್ನತ ಅಧ್ಯಯನದ ಅಗತ್ಯಗಳೇನು, ಅವಕಾಶಗಳೇನು, ಭವಿಷ್ಯದಲ್ಲಿ ಉದ್ಯೋಗ ಕ್ಷೇತ್ರದಲ್ಲಿನ ಬೇಡಿಕೆ, ಪ್ರಾಥಮಿಕ ಮತ್ತು ವೃತ್ತಿ ಸಂಬಂಧಿತ ಕೌಶಲಗಳ ಅಭಿವೃದ್ಧಿ ಎಲ್ಲವನ್ನೂ ಪರಿಶೀಲಿಸಬೇಕು.

5. ಕೋರ್ಸ್, ಕಾಲೇಜು ಆಯ್ಕೆ: ಸರಿಯಾದ ಕೋರ್ಸ್ ಮತ್ತು ಕಾಲೇಜಿನ ಆಯ್ಕೆಯು ವಿದ್ಯಾರ್ಥಿಯ ಭವಿಷ್ಯವನ್ನು ರೂಪಿಸುತ್ತದೆ. ಕೋರ್ಸ್‌ನ ಪಠ್ಯಕ್ರಮ, ಪ್ರಾಯೋಗಿಕ ತರಬೇತಿ, ಉದ್ಯೋಗಾವಕಾಶಗಳು ಮತ್ತು ಉನ್ನತ ಅಧ್ಯಯನದ ಸಾಧ್ಯತೆಗಳನ್ನು ಗಮನಿಸಬೇಕು. ಜೊತೆಗೆ, ಕಾಲೇಜಿನ ಗುಣಮಟ್ಟ, ಅಧ್ಯಾಪಕರ ಅನುಭವ, ಮೂಲಸೌಕರ್ಯಗಳು, ಉದ್ಯಮಗಳೆಡೆಗಿನ ಸಂಪರ್ಕವು ಗಮನಿಸಬೇಕಾದ ಪ್ರಮುಖ ಅಂಶಗಳು. ವಿದ್ಯಾರ್ಥಿಗೆ ಸೂಕ್ತವಾದ ಕೋರ್ಸ್ ಮತ್ತು ಉತ್ತಮ ಕಲಿಕೆಯ ವಾತಾವರಣ ಇರುವ ಕಾಲೇಜನ್ನು ಆಯ್ಕೆ ಮಾಡುವುದು ಒಳಿತು.

ವಿದ್ಯಾರ್ಥಿಗಳು ಈಗ ಅನುಸರಿಸುತ್ತಿರುವ 'ಮೊದಲು ಕೋರ್ಸ್, ಆನಂತರ ವೃತ್ತಿ' ಎನ್ನುವ ಪದ್ಧತಿ ಬದಲಾಯಿಸಿ, 'ಮೊದಲು ವೃತ್ತಿಯ ಆಯ್ಕೆ, ಆನಂತರವೇ ಕೋರ್ಸ್ ಆಯ್ಕೆ' ಎನ್ನುವ ತತ್ವವನ್ನು ಅನುಸರಿಸಿದರೆ, ವೃತ್ತಿಯಲ್ಲಿ ಯಶಸ್ಸು ಮತ್ತು ಬದುಕಿನಲ್ಲಿ ಸಂತೃಪ್ತಿಯನ್ನು ಸಾಧಿಸಬಹುದು.

ಲೇಖಕ: ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ರಿಯಾಕ್ಟ್ ನೇಟಿವ್ ಡೆವಲಪ್‌ಮೆಂಟ್: ಲೋಕಲ್‌ವೈಬ್ಸ್ ಎಲ್‌ಎಲ್‌ಪಿ (LocalVibez LLP) ಸಂಸ್ಥೆಯು ರಿಯಾಕ್ಟ್ ನೇಟಿವ್ ಡೆವಲಪ್‌ಮೆಂಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಸಿಎಸ್‌ಎಸ್, ಎಚ್‌ಟಿಎಂಎಲ್ ಮತ್ತು ರಿಯಾಕ್ಟ್ ನೇಟಿವ್ ಕುರಿತು ಜ್ಞಾನವುಳ್ಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮಾರ್ಚ್ 6 ಕೊನೇ ದಿನ. ಸ್ಟೈಪೆಂಡ್- ತಿಂಗಳಿಗೆ ₹ 8,000-₹ 10,000. ಸಂಪರ್ಕ: https://shorturl.at/g4QRJ.

ಪ್ರಾಡಕ್ಟ್ ಮ್ಯಾನೇಜ್‌ಮೆಂಟ್: ಎಐ ಕ್ರೋನಿ ಸಂಸ್ಥೆಯು ಪ್ರಾಡಕ್ಟ್ ಮ್ಯಾನೇಜ್‌ಮೆಂಟ್ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳಿಗೆ ಮಾರ್ಕೆಟಿಂಗ್, ಪ್ರಾಡಕ್ಟ್ ಮ್ಯಾನೇಜ್‌ಮೆಂಟ್ ಬಗ್ಗೆ ಜ್ಞಾನ ಇರಬೇಕು. ಪರಿಣಾಮಕಾರಿ ಸಂವಹನ ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡುವ ಸಾಮರ್ಥ್ಯ ಇರಬೇಕು. ಅಂತಹವರು ಮಾರ್ಚ್ 6ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್- ₹ 8,000-₹ 23,000. ಸಂಪರ್ಕ: https://shorturl.at/T68vX.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಪ್ರಾಡಕ್ಟ್ ಆ್ಯಂಡ್ ವಿಷುಯಲೈಸೇಷನ್ ಡಿಸೈನ್: ಮೆಟೀರಿಯಲ್ ಡಿಪಾಟ್ ಸಂಸ್ಥೆಯು ಪ್ರಾಡಕ್ಟ್ ಆ್ಯಂಡ್ ವಿಷುಯಲೈಸೇಷನ್ ಡಿಸೈನ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಅಡೋಬ್ ಇಲಸ್ಟ್ರೇಟರ್, ಅಡೋಬ್ ಫೋಟೊಶಾಪ್, ಡಿಸೈನ್ ಥಿಂಕಿಂಗ್ ಮತ್ತು ಇಮೇಜ್ ಎಡಿಟಿಂಗ್ ಬಗ್ಗೆ ಅರಿತಿರುವವರು ಮಾರ್ಚ್ 4ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್- ತಿಂಗಳಿಗೆ ₹ 20,000-₹ 25,000 ಸಂಪರ್ಕ: https://shorturl.at/8KwDg.

ಕಂಟೆಂಟ್ ರೈಟರ್ (ಇನ್‌ಕಂ ಟ್ಯಾಕ್ಸ್): ಕ್ಲಿಯರ್‌ಟ್ಯಾಕ್ಸ್ ಸಂಸ್ಥೆಯು ಕಂಟೆಂಟ್ ರೈಟರ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಕಂಟೆಂಟ್ ಮಾರ್ಕೆಟಿಂಗ್, ಇನ್‌ಕಂ ಟ್ಯಾಕ್ಸ್ ಮತ್ತು ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಬಗ್ಗೆ ಜ್ಞಾನವುಳ್ಳ ವಿದ್ಯಾರ್ಥಿಗಳು ಮಾರ್ಚ್ 6ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್- ತಿಂಗಳಿಗೆ ₹ 25,000. ಸಂಪರ್ಕ: https://shorturl.at/Y9aKT.

ಪರೀಕ್ಷೆ ಭಯಕ್ಕೆ ಮದುವೆಯ ಬಯಕೆ?!



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

ನಾನೀಗ 9ನೇ ತರಗತಿಯಲ್ಲಿದ್ದೇನೆ. ನನಗೆ ಓದಿನಲ್ಲಿ ಆಸಕ್ತಿ ಇಲ್ಲ. ಶ್ರದ್ಧೆಯಿಂದ ಓದು, ಒಳ್ಳೆಯ ನೌಕರಿ ಸೇರಿಕೊಂಡು ಸುಖವಾಗಿರುವೆಯಂತೆ ಎನ್ನುವ ಪಾಲಕರ ಒತ್ತಾಯದಿಂದ ಬೇಸತ್ತಿದ್ದೇನೆ. ಇತ್ತೀಚೆಗೆ ನನಗೆ ಊಟ ಕೂಡ ಸೇರುತ್ತಿಲ್ಲ. ಡಾನ್ಸ್ ಕಲಿಯುತ್ತಿದ್ದೇನೆ. ಹಾಡುತ್ತೇನೆ. ನಾನು ತುಂಬಾ ತೆಳ್ಳಗಿದ್ದೇನೆ. ಬೇಗ ದಪ್ಪಗಾಗಬೇಕು, ಸೀರೆಯಲ್ಲಿ ಚೆನ್ನಾಗಿ ಕಾಣಬೇಕು ಅಂತ ಆಸೆ. ನಾನು ಪ್ರೀತಿಸುತ್ತಿರುವ ಹುಡುಗ ಎಂಜಿನಿಯರಿಂಗ್ ಓದುತ್ತಿದ್ದಾನೆ. ತನ್ನ ಓದು ಮುಗಿದ ನಂತರ ಮದುವೆಯಾಗೋಣ ಅನ್ನುತ್ತಿದ್ದಾನೆ. ನನಗೆ ಅಷ್ಟರವರೆಗೆ ಕಾಯುವ ತಾಳ್ಮೆ ಇಲ್ಲ. ನನಗೆ ಬೇಗನೇ ಮದುವೆಯಾಗಿ ಹೋಗಬೇಕು, ಬೇಗ ಬೇಗನೇ ಆರೆಂಟು ಮಕ್ಕಳನ್ನು ಹೆರಬೇಕು, ಅವರನ್ನೆಲ್ಲ ದೇಶಸೇವೆಗೆ ಕಳಿಸಬೇಕು ಎನ್ನುವ ಆಸೆ ಜಾಸ್ತಿಯಾಗುತ್ತಿದೆ. ಆದರೆ ಏನಾದರೂ ತೊಂದರೆಯಾಗಬಹುದು ಅಂತ ಭಯವೂ ಇದೆ. ನಾನೇನು ಮಾಡಬೇಕು ತಿಳಿಯುತ್ತಿಲ್ಲ. ಹುಚ್ಚೇ ಹಿಡಿದಂತಾಗಿದೆ. ದಾರಿ ತೋರಿಸಿ.

ಸೀತಾ ಕಲ್ಯಾಣಕರ್, ಕುಮಟಾ

ಸೀತಾ, ನೀನು ಒಳ್ಳೆಯ ಹುಡುಗಿ. ಈಗ ನೀನು ತುಂಬಾ ಭಾವನಾತ್ಮಕ ತೊಳಲಾಟ, ಗೊಂದಲ ಮತ್ತು ಒತ್ತಡದಲ್ಲಿ ಇದ್ದೀಯ. ನಿನ್ನ ವಯಸ್ಸಿನಲ್ಲಿ ಕಾರಣಾಂತರಗಳಿಂದ ಇಂಥ ಭಾವನೆಗಳು ಬರುವುದು ಸಹಜ.

ನೀನು ಆತುರದಲ್ಲಿ ಏನೇನೋ ಮಾಡುವ ಮೊದಲು ಇಲ್ಲಿ ಪ್ರಶ್ನೆ ಕೇಳಿರುವುದಕ್ಕೆ ನಿನಗೆ ಭೇಷ್ ಎನ್ನುತ್ತೇನೆ. ಸಮಸ್ಯೆಗಳನ್ನು ಎದುರಿಸಿ ಮುನ್ನುಗ್ಗಬೇಕು. ತಿಳಿದವರ ಸಹಾಯವನ್ನು ಕೇಳುವುದು ತಪ್ಪಲ್ಲ. ಮನೆಬಿಟ್ಟು ಓಡಿಹೋಗುವುದು ಯಾವುದೇ ಕಾರಣಕ್ಕೂ ಒಳ್ಳೆಯದಲ್ಲ. ಅದರಿಂದ ಜೀವನಪೂರ್ತಿ ಕಷ್ಟ, ನಷ್ಟವನ್ನು ಅನುಭವಿಸಬೇಕಾಗುತ್ತದೆ. ನೀನೀಗ ಸಮಾಧಾನದಿಂದ ಸಮಸ್ಯೆಗಳನ್ನು ಎದುರಿಸಿ ನಿಂತರೆ ಮುಂದೆ ಒಳ್ಳೆಯದಾಗುತ್ತದೆ, ನಿನಗೆ ಉತ್ತಮ ಭವಿಷ್ಯವಿದೆ ಎನ್ನುವುದನ್ನು ನೀನು ಈಗ ನಂಬಬೇಕು.

ಪ್ರತಿದಿನ ಬೇಗ ಮಲಗಿ ಬೇಗ ಏಳುವುದನ್ನು ರೂಢಿಮಾಡಿಕೊಳ್ಳಬೇಕು. ಡಾನ್ಸ್ ಹಾಗೂ ಸಂಗೀತದ ಪ್ರ್ಯಾಕ್ಟೀಸ್ ಮಾಡು. ಅದರಿಂದ ನಮ್ಮ ದೇಶವನ್ನು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಪ್ರತಿನಿಧಿಸಿ, ದೇಶಕ್ಕೆ ಗೌರವವನ್ನು ತರಬಹುದು. ಹೀಗೆ ನಿನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ನಿನಗೀಗ ಸಾಕಷ್ಟು ಅವಕಾಶವಿದೆ.

ನಿನ್ನ ಜೀವನ ಇನ್ನೂ ಪ್ರಾರಂಭದ ಹಂತದಲ್ಲಿದೆ. ಬದುಕು ಬಹಳ ಸುದೀರ್ಘವಾಗಿದೆ. ಅದನ್ನು ಸಾರ್ಥಕವಾಗಿ ಬದುಕಬೇಕು. ಅದಕ್ಕೆ ನಿನಗಂತೂ ಅವಕಾಶಗಳು ಕೂಡ ಹೇರಳವಾಗಿವೆ. ಈಗ ಪರೀಕ್ಷೆಯಲ್ಲಿ ಪಾಸಾಗುವಷ್ಟನ್ನಾದರೂ ಓದು. ಓದುವ ಆಸಕ್ತಿ ಇರುವವರ ಗೆಳೆತನವನ್ನು ಮಾಡು. ನಿನ್ನ ದೇಹದ ಬಗ್ಗೆಯಾಗಲೀ ಬಣ್ಣದ ಬಗ್ಗೆಯಾಗಲೀ ತಮಾಷೆಯಾಗಿ ಮಾತನಾಡಿದರೆ ಕೋಪಿಸಿಕೊಳ್ಳಬೇಡ. ಕೀಳರಿಮೆ ಬೆಳೆಸಿಕೊಳ್ಳಬೇಡ. ಅವರೇ ನಿನ್ನನ್ನು ಹೊಗಳುವ ಹಾಗೆ ನೀನು ಬದಲಾಗಬೇಕು. ಹಾಗೆ ಆಗುತ್ತೇನೆ ಎಂದು ನಿರ್ಧರಿಸು. ಅದಕ್ಕಾಗಿ ಪ್ರಯತ್ನಿಸು.

ವಾರ್ಷಿಕ ಪರೀಕ್ಷೆಯ ಭಯದಿಂದ ಈಗ ನಿನಗೆ ಮದುವೆಯ ಆಸೆ ಚಿಗುರಿದೆ ಎನ್ನುವುದನ್ನು ಗಮನಿಸು. ಇದು ಪಲಾಯನವಾದ. ಮದುವೆ ಆಗಬೇಕೆನ್ನುವ ನಿನ್ನ ಆಸೆಯ ಬಗ್ಗೆ ಆಕ್ಷೇಪವಿಲ್ಲ. ಅದು ನೈಸರ್ಗಿಕವಾದ ಬಯಕೆ. ಆದರೆ ನೆಲದ ಕಾನೂನಿನ ಪ್ರಕಾರ, ನಿನಗಿನ್ನೂ ಮದುವೆ ಆಗುವ ವಯಸ್ಸಾಗಿಲ್ಲ. ಹಾಗಾಗಿ, ನಿನ್ನ ಆ ಆಸೆ ಈಗ ಈಡೇರುವ ಹಾಗಿಲ್ಲ. ಮದುವೆಯಾಗಲು ನೀನು ಪ್ರಬುದ್ಧಳಾಗಬೇಕು. ಅಲ್ಲಿಯವರೆಗೆ ನೀನು ಕಾಯಬೇಕು. ನಿನ್ನನ್ನು ಪ್ರೀತಿಸುವ ಹುಡುಗನಿಗೂ ನಿನ್ನ ಭವಿಷ್ಯ ಮುಖ್ಯವಾಗಬೇಕು. ನಿಮ್ಮಿಬ್ಬರ ಪ್ರೀತಿಯು ನಿಮ್ಮಿಬ್ಬರ ಬದುಕನ್ನು ಬೆಳಗುವುದಕ್ಕೆ ಪರಸ್ಪರ ಸಹಕಾರಿಯಾಗಬೇಕು. ಹಾಗೆ ಪ್ರೀತಿಸಬೇಕು. ಪರಸ್ಪರ ಪ್ರಾಮಾಣಿಕವಾಗಿ ಪ್ರೀತಿಸಬೇಕು. ಅದು ಕೂಡ ಅಷ್ಟು ಸುಲಭವೇನಲ್ಲ. ಇದೆಲ್ಲ ನಿನಗೆ ಮುಂದೆ ಅರ್ಥವಾಗುತ್ತದೆ.

ನಕಾರಾತ್ಮಕ ಆಲೋಚನೆಗಳನ್ನು ಪ್ರೇರೇಪಿಸುವ ಸೋಷಿಯಲ್ ಮೀಡಿಯಾ ಪೋಸ್ಟ್‌ಗಳನ್ನು ನೋಡಬಾರದು. ಸೋಷಿಯಲ್ ಮೀಡಿಯಾದಲ್ಲಿ ಅಪರಿಚಿತರು ನಮ್ಮನ್ನು ಇಷ್ಟಪಡುವುದರಿಂದಾಗಲೀ ಇಷ್ಟಪಡದೆ ಇರುವುದರಿಂದಾಗಲೀ ನಮಗೇನೂ ನಷ್ಟವಾಗುವುದಿಲ್ಲ ಎನ್ನುವುದನ್ನು ಅರಿತುಕೊಳ್ಳಬೇಕು.

ಪ್ರೀತಿಸಿ ಮದುವೆಯಾಗಿ ಜೊತೆಜೊತೆಯಾಗಿ ಬದುಕಿನಲ್ಲಿ ಸಾಧನೆ ಮಾಡಿದವರು ಅನೇಕರಿದ್ದಾರೆ. ನಿನಗಿರುವ ಅವಕಾಶದಲ್ಲಿ ನೀನು ಚೆನ್ನಾಗಿ ಓದಬೇಕು. ಪಾಸಾಗಬೇಕು. ನಿನ್ನನ್ನು ನೀನು ದೇಶಸೇವೆಗೆ ಅರ್ಪಿಸಿಕೊಳ್ಳಬೇಕು. ನಿನ್ನ ಮಕ್ಕಳೂ ಸೇರಿದಂತೆ ಅನೇಕಾನೇಕ ಜನ ನಿನ್ನಿಂದ ಸ್ಫೂರ್ತಿ ಪಡೆದು ದೇಶಸೇವೆಗೆ ಮುನ್ನುಗ್ಗುತ್ತಾರೆ. ದೇಶಸೇವೆ ಮಾಡುವುದೆಂದರೆ ಸೈನ್ಯಕ್ಕೆ ಸೇರುವುದು ಮಾತ್ರವಲ್ಲ, ದೇಶದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಅಭಿವೃದ್ಧಿಗೆ ಕೊಡುಗೆ ಕೊಡುವುದೂ ಸೇರಿದೆ. ಅದಕ್ಕಾಗಿ, ನೀನು ಈಗ ಮಾಡಬೇಕಾದ ಕೆಲಸವನ್ನು ಶ್ರದ್ಧೆಯಿಂದ ಮಾಡು. ನಿನ್ನ ವ್ಯಕ್ತಿತ್ವವನ್ನು ಗಟ್ಟಿಯಾಗಿಸಿಕೊ.

ವಿದ್ಯಾರ್ಥಿ ವೇತನ ಕೈಪಿಡಿ

ಪಶು ಸೇವೆಗೆ ನೆರವು

ಬಿಜಿಎಂ ಫೌಂಡೇಷನ್ 2025-26ನೇ ಸಾಲಿನ ಪಶು-ಸೇವಾ ವಿದ್ಯಾರ್ಥಿವೇತನ ನೀಡಲು ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಆಯ್ಕೆಯಾದವರಿಗೆ ಪಶುಪಾಲನೆ ಮತ್ತು ಪಶುಕಲ್ಯಾಣ ಕ್ಷೇತ್ರದಲ್ಲಿ ತಮ್ಮ ಅಧ್ಯಯನವನ್ನು ಮುಂದುವರಿಸಲು ನಿಗದಿತ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತದೆ.

ಅರ್ಹತೆ: ಭಾರತದಲ್ಲಿ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ದಾಖಲಾಗಿ ಓದುತ್ತಿರುವ ಭಾರತೀಯ ನಾಗರಿಕರಾಗಿರಬೇಕು.

ಪಶುವೈದ್ಯಕೀಯ ವಿಜ್ಞಾನ, ಪಶುಸಂಗೋಪನೆ, ಕೃಷಿ, ಹಾಲು ಉತ್ಪಾದನಾ ವಿಜ್ಞಾನ, ಪಶುಸಂವರ್ಧನೆ ಮತ್ತು ಕೋಳಿ ನಿರ್ವಹಣೆ, ಪ್ಯಾರಾ ವೆಟರಿನರಿ, ಮೇವು ನಿರ್ವಹಣೆ ಅಥವಾ ಸಂಬಂಧಿತ ಕ್ಷೇತ್ರಗಳಲ್ಲಿ ಯಾವುದೇ ವರ್ಷದಲ್ಲಿ ಪೂರ್ಣಕಾಲಿಕ ಪದವಿ, ಸ್ನಾತಕೋತ್ತರ ಕೋರ್ಸ್ (ಸಾಮಾನ್ಯ/ವೃತ್ತಿಪರ) ಅಥವಾ ಡಿಪ್ಲೊಮಾ ಓದುತ್ತಿರುವವರಾಗಿರಬೇಕು. ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 50ರಷ್ಟು ಅಂಕಗಳು ಅಥವಾ ಸಮಾನವಾದ ಸಿಜಿಪಿಎ ಪಡೆದಿರಬೇಕು.

ಹೆಣ್ಣುಮಕ್ಕಳು, ಅಂಗವಿಕಲರು, ಏಕಪೋಷಕ ಕುಟುಂಬದ ವಿದ್ಯಾರ್ಥಿಗಳು, ಅನಾಥರು, ಮೊದಲ ತಲೆಮಾರಿನ ಕಾಲೇಜು ವಿದ್ಯಾರ್ಥಿಗಳು, ಸರ್ಕಾರಿ ಕಾಲೇಜಿನಲ್ಲಿ ಓದುತ್ತಿರುವವರು ಹಾಗೂ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಅಂಕಗಳಲ್ಲಿ ಶೇ 5ರಷ್ಟು ಸಡಿಲಿಕೆ ಇರುತ್ತದೆ.

ಪೋಷಕರ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 8 ಲಕ್ಷವನ್ನು ಮೀರಿರಬಾರದು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಾರ್ಷಿಕ ನೆರವು

ಡಿಪ್ಲೊಮಾ: ₹ 36,000

ಸಾಮಾನ್ಯ ಪದವಿ/ ಸ್ನಾತಕೋತ್ತರ ಪದವಿ: ₹ 36,000

ವೃತ್ತಿಪರ ಪದವಿ/ ಸ್ನಾತಕೋತ್ತರ ಪದವಿ: ₹ 75,000

ಸೂಚನೆ: ಈ ವಿದ್ಯಾರ್ಥಿವೇತನವು ಬೋಧನಾ ಶುಲ್ಕ, ವಸತಿ, ಆಹಾರ, ಸಾರಿಗೆ, ಪರೀಕ್ಷಾ ಶುಲ್ಕ ಹಾಗೂ ಇತರ ಶೈಕ್ಷಣಿಕ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ: 16-02-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/ABCPSS1

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

19) ತೆರಿಗೆ ಎಂದರೇನು?(ಬೋರ್ಡ್ ಮಾದರಿ ಪ್ರಶ್ನೆ ಪತ್ರಿಕೆ–2026)
ಉತ್ತರ:– ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆಯೇ ತೆರಿಗೆ

20) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಮೊದಲ ವ್ಯಾಪಾರಿ ದಾಸ್ತಾನು ಮಳಿಗೆ ಎಲ್ಲಿ ಆರಂಭಿಸಿತು?
ಉತ್ತರ:– ಸೂರತ್

21) ಯಾವ ಯಾವ ರಾಜ್ಯದಲ್ಲಿ ಕೃಷಿಗಾಗಿ ದೊರೆಯದ ಹೆಚ್ಚು ಭೂಮಿ ಇದೆ?
ಉತ್ತರ:– ಕೃಷಿಗಾಗಿ ದೊರೆಯದ ಹೆಚ್ಚು ಭೂಮಿ ಹೆಚ್ಚಾಗಿ ಅಸ್ಸಾಂ, ಮಣಿಪುರ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಕಂಡುಬರುವುದು.

22) ಬ್ಯಾಂಕುಗಳು ಹೇಗೆ ಠೇವಣಿದಾರರು ಮತ್ತು ಸಾಲಗಾರರ ನಡುವಿನ ಸಂಪರ್ಕಕೊಂಡಿಯಾಗಿವೆ? (ಬೋರ್ಡ್ ಮಾದರಿ ಪ್ರಶ್ನೆ ಪತ್ರಿಕೆ–2026)
ಉತ್ತರ:– ಗ್ರಾಹಕರ ಠೇವಣಿ ಹಣವನ್ನು ಸಾಲಗಾರರಿಗೆ ನೀಡುವುದರ ಮೂಲಕ ಬ್ಯಾಂಕುಗಳು ಠೇವಣಿದಾರರು ಮತ್ತು ಸಾಲಗಾರರ ನಡುವಿನ ಸಂಪರ್ಕಕೊಂಡಿಯಾಗಿದೆ

23) ಭಾರತವು ಸುಮಾರು ಎಷ್ಟು ಬಿಲಿಯನ್ ಕಿಲೋವ್ಯಾಟ್ಸ್ ಜಲ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿದೆಯೆಂದು ಅಂದಾಜು ಮಾಡಲಾಗಿದೆ.?
ಉತ್ತರ:– 410 ಬಿಲಿಯನ್ ಕಿಲೋವ್ಯಾಟ್ಸ್

24) ಅನಿಬೆಸೆಂಟ್ ಅವರು 1916ರ ಆರಂಭಿಸಿದ ಚಳವಳಿ ಯಾವುದು?
ಉತ್ತರ:– ಅನಿಬೆಸೆಂಟ್ ಅವರು 1916ರಲ್ಲಿ ಮದರಾಸು ಪ್ರಾಂತ್ಯದಲ್ಲಿ ಹೋಮ್ ರೂಲ್ ಲೀಗ್‌ನ್ನು ಪ್ರಾರಂಭಿಸಿದರು

25) ಉಷ್ಣ ವಲಯದ ನಿತ್ಯ ಹರಿದ್ವರ್ಣದ ಅರಣ್ಯಗಳು ಎಲ್ಲಿ ಕಂಡುಬರುತ್ತವೆ?
ಉತ್ತರ : ಈ ವಿಧದ ಅರಣ್ಯಗಳು 250 ಸೆಂ.ಮೀ. ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ

26) ನಮ್ಮ ದೇಶದಲ್ಲಿ ದೊರೆಯುವ ಒಟ್ಟು ಜಲ ಸಂಪನ್ಮೂಲನವನ್ನು ಬಳಸಿ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯನ್ನು ನೀಡಬಹುದು?
ಉತ್ತರ:– 140 ದಶಲಕ್ಷ ಹೆಕ್ಟೇರ್ ಪ್ರದೇಶ

27) ರಾಜಾರಾಮ ಮೋಹನ ರಾಯರು ಯಾವೆಲ್ಲಾ ಸಂಸ್ಥೆಗಳನ್ನು ಆರಂಭಿಸಿದರು?
ಉತ್ತರ:– ರಾಜಾರಾಮ ಮೋಹನ ರಾಯರು ತಮ್ಮ ಸ್ನೇಹಿತರೊಡಗೂಡಿ ಕಲ್ಕತ್ತಾದಲ್ಲಿ 'ಆತ್ಮೀಯ ಸಭಾ' ಪ್ರಾರಂಭಿಸಿದರು. ಈ ಸಭೆಯ ಪ್ರಮುಖ ಆಶಯಗಳೆಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗೊಳಿಸುವುದು. 1828ರಲ್ಲಿ ಬ್ರಹ್ಮ ಸಮಾಜವನ್ನು ಪ್ರಾರಂಭಿಸಿದರು

28) ಸತಿ ನಿಷೇಧದ ಕುರಿತು ಬರೆಯಿರಿ
ಉತ್ತರ:– ರಾಜಾರಾಮ್ ಮೋಹನರಾಯರ ಪ್ರಯತ್ನದಿಂದ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನ ಬೆಂಬಲದಿಂದ 1829ರಲ್ಲಿ ಸತಿ ಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು.

29) 'ಅಮರ ಸುಳ್ಯ' ಬಂಡಾಯದ ಕೇಂದ್ರಗಳು ಯಾವುವು?
ಉತ್ತರ:– ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರು ಮೊದಲಾದ ಸ್ಥಳಗಳು 'ಅಮರ ಸುಳ್ಯ' ಬಂಡಾಯದ ಕೇಂದ್ರ ಸ್ಥಾನಗಳಾಗಿದ್ದವು.

30) ಸ್ವಾತಂತ್ರ್ಯ ನಂತರ ಭಾರತದ ಸರಕಾರವು ರಚಿಸಿದ ಯೋಜನಾ ಆಯೋಗದ ಅಧ್ಯಕ್ಷರು ಯಾರಾಗಿರುತ್ತಿದ್ದರು?
ಉತ್ತರ:– ಪ್ರಧಾನ ಮಂತ್ರಿ

31) ಪೂರ್ವಾಗ್ರಹ ಎಂದರೇನು?
ಉತ್ತರ:– ಪೂರ್ವಾಗ್ರಹ ಎಂದರೆ ವ್ಯಕ್ತಿ ಇಲ್ಲವೇ ಸಮೂಹ, ಸಮಾಜದ ದುರಾಭಿಪ್ರಾಯದ ಭಾವನೆಯನ್ನು ಹೊಂದಿರುವುದು ಎಂದರ್ಥ

32) ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಯಾರು?
ಉತ್ತರ:– ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಹೈದರಾಬಾದಿನ ನಿಜಾಮ.

33) ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಮುಖ್ಯ ಅಕ್ಷಾಂಶ ಯಾವುದು?
ಉತ್ತರ : $23\frac{1}{2}^0$ ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ) ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋಗುತ್ತದೆ.

34) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.
ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

35) ಯಾವ ಅವಧಿಯನ್ನು ಮಂದಗಾಮಿ ಯುಗ ಎನ್ನುತ್ತಾರೆ?
ಉತ್ತರ:– ಸಾಂಪ್ರದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿಯುಗ' ಎನ್ನುತ್ತಾರೆ.

36) ಭದ್ರತಾ ಮಂಡಳಿಯ ಕಾರ್ಯಗಳೇನು?
ಉತ್ತರ:– ಭದ್ರತಾ ಮಂಡಳಿಯ ಕಾರ್ಯಗಳು:–
1) ವಿಟೋ ಚಲಾಯಿಸುವುದು
2) ಅಂತಾರಾಷ್ಟ್ರೀಯ ಭದ್ರತೆ–ಶಾಂತಿ ಕಾಪಾಡುವುದು
3) ಸಾಮಾನ್ಯ ಸಭೆಗೆ ಸದಸ್ಯರ ಆಯ್ಕೆ ಮತ್ತು ತಿರಸ್ಕರಿಸುವ ಕೆಲಸ.
4) ಅಂತಾರಾಷ್ಟ್ರೀಯ ನ್ಯಾಯಾಧೀಶರ ಆಯ್ಕೆಯಲ್ಲಿ ಪಾಲ್ಗೊಳ್ಳುವುದು.

37) ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ವಿಧಾನಗಳು ಯಾವುವು?
ಉತ್ತರ:– ವಿವಿಧ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳಿಂದಾಗಿ ಭಾರತದಲ್ಲಿ ವಿವಿಧ ಕೃಷಿ ವಿಧಾನಗಳು ರೂಢಿಯಲ್ಲಿವೆ. ಅವು ಹೀಗಿವೆ:– (1) ಜೀವನಾಧಾರಿತ ಬೇಸಾಯ (2) ಸಾಂದ್ರ ಬೇಸಾಯ (3) ವಾಣಿಜ್ಯ ಬೇಸಾಯ (4) ಮಿಶ್ರಬೇಸಾಯ (5) ತೋಟಗಾರಿಕಾ ಬೇಸಾಯ

38) ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?
ಉತ್ತರ.:– ಉತ್ತರದ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿವುದರಿಂದ ಈ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ.

39) ಜಯಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರನ್ನು ಹೆಸರಿಸಿ
ಉತ್ತರ:– ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಹಾಗೂ ಆರ್ಕಾಟ್ ರಾಮಸ್ವಾಮಿ

40) ಮಿಶ್ರ ಬೇಸಾಯ ಎಂದರೇನು?
ಉತ್ತರ: ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕೆ ಅಲ್ಲದೆ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವುದು. ಇದಕ್ಕೆ 'ಮಿಶ್ರ ಬೇಸಾಯ' ಎಂದು ಕರೆಯುವರು

41) ಸುರಪುರದ ರಾಜನನ್ನು(ವೆಂಕಟಪ್ಪನನ್ನು) ಬ್ರಿಟಿಷರು ಸಂಶಯದಿಂದ ನೋಡಲು ಕಾರಣ ಏನು?

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION : MODEL QUESTIONS

36. Find the area of triangle ABC, position vectors of A,B,C are $\hat{i} - \hat{j} + 2\hat{k}$, and $2\hat{j} + \hat{k}$ and $\hat{k} + 3\hat{k}$

Ans:- $\overrightarrow{OA} = \hat{i} - \hat{j} + 2\hat{k}$, $\overrightarrow{OB} = 2\hat{j} + \hat{k}$ & $\overrightarrow{OC} = \hat{j} + 3\hat{k}$

$$\overrightarrow{AB} = \overrightarrow{OB} - \overrightarrow{OA} = -\hat{i} + 3\hat{j} - \hat{k}$$

$$\overrightarrow{AC} = \overrightarrow{OC} - \overrightarrow{OA} = -\hat{i} + 2\hat{j} + \hat{k}$$

$$\overrightarrow{AB} \times \overrightarrow{AC} = 5\hat{i} + 2\hat{j} + \hat{k}$$

$$|\overrightarrow{AB} \times \overrightarrow{AC}| = \sqrt{30} \text{ and Area} = \frac{1}{2}|\overrightarrow{AB} \times \overrightarrow{AC}|$$

$$\text{Area} = \frac{\sqrt{30}}{2} \text{ sq. units}$$

37. Find the vector and Cartesian equation of line passing through the points (3, -2, -5) and (3, -2, 6)

Ans:-Let $\vec{a} = 3\hat{i} - 2\hat{j} - 2\hat{k}$, $\vec{b} = 3\hat{i} - 2\hat{j} + 6\hat{k}$

$$\vec{b} - \vec{a} = 11\hat{k}$$

$$\vec{r} = \vec{a} + \lambda(\vec{b} - \vec{a})$$

$\vec{r} = 3\hat{i} - 2\hat{j} - 5\hat{k} + \lambda(11\hat{k})$ is the vector equation of the line.

Cartesian form : $\frac{x-3}{0} = \frac{y+2}{0} = \frac{z+5}{11}$

38. Consider the experiment of tossing two fair coins simultaneously, find the probability that both are head given that at least one of them is a head.

Ans:- S = {HH, HT, TH, TT} & events A = {HH}; B={HH, HT, TH}

$A \cap B = \{HH\}$ $P(A \cap B) = \frac{1}{4}$ $P(B) = \frac{1}{4}$ $P(A) = \frac{1}{4}$

$$P(A/B) = \frac{P(A \cap B)}{P(B)} = \frac{\frac{1}{4}}{\frac{3}{4}} = \frac{1}{3}$$

39. For the given curve: $y = 5x - 2x^3$, when x increases at the rate of 2 units/sec, then how fast is the slope of curve changes when x = 3?

Ans: Given that, $y = 5x - 2x^3$

Then, the slope of the curve, $dy/dx = 5 - 6x^2$

$\Rightarrow d/dt\,[dy/dx] = -12x \cdot dx/dt$

$= -12(3)(2)$

$= -72$ units per second

Hence, the slope of the curve is decreasing at the rate of 72 units per second when x is increasing at the rate of 2 units per second.

40. If y = 5 cos (log x) + 7sin (log x), show that $x^2y_2 + xy_1 + y = 0$.

Ans:- Consider, y = 5 cos (log x) + 7 sin (log x)

D. w. r. to x

$y_1 = 5(-\sin(\log x)\, 1/x + 7\cos(\log x))\, 1/x$

$\Rightarrow xy_1 = 5[-\sin(\log x) + 7\cos(\log x)]$ D. w.r.t x

$\Rightarrow xy_2 + xy_1 = 5[-\cos(\log x)1/x + 7(-\sin(\log x)\, 1/x)]$

$\Rightarrow x^2y_2 + xy_1 = -(5\cos(\log x) + 7\sin(\log x))$

$\Rightarrow x^2y_2 + xy_1 = -y \Rightarrow x^2y_2 + xy_1 + y = 0$

41. The length of x of a rectangle is decreasing at the rate of 3 cm/min & width y is increasing at the rate of 2 cm/min when x = 10 cm and y = 6 cm. Find the rates of change of – i) the perimeter and ii) the area of the rectangle.

Ans : – Given $\frac{dx}{dt} = -3$; $\frac{dy}{dt} = 2$

Perimeter, P = 2(x + y) d. w.r.t. t

$$\frac{dp}{dt} = 2\left(\frac{dx}{dt} + \frac{dy}{dt}\right)$$

$$\frac{dp}{dt} = 2(-3+2) = -2 \text{ cm / min}$$

∴ Perimeter of rectangle is decreasing at the rate of 2 cm/min

$$\text{d.w.r.t.x } \frac{dA}{dt} = x\frac{dy}{dt} + y\frac{dx}{dt}$$

$$\frac{dA}{dt} = 10(2) + 6(-3) = 2 \text{ cm / min}$$

∴ Area is increasing at 2cm / min

42. Define linear objective function in LPP.

Ans:- A linear function z = ax + by, where a and b are constants which has to be maximized or minimized is called linear objective function.

43. If P (A) = 0.6 P (B) = 0.3 and P (ACB) = 0.2, find P(A/B).

$$\text{Ans : } - P(A/B) = \frac{P(A \cap B)}{P(B)} = \frac{0.2}{0.3} = \frac{2}{3}$$

44. Show that the function f : N → N given by f(1) = f(2) = 1 and f(x) = x – 1 for every x > 2 is on to but not one – one.

Ans:- Co domain = {1, 2, 3….} = Range of f

∴ f is on to function

f(1) = f(2); but 1 ≠ 2

∴ f is not 1 – 1 function

45. Prove that $\tan^{-1} x + \cot^{-1} x = \frac{\pi}{2}$ $x \in R$.

Ans:- Let $\tan^{-1} x = \theta \Rightarrow x = \tan\theta$

$x = \cot\left(\frac{\pi}{2} - \theta\right) \Rightarrow \cot^{-1} x = \frac{\pi}{2} - \theta$

$\theta + \cot^{-1} x = \frac{\pi}{2}$ (substitute the value of θ)

$\tan^{-1} x + \cot^{-1} x = \frac{\pi}{2}$

63. Write the simplest form of $\tan^{-1}\left(\sqrt{\frac{1-\cos x}{1+\cos x}}\right)$ $0 < x < \pi$.

$$\text{Ans : } - \tan^{-1}\left[\sqrt{\frac{2\sin^2 x/2}{2\cos^2 x/2}}\right] = \tan^{-1}(\tan x/2) = x/2$$

ಮತ್ತೊಂದು ಅಸ್ಥಿಪಂಜರ ಪತ್ತೆ


ತೆಕ್ಕಲಕೋಟೆ ಪಟ್ಟಣದಲ್ಲಿ ಉತ್ಖನನದ ವೇಳೆ ಸಿಕ್ಕಿರುವ ಅಸ್ಥಿಪಂಜರ.

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಪಟ್ಟಣದ ಗೌಡ್ರಮೂಲೆ ಬೆಟ್ಟದಲ್ಲಿ ನಡೆಯುತ್ತಿರುವ ಉತ್ಖನನ ಸ್ಥಳದಲ್ಲಿ ಶನಿವಾರ 3,500 ದಿಂದ 5,000 ವರ್ಷಗಳ ಹಿಂದಿನದ್ದು ಎನ್ನಲಾದ, ಮತ್ತೊಂದು ಅಸ್ಥಿಪಂಜರ ದೊರೆತಿದೆ.

‘ಕೆಲ ದಿನಗಳ ಹಿಂದೆಯಷ್ಟೇ ಅಸ್ಥಿಪಂಜರ ಕಂಡುಬಂದಿತ್ತು. ಈಗ ಮತ್ತೊಂದು ಸಿಕ್ಕಿದೆ. ಎದೆಯ ಭಾಗದ ಮೇಲೆ ದೊಡ್ಡಗಾತ್ರದ ಕಲ್ಲು ಇರಿಸಿ ಸಮಾಧಿ ಮಾಡಲಾಗಿದೆ’ ಎಂದು ಅಮೆರಿಕದ ಹಾರ್ಟ್‌ವಿಕ್ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕಿ ಹಾಗೂ ಉತ್ಖನನ ಕಾರ್ಯದ ಸಹ ನಿರ್ದೇಶಕಿ ನಮಿತಾ ಎಸ್. ಸುಗಂಧಿ ತಿಳಿಸಿದರು.

3 ಕಾರ್ಮಿಕ ಕರಡು ಸಂಹಿತೆಗಳಿಗೆ ವಿರೋಧ

ಕಾರ್ಮಿಕ ವಿರೋಧಿ ಎಂದು ಬಣ್ಣಿಸಿರುವ ಸಂಘಟನೆಗಳು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರಾಜ್ಯಮಟ್ಟದಲ್ಲಿ ನಾಲ್ಕು ಕಾರ್ಮಿಕ ಕಾಯ್ದೆಗಳನ್ನು ರೂಪಿಸಲು ಕಾರ್ಮಿಕ ಇಲಾಖೆ ಮುಂದಾಗಿದ್ದು, ಮೂರು ಕರಡುಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಸಲಹೆ, ತಿದ್ದುಪಡಿಗಳಿದ್ದಲ್ಲಿ 45 ದಿನಗಳ ಒಳಗೆ ತಿಳಿಸಲು ಸೂಚನೆ ನೀಡಿದೆ.

‘ರಾಜ್ಯ ಸರ್ಕಾರದ ಈ ಕರಡು ಕೇಂದ್ರ ಸರ್ಕಾರದ ನಾಲ್ಕು ಕಾಯ್ದೆಗಳಿಗಿಂತಲೂ ಕಠಿಣವಾಗಿವೆ. ಅಸಾಂವಿಧಾನಿಕ, ಅನಿಯಂತ್ರಿತ ನಿಬಂಧನೆಗಳಾಗಿವೆ’ ಎಂದು ಕಾರ್ಮಿಕ ಸಂಘಟನೆಗಳು ಕಿಡಿಕಾರಿವೆ.

ಕರ್ನಾಟಕ ಕೈಗಾರಿಕಾ ಸಂಬಂಧಗಳ ಸಂಹಿತೆ (ಐ.ಆರ್. ಕೋಡ್), ವೇತನ ಸಂಹಿತೆ (ವೇಜ್ ಕೋಡ್), ಸುರಕ್ಷತೆ ಮತ್ತು ಆರೋಗ್ಯ ಸಂಹಿತೆ (ಒಎಸ್‌ಎಚ್), ಸಾಮಾಜಿಕ ಭದ್ರತೆ ಸಂಹಿತೆಗಳನ್ನು(ಎಸ್‌ಎಸ್‌ಸಿ) ಕಾರ್ಮಿಕ ಇಲಾಖೆ ರಚಿಸಬೇಕಿದ್ದು, ಅದರಲ್ಲಿ ಸಾಮಾಜಿಕ ಭದ್ರತೆ ಸಂಹಿತೆ ಹೊರತುಪಡಿಸಿ ಉಳಿದ ಮೂರನ್ನು ಸಿದ್ಧಪಡಿಸಿ, ಜ.23ರಂದು ಪ್ರಕಟಿಸಿದೆ.


ಮಾಲೀಕರ ಪರ ನಿಯಮಗಳನ್ನು ರೂಪಿಸಿ ಕಾರ್ಮಿಕರಿಗೆ ಇರುವ ಅಲ್ಪಸ್ವಲ್ಪ ಹಕ್ಕುಗಳನ್ನೂ ಕಿತ್ತುಕೊಳ್ಳಲಾಗುತ್ತಿದೆ. ಯಾವುದೇ ಕರಡುಗಳು ಸರ್ಕಾರದ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ
ಮೀನಾಕ್ಷಿ ಸುಂದರಂ, ಸಿಐಟಿಯು ಅಧ್ಯಕ್ಷ

‘ಕೈಗಾರಿಕಾ ಸಂಬಂಧಗಳ ನಿಯಮಗಳಲ್ಲಿ ಸಂಘಟನಾ ಹಕ್ಕಿಗೆ ಅಡ್ಡಿ ಇದೆ. ಕಾರ್ಮಿಕ ಸಂಘದ ಮಾನ್ಯತೆಗೆ ಒಟ್ಟು ಕಾರ್ಮಿಕರಲ್ಲಿ ಶೇ 51ರಷ್ಟು ಮತಗಳನ್ನು ಕಡ್ಡಾಯಗೊಳಿಸಲಾಗಿದೆ. ಇದು ಸಾಧ್ಯವಿಲ್ಲದ ಮಿತಿ. ಮುಷ್ಕರ ಹಮ್ಮಿಕೊಳ್ಳುವುದಾದರೆ 6 ತಿಂಗಳು ‘ಕೂಲಿಂಗ್ ಆಫ್’ ಅವಧಿಯನ್ನು (ತೆಗೆದುಕೊಂಡ ನಿರ್ಧಾರದ ಬಗ್ಗೆ ಮರುಚಿಂತನೆ ಮಾಡುವ ಸಮಯ) ವಿಧಿಸಿರುವುದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ನಿಯಮಗಳ ಉಲ್ಲಂಘನೆಯಾಗಿದೆ. ಒತ್ತಡ ಹೇರುವ ಪ್ರಕ್ರಿಯೆಯನ್ನು ಕಾರ್ಮಿಕರ ಅನುಚಿತ ವರ್ತನೆ ಎಂದು ವ್ಯಾಖ್ಯಾನಿಸಿರುವುದರಿಂದ ಶಾಂತಿಯುತ ಪ್ರತಿಭಟನೆಯನ್ನು ಅಪರಾಧವಾಗಿ ಕಾಣಲು ದಾರಿ ಮಾಡಿಕೊಡುತ್ತದೆ’ ಎಂದು ಸಿಐಟಿಯು ಅಧ್ಯಕ್ಷ ಮೀನಾಕ್ಷಿ ಸುಂದರಂ ಟೀಕಿಸಿದರು.

‘ವೇತನ ಸಂಹಿತೆ ನಿಯಮಗಳಲ್ಲಿಯೂ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ. ವಸತಿ ಸೌಕರ್ಯದ ಹೆಸರಿನಲ್ಲಿ ಯಾವುದೇ ಮಾನದಂಡಗಳಿಲ್ಲದೆ ವೇತನ ಕಡಿತಗೊಳಿಸಲು ಮಾಲೀಕರಿಗೆ ಮುಕ್ತ ಅವಕಾಶ ನೀಡಲಾಗಿದೆ. ಬ್ಯಾಂಕೇತರ ಡಿಜಿಟಲ್ ವ್ಯಾಲೆಟ್‌ಗಳ ಮೂಲಕ ವೇತನ ಪಾವತಿಗೆ ಅವಕಾಶ ನೀಡಿರುವುದು ಕಾರ್ಮಿಕರನ್ನು ಶೋಷಣೆಗೆ ತಳ್ಳಲಿದೆ. ವೇತನ ಬಾಕಿ ಹಕ್ಕನ್ನು ಪಡೆಯಲು ಕೇವಲ 1 ವರ್ಷ ಮಿತಿ ನೀಡಿರುವುದು ಅನ್ಯಾಯ’ ಎಂದು ಅವರು ತಿಳಿಸಿದರು.

‘ಸುರಕ್ಷತೆ ಮತ್ತು ಆರೋಗ್ಯ ನಿಯಮಗಳಲ್ಲಿ ಹಲವು ರಾಜಿಗಳಿವೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸುರಕ್ಷಿತ ಸಾರಿಗೆಯನ್ನು ‘ಆರ್ಥಿಕ ಕಾರ್ಯಸಾಧ್ಯತೆ’ಯ ಮೇಲೆ ನಿಗದಿಪಡಿಸಲಾಗಿದೆ. ಇದು ಮಹಿಳೆಯರ ಸುರಕ್ಷತೆಯ ಹಕ್ಕನ್ನು ಕಸಿದುಕೊಂಡಂತಿದೆ. ವಲಸೆ ಕಾರ್ಮಿಕರನ್ನು ನಿರ್ಲಕ್ಷಿಸಲಾಗಿದೆ. ಉಚಿತ ಆರೋಗ್ಯ ತಪಾಸಣೆಯನ್ನು ನೇರ ಉದ್ಯೋಗಿಗಳಿಗೆ ಸೀಮಿತಗೊಳಿಸಿ, ಗುತ್ತಿಗೆ ಕಾರ್ಮಿಕರನ್ನು ಹೊರಗಿಡಲಾಗಿದೆ. ಇದು ತಾರತಮ್ಯದ ಕ್ರಮ. ಗಂಭೀರ ಸುರಕ್ಷತಾ ಲೋಪಗಳನ್ನು ಕೇವಲ ದಂಡ ಪಾವತಿಯ ಮೂಲಕ ಇತ್ಯರ್ಥಪಡಿಸಲು ಅವಕಾಶ ನೀಡಿರುವುದು ಕಾರ್ಮಿಕರ ಪ್ರಾಣಕ್ಕೆ ಅಪಾಯ ತಂದೊಡ್ಡಬಹುದು’ ಎಂದು ಕಾರ್ಮಿಕರ ನಾಯಕಿ ಎಸ್. ವರಲಕ್ಷ್ಮೀ ಆತಂಕ ವ್ಯಕ್ತಪಡಿಸಿದರು.

ಕರಡು ತಿದ್ದುಪಡಿಗೆ ಅವಕಾಶವಿದೆ

ಕರ್ನಾಟಕ ಕೈಗಾರಿಕಾ ಸಂಬಂಧಗಳ ಸಂಹಿತೆ, ವೇತನ ಸಂಹಿತೆ, ಕೆಲಸದ ಭದ್ರತೆ ಮತ್ತು ಆರೋಗ್ಯ ಸಂಹಿತೆಗಳೇ ಸರಿ ಇಲ್ಲ ಎಂದು ಹೇಳಿಕೆ ನೀಡಿದರೆ ಏನೂ ಪ್ರಯೋಜನವಿಲ್ಲ. ಇದು ಕರಡು ಆಗಿರುವುದರಿಂದ 45 ದಿನಗಳ ಒಳಗೆ ತಿದ್ದುಪಡಿ ಮಾಡಲು ಅವಕಾಶವಿದೆ.

ಹಾಗಾಗಿ ಯಾವುದು ಕಾರ್ಮಿಕರಿಗೆ ತೊಂದರೆ ಯಾಗುತ್ತದೆ ಎಂದು ನಿಖರವಾಗಿ ಗುರುತಿಸಿ ತಿಳಿಸಬೇಕು ಎಂದು ಕಾರ್ಮಿಕ ಇಲಾಖೆಯ ಹೆಚ್ಚುವರಿ ಆಯುಕ್ತ ಮಂಜುನಾಥ್ ಜಿ. ತಿಳಿಸಿದರು.


ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಾಯುವುದಾಗಿಯೂ ಮುಖ್ಯಮಂತ್ರಿ ಹೇಳುತ್ತಾ ಬಂದಿದ್ದರು. ಆದರೆ, ಕರಡುಗಳನ್ನು ಸಿದ್ಧಪಡಿಸುವ ಮೊದಲು ಟ್ರೇಡ್ ಯೂನಿಯನ್‌ಗಳ ಅಭಿಪ್ರಾಯವನ್ನು ಪಡೆದಿಲ್ಲ
ಎಸ್.ವರಲಕ್ಷ್ಮೀ, ಕಾರ್ಮಿಕರ ನಾಯಕಿ


ವಿಜಯಪುರ ಜಿಲ್ಲೆಯ ಮಂಗಳೂರು ಗ್ರಾಮದ ಹೊಲದಲ್ಲಿ ಭಾನುವಾರ ಪತನವಾದ ‘ರೆಡ್ ಬರ್ಡ್’ ಏವಿಯೇಷನ್‌ನ ತರಬೇತಿ ವಿಮಾನ

ತರಬೇತಿ ವಿಮಾನ ಪತನ: ಇಬ್ಬರು ಪೈಲಟ್‌ಗಳು ಪಾರು

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಮಂಗಳೂರು ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ 2.40ರ ಸುಮಾರಿಗೆ ತರಬೇತಿ ನಿರತ ವಿಮಾನವು ತುರ್ತು ಭೂಸ್ಪರ್ಶದ ವೇಳೆ ಪತನವಾಗಿದೆ. ಪೈಲಟ್‌ಗಳಾದ ಕ್ಯಾಪ್ಟನ್ ಕುನಾಲ್ ಮಲ್ಹೋತ್ರಾ, ಗೌತಮ್ ಶಂಕರ್ ಪಿ.ಆರ್ ಅವರು ವಿಮಾನದಿಂದ ಜಿಗಿದು, ಪಾರಾಗಿದ್ದಾರೆ.

ಕಲಬುರಗಿಯಿಂದ ಬೆಳಗಾವಿಗೆ ತೆರಳುತ್ತಿದ್ದ ‘ರೆಡ್ ಬರ್ಡ್’ ಏವಿಯೇಷನ್‌ಗೆ ಸೇರಿದ ಈ ವಿಮಾನವು ಮಂಗಳೂರು ಗ್ರಾಮಕ್ಕೆ ಹೊರಟಿತ್ತು. ಸ್ಥಳೀಯರು ಪೈಲಟ್‌ಗಳನ್ನು ರಕ್ಷಿಸಿ, ಪೊಲೀಸರಿಗೆ ಮಾಹಿತಿ ನೀಡಿದರು.

‘ತೀವ್ರವಾಗಿ ಗಾಯಗೊಂಡ ಇಬ್ಬರೂ ಪೈಲಟ್‌ಗಳನ್ನು ವಿಜಯಪುರದ ಬಿಎಲ್‌ಡಿಇ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

‘ತುರ್ತು ಭೂಸ್ಪರ್ಶಕ್ಕೆ ಕಾರಣ ತಿಳಿದುಬಂದಿಲ್ಲ. ಬೆಳಗಾವಿ, ಚೆನ್ನೈ ವಿಮಾನ ನಿಲ್ದಾಣದ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದು, ಡಿಜಿಸಿಎ ಅಧಿಕಾರಿಗಳು ಹೈದರಾಬಾದ್‌ನಿಂದ ಬರಲಿದ್ದಾರೆ’ ಎಂದು ತಿಳಿಸಿದ್ದಾರೆ.

₹500 ಕೋಟಿ ವೆಚ್ಚ; 100 ಎಕರೆ ಜಮೀನು ನೀಡಲು ರಾಜ್ಯ ಸರ್ಕಾರಕ್ಕೆ ಪತ್ರ

ಮಂಡ್ಯದಲ್ಲಿ ಎಆರ್‌ಎಐ ಕೇಂದ್ರ ಸ್ಥಾಪನೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮಂಡ್ಯದಲ್ಲಿ ₹500 ಕೋಟಿ ವೆಚ್ಚದಲ್ಲಿ ಆಟೋಮೊಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಸಂಸ್ಥೆಯ ಸಂಶೋಧನಾ ಕೇಂದ್ರ ಸ್ಥಾಪನೆಗೆ 100 ಎಕರೆ ಭೂಮಿ ಕೋರಿ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ’ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಇಲ್ಲಿ ತಿಳಿಸಿದರು.

‘ಕೇಂದ್ರ ಬೃಹತ್ ಕೈಗಾರಿಕೆ ಸಚಿವಾಲಯ ಅಧೀನದ, ಅಂತರರಾಷ್ಟ್ರೀಯ ಗುಣಮಟ್ಟದ ಸಂಶೋಧನೆ ಮತ್ತು ತರಬೇತಿ ಕೇಂದ್ರ ಇದಾಗಿದೆ. ಆಟೊಮೊಬೈಲ್ ಕ್ಷೇತ್ರದ ಸಂಶೋಧನೆ, ಪ್ರಯೋಗಾಲಯ, ಎಂಜಿನಿಯರಿಂಗ್ ತಂತ್ರಜ್ಞಾನ, ಕೌಶಲ ತರಬೇತಿ ಒಳಗೊಂಡಿರಲಿದೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ದಕ್ಷಿಣ ಭಾರತದಲ್ಲಿ ತಯಾರಾಗುವ ಎಲ್ಲ ಮಾದರಿಯ ವಾಹನಗಳು ಗುಣಮಟ್ಟ ತಪಾಸಣೆಗೆ ಇಲ್ಲಿಗೆ ಬರಲಿವೆ. ವಾಹನಗಳ ಹೊಗೆ ಉಗುಳುವ ಪ್ರಮಾಣ, ಸುರಕ್ಷತಾ ಕ್ರಮಗಳ ತಪಾಸಣೆ ಮಾಡಿ ಪ್ರಮಾಣೀಕರಿಸಲಿದೆ. ಸರ್ಕಾರ ಹಾಗೂ ಆಟೊಮೊಬೈಲ್ ಕ್ಷೇತ್ರದ ಕೈಗಾರಿಕೆಗಳ ನಡುವೆ ಸೇತುವೆಯಂತೆ ಕೆಲಸ ಮಾಡಲಿದೆ’ ಎಂದರು.

‘ಭೂಮಿ ಒದಗಿಸಲು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆಯಲಾಗಿದೆ. ರಾಜ್ಯ ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜ.21 ರಂದು ಮಂಡ್ಯ ಜಿಲ್ಲಾಧಿಕಾರಿಗೂ ಪತ್ರ ಬರೆದಿದ್ದಾರೆ. ಸರ್ಕಾರವು ಜಮೀನು ಒದಗಿಸಿದ ಬಳಿಕ ಯೋಜನೆ ಸಂಬಂಧಿಸಿದ ಪ್ರಕ್ರಿಯೆ ಆರಂಭವಾಗಲಿವೆ’ ಎಂದರು.

‘ಯೋಜನೆಗೆ ಮೊದಲ ಹಂತದಲ್ಲಿ ಅಗತ್ಯವಿರುವ ₹500 ಕೋಟಿ ಅನುದಾನವನ್ನೂ ಕೇಂದ್ರ ಬಜೆಟ್‌ನಲ್ಲೇ ಘೋಷಿಸಿದೆ. ಕೇಂದ್ರ ಸ್ಥಾಪನೆಯಿಂದ ಕರ್ನಾಟಕದಲ್ಲಿ ಆಟೊಮೊಬೈಲ್ ಕ್ಷೇತ್ರದ ಪ್ರಗತಿ, ಮಂಡ್ಯ ಭಾಗದಲ್ಲಿ ಕೈಗಾರಿಕೆ ಬೆಳವಣಿಗೆ ಆಗಲಿದೆ. ನೇರವಾಗಿ ನೂರಾರು ಉದ್ಯೋಗ ಸೃಷ್ಟಿಯಾಗಲಿದೆ’ ಎಂದು ತಿಳಿಸಿದರು.

‘ಮಂಡ್ಯ ಜಿಲ್ಲೆಗೆ ಕುಮಾರಸ್ವಾಮಿ ಕೊಡುಗೆ ಏನು ಎಂದು ಪ್ರಶ್ನಿಸುವವರಿಗೆ ಇದೇ ನನ್ನ ಉತ್ತರ’ ಎಂದು ಹೇಳಿದರು. ‘ಕೇಂದ್ರ ಸರ್ಕಾರ ಕರ್ನಾಟಕವನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಭದ್ರಾವತಿ ವಿಶ್ವೇಶ್ವರಾಯ ಉಕ್ಕು ಕಾರ್ಖಾನೆಗೆ ₹4500-5000 ಕೋಟಿ ಅನುದಾನ ನೀಡಲಾಗುತ್ತಿದೆ. ಎಚ್‌ಎಂಟಿ ಕಾರ್ಖಾನೆ ಪುನಶ್ಚೇತನಕ್ಕೆ ಮುಂದಾದರೆ, ಅರಣ್ಯ ಸಚಿವರು ಭೂಮಿ ಸರ್ಕಾರದ್ದೆಂದು ಕೋರ್ಟ್‌ಗೆ ಹೋಗಿದ್ದಾರೆ’ ಎಂದರು. ‘ನಾನು ಕೇಂದ್ರ ಸಚಿವನಾಗಿ ಒಂದೂವರೆ ವರ್ಷ ಕಳೆದರೂ ಈವರೆಗೆ ರಾಜ್ಯದ ಒಬ್ಬ ಸಚಿವ ಭೇಟಿ ಮಾಡಿ ಚರ್ಚಿಸಿಲ್ಲ. ಮೊದಲು ಕೇಂದ್ರದ ಜೊತೆ ಒಳ್ಳೆಯ ಸಂಬಂಧ ಬೆಳೆಸಿ. ನಿಮ್ಮ ನಡವಳಿಕೆ ಬದಲಿಸಿಕೊಳ್ಳಿ. ಎಲ್ಲಕ್ಕೂ ಕೇಂದ್ರದತ್ತ ಬೆಟ್ಟು ಮಾಡುವುದಾದರೆ ರಾಜ್ಯ ಸರ್ಕಾರ ಏಕೆ ಬೇಕು?’ ಎಂದು ಪ್ರಶ್ನಿಸಿದರು.


ಸದ್ಯ ರಾಜ್ಯದ ರಾಜಕೀಯ ವಾತಾವರಣ ನೋಡಿದರೆ ನಾನು ಇಲ್ಲಿರಬೇಕಿತ್ತು ಎನಿಸುತ್ತಿದೆ. ಸೂಕ್ತ ಸಮಯ ಬಂದಾಗ ಬರುತ್ತೇನೆ
ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಕುಮಾರಸ್ವಾಮಿ ಹೇಳಿದ್ದು...

- ‘ಕೇಂದ್ರ ಪುರಸ್ಕೃತ 53 ಯೋಜನೆಗಳ ಪೈಕಿ ಒಂದು ಯೋಜನೆಗೂ ಸರ್ಕಾರ ರಾಜ್ಯದ ಪಾಲು ಭರಿಸುತ್ತಿಲ್ಲ. ತನ್ನ ವೈಫಲ್ಯವನ್ನು ಮುಚ್ಚಲು ಕೇಂದ್ರದ ಬಜೆಟ್ ಅನ್ನು ಟೀಕೆ ಮಾಡಲಾಗಿದೆ.
- ‘ಎತ್ತಿನಹೊಳೆ ಯೋಜನೆಯಲ್ಲಿ ಕಳಪೆ ಗುತ್ತಿಗೆದಾರರಿಗೆ ಅವಕಾಶ ನೀಡಿದ್ದರಿಂದ ₹2900 ಕೋಟಿ ಮೊತ್ತದ ಯಂತ್ರಗಳು ತುಕ್ಕು ಹಿಡಿದಿವೆ. ಯೋಜನಾ ವೆಚ್ಚ ₹33 ಸಾವಿರ ಕೋಟಿಗೆ ಏರಿದರೂ ಇನ್ನೂ ನೀರು ಹರಿದಿಲ್ಲ
- ‘ಆಡಳಿತದಲ್ಲಿ ಸಿ.ಎಂ ಪುತ್ರನ ಹಸ್ತಕ್ಷೇಪ ಕುರಿತು ಸಚಿವರೇ ಆಕ್ಷೇಪಿಸುತ್ತಿದ್ದಾರೆ. ‘ಯತೀಂದ್ರ ಟ್ಯಾಕ್ಸ್’ ಮುಂದುವರಿದಿದೆ. ಕುಟುಂಬ ರಾಜಕಾರಣ ಕುರಿತು ಟೀಕಿಸುವ ಸಿದ್ದರಾಮಯ್ಯ ಈಗ ಏನು ಹೇಳುತ್ತಾರೆ?
- ‘ಕಾಂಗ್ರೆಸ್‌ನವರಿಗೆ ಜೆಡಿಎಸ್, ದೇವೇಗೌಡ, ಕುಮಾರಸ್ವಾಮಿಯೇ ಟಾರ್ಗೆಟ್. ಚಾರಿತ್ರ್ಯವಧೆ ಯತ್ನ ಮುಂದುವರಿದಿದೆ. ನನ್ನ ನಾಲ್ಕು ಎಕರೆ ಕೃಷಿ ಭೂಮಿ ವಶಕ್ಕೆ ಎಸ್‌ಐಟಿ ರಚಿಸಿದ್ದರು. ಪ್ರಜ್ವಲ್ ಪ್ರಕರಣದಲ್ಲಿ ಎಸ್‌ಐಟಿ ಅಧಿಕಾರಿಗಳಗೆ ₹30 ಲಕ್ಷ ಬಹುಮಾನ ನೀಡಿದ್ದಾರೆ.
- ‘ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ನಮ್ಮ ಜೊತೆಯಲ್ಲಿ ಇಲ್ಲ. ಅವರ ಬಗ್ಗೆ ಪದೇ ಪದೇ ಕೇಳಬೇಡಿ. ಆ ಕ್ಷೇತ್ರದಲ್ಲಿ ಸಾಕಷ್ಟು ಸಮರ್ಥ ರಿದ್ದಾರೆ. ಯಾರೇ ಅಭ್ಯರ್ಥಿ ಆದರೂ ನಮಗೆ ಬೆಂಬಲ ಇರಲಿದೆ.’

ಪುಷ್ಪಮಾಲಾ, ಗುರುರಾಜ್‌ಗೆ ‘ವರದರಾಜು ಪ್ರಶಸ್ತಿ’

ಪ್ರಜಾವಾಣಿ ವಾರ್ತೆ


ಪುಷ್ಪಮಾಲಾ ಎ. ಅಣ್ಣಿಗೇರಿ


ಗುರುರಾಜ್

ಬೆಂಗಳೂರು: ಎಸ್.ಪಿ. ವರದರಾಜು ಬಳಗ ನೀಡುವ ‘ಎಸ್. ಪಿ. ವರದರಾಜು ಪ್ರಶಸ್ತಿ’ಗೆ ಈ ಬಾರಿ ರಂಗಭೂಮಿ ಕ್ಷೇತ್ರದಿಂದ ಕಲಾವಿದೆ ಪುಷ್ಪಮಾಲಾ ಎ. ಅಣ್ಣಿಗೇರಿ ಮತ್ತು ಚಲನಚಿತ್ರ ಕ್ಷೇತ್ರದಿಂದ ನಿರ್ದೇಶಕ ಗುರುರಾಜ್ ಆಯ್ಕೆಯಾಗಿದ್ದಾರೆ.

ನಟ ರಾಜ್‌ಕುಮಾರ್ ಅವರ ಸೋದರ ಎಸ್. ಪಿ. ವರದರಾಜು ಹೆಸರಿನಲ್ಲಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಬಳಗವು ರಂಗಭೂಮಿ ಹಾಗೂ ಸಿನಿಮಾ ಕ್ಷೇತ್ರದ ಸಾಧಕರಿಗೆ ಪ್ರತಿವರ್ಷ ಈ ಪ್ರಶಸ್ತಿ ನೀಡುತ್ತಿದೆ. ಪುಷ್ಪಮಾಲಾ ಅವರು ಏಳನೆ ವಯಸ್ಸಿಗೆ ರಂಗಭೂಮಿ ಪ್ರವೇಶಿಸಿದ್ದರು. ಹಲವು ನಾಟಕ ಕಂಪನಿಗಳಲ್ಲಿ ಕೆಲಸ ಮಾಡಿದ್ದಾರೆ. ಗುರುರಾಜ್ ಅವರು ಚಿತ್ರರಂಗದಲ್ಲಿ ನಿರ್ಮಾಣ, ನಿರ್ವಹಣೆ ಸೇರಿ ವಿವಿಧ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಾರೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 14ರಂದು ಸಂಜೆ 5 ಗಂಟೆಗೆ ನಡೆಯಲಿದೆ.

‘ಸೈಬರ್ ಅಪರಾಧ ನಿಯಂತ್ರಣಕ್ಕೆ ತಂತ್ರಾಂಶ ಖರೀದಿ’

ಬೆಂಗಳೂರು: ‘ಸೈಬರ್ ಅಪರಾಧ ಜಾಸ್ತಿ ಆಗುತ್ತಿದೆ. ಸಾಮಾಜಿಕ ಮಾಧ್ಯಮಗಳ ಅವಲಂಬನೆ ಹೆಚ್ಚುತ್ತಿದೆ. ತಪ್ಪು, ದ್ವೇಷದ ಸಂದೇಶಗಳಿಂದ ಸಾವುಗಳಾಗುತ್ತಿವೆ. ಭಯೋತ್ಪಾದಕ ಚಟುವಟಿಕೆಗಳಿಗೂ ಪ್ರಚೋದನೆ ಆಗುತ್ತಿದೆ. ಇದನ್ನೆಲ್ಲ ನಿಯಂತ್ರಣ ಮಾಡುವ ಅಗತ್ಯವಿದೆ. ಇದಕ್ಕಾಗಿ ಎಐ(ಕೃತಕ ಬುದ್ಧಿಮತ್ತೆ) ತಂತ್ರಾಂಶ ಖರೀದಿಗೆ ಡಿಜಿಪಿಯವರು ಪ್ರಸ್ತಾವ ಸಲ್ಲಿಸಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸೈಬರ್ ಅಪರಾಧ ನಿಯಂತ್ರಣ ಹೆಚ್ಚಾಗುತ್ತಿದೆ. ನಿಯಂತ್ರಣಕ್ಕಾಗಿ ಅಗತ್ಯ ತಯಾರಿ, ಸಾಫ್ಟ್‌ವೇರ್‌ಗಳು ಬೇಕು, ಹಣ ಖರ್ಚು ಮಾಡಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ₹ 200 ಕೋಟಿಯಿಂದ ₹300 ಕೋಟಿ ಖರ್ಚು ಮಾಡುತ್ತಿದ್ದಾರೆ. ಡಿಜಿಪಿ ಪ್ರಣವ್ ಮೊಹಾಂತಿಯವರು ಇದಕ್ಕಾಗಿಯೇ ₹ 1 ಸಾವಿರ ಕೋಟಿಯ ಪ್ರಸ್ತಾವ ಸಲ್ಲಿಸಿದ್ದಾರೆ’ ಎಂದರು.


ಪ್ರಶಸ್ತಿ ಪುರಸ್ಕೃತರೊಂದಿಗೆ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ‘ಜಾನಪದ ಲೋಕ ಪ್ರಶಸ್ತಿ’ ಪ್ರದಾನ ಮಾಡಿದರು. ರಾಮನಗರ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ, ಹಾಸನ–ಕೊಡಗು ಶಾಖಾ ಮಠದ ಶಂಭುನಾಥ ಸ್ವಾಮೀಜಿ, ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ, ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್, ಲೇಖಕ ಜಯರಾಮ್ ರಾಯ್‌ಪುರ, ಜಾನಪದ ವಿದ್ವಾಂಸ ಪ್ರೊ.ಹಿ.ಶಿ. ರಾಮಚಂದ್ರೇಗೌಡ ಇದ್ದಾರೆ

ಸಾವರ್ಕರ್‌ಗೆ ಭಾರತ ರತ್ನ ಸಿಕ್ಕರೆ ಅದರ ಘನತೆ ಹೆಚ್ಚುತ್ತದೆ ಎಂಬ ಮೋಹನ್ ಭಾಗವತ್ ಹೇಳಿಕೆಗೆ ನಿಮ್ಮ ಸಹಮತ ಇದೆಯೆ?

ಇದೆ ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

19 ಮಂದಿಗೆ ‘ಜಾನಪದ ಲೋಕ ಪ್ರಶಸ್ತಿ’ ಗೌರವ

ಪ್ರಜಾವಾಣಿ ವಾರ್ತೆ

ರಾಮನಗರ: ಕರ್ನಾಟಕ ಜಾನಪದ ಪರಿಷತ್ತು ಇಲ್ಲಿ ಏರ್ಪಡಿಸಿದ್ದ ‘ವಿದ್ಯಾರ್ಥಿ ಜಾನಪದ ಲೋಕೋತ್ಸವ’ದ ಕಡೆಯ ದಿನವಾದ ಭಾನುವಾರ 19 ಸಾಧಕರಿಗೆ ‘ಜಾನಪದ ಲೋಕ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಹಾಗೂ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿಗಳು ಕನಿಷ್ಠ ₹10 ಸಾವಿರದಿಂದ ಗರಿಷ್ಠ ₹25 ಸಾವಿರದವರೆಗೆ ನಗದು ಹಾಗೂ ಫಲಕ ಒಳಗೊಂಡಿವೆ.

ದತ್ತಿ ಪ್ರಶಸ್ತಿ ಪುರಸ್ಕೃತರು: ನಾಡೋಜ ಎಚ್.ಎಲ್. ನಾಗೇಗೌಡ ಜಾನಪದ ಲೋಕಶ್ರೀ ಪ್ರಶಸ್ತಿ: ಪ್ರೊ. ಹಿ.ಶಿ. ರಾಮಚಂದ್ರೇಗೌಡ (ಮೈಸೂರು ಜಿಲ್ಲೆ), ಡಾ. ಜೀ.ಶಂ. ಪರಮಶಿವಯ್ಯ ಜಾನಪದ ಪ್ರಶಸ್ತಿ: ಪ್ರೊ. ಕೆ. ಚಿನ್ನಪ್ಪಗೌಡ (ದಕ್ಷಿಣ ಕನ್ನಡ). ನಾಡೋಜ ಡಾ. ಜಿ. ನಾರಾಯಣ ಜಾನಪದ ಲೋಕ ಪ್ರಶಸ್ತಿ: ಚಿಕ್ಕಣ್ಣ, (ತುಮಕೂರು). ಲಕ್ಕಮ್ಮ **ನಾಗೇಗೌಡ ಪ್ರಶಸ್ತಿ:** ಛಾಯಾಗ್ರಾಹಕ ಡಾ. ಸಿರಿಗಂಧ ವಿ. ಶ್ರೀನಿವಾಸಮೂರ್ತಿ, ಬೆಂಗಳೂರು. ದೊಡ್ಡ ಆಲಹಳ್ಳಿ ಗೌರಮ್ಮ ಕೆಂಪೇಗೌಡ ಪ್ರಶಸ್ತಿ: ಪೂಜಾ ಕುಣಿತ ಕಲಾವಿದ ಶಿವಮಾದಯ್ಯ ಹಾಗೂ ಮೂಡಲಪಾಯ ಯಕ್ಷಗಾನ ಕಲಾವಿದ ಬೈರಪ್ಪ (ಗಂಗಣ್ಣ), ಬೆಂಗಳೂರು ದಕ್ಷಿಣ ಜಿಲ್ಲೆ. ಲೋಕ ಸರಸ್ವತಿ ಗ್ರಂಥ ಪ್ರಶಸ್ತಿ: ‘ಸ್ವಾತಂತ್ರ್ಯದ ಕಿಡಿಗಳು’ ಗ್ರಂಥಕ್ಕಾಗಿ ಲೇಖಕ ಹೂಲಿ ಶೇಖರ್, ಬೆಂಗಳೂರು.

ಜಾನಪದ ಲೋಕ ಪ್ರಶಸ್ತಿ ಪುರಸ್ಕೃತರು: ಚಿನ್ನಮ್ಮ, ಜೋಗುಳಪದ ಹಾಡುಗಾರ್ತಿ, ಚಾಮರಾಜನಗರ ಜಿಲ್ಲೆ. ದೇವರಾಜು, ಪೂಜಾ ಕುಣಿತ ಕಲಾವಿದ, ಮಂಡ್ಯ ಜಿಲ್ಲೆ. ನಾರಾಯಣಪ್ಪ ಮಾಡಶಿರಾವಾರ, ತತ್ವಪದ ಕಲಾವಿದ, ರಾಯಚೂರು ಜಿಲ್ಲೆ. ಎಂ. ತಂಬೂರಿ ಸಿದ್ದರಾಜು, ತಂಬೂರಿ ಕಲಾವಿದ, ಬೆಂಗಳೂರು ಜಿಲ್ಲೆ. ಮುತ್ತಪ್ಪ ಬಸವಂತಪ್ಪ ದಾತನಾಳ, ಸಾಹಸ ಕಲಾವಿದ, ಧಾರವಾಡ ಜಿಲ್ಲೆ. ಚನಿಯಪ್ಪ ನಾಯ್ಕ, ಯಕ್ಷಗಾನ ವೇಷಧಾರಿ ಕಲಾವಿದ, ಕಾಸರಗೋಡು, ಕೇರಳ. ಶಾರದಮ್ಮ, ಸೋಬಾನೆ ಹಾಡುಗಾರ್ತಿ, ಚಿಕ್ಕಮಗಳೂರು ಜಿಲ್ಲೆ.

ಭಾರತಿಬಾಯಿ, ಲಂಬಾಣಿ ನೃತ್ಯ ಕಲಾವಿದೆ, ಬೀದರ್ ಜಿಲ್ಲೆ. ಬಿ.ಎಸ್. ಗೌಡ (ಬೀರಪ್ಪ ಶಿವು ಗೌಡ), ಯಕ್ಷಗಾನ ಕಲಾವಿದ, ಉತ್ತರ ಕನ್ನಡ ಜಿಲ್ಲೆ. ಡಾ. ಎಸ್. ರತ್ನಮ್ಮ, ಸೋಲಿಗ ಕಲಾವಿದೆ, ಚಾಮರಾಜನಗರ ಜಿಲ್ಲೆ. ಗಂಗಪ್ಪ ಮಹಾಲಿಂಗಪ್ಪ ಕರಡಿ, ಕರಡಿ ಮಜಲು ಕಲಾವಿದ, ಬಾಗಲಕೋಟೆ ಜಿಲ್ಲೆ. ಎಂ. ಬಸವರಾಜು, ಗೊರವ ಕುಣಿತ ಕಲಾವಿದ, ಬೆಂಗಳೂರು ಉತ್ತರ ಜಿಲ್ಲೆ.

ಅನಾಥ ಮಕ್ಕಳ ಸಲಹಿದ್ದ ಕುಟುಂಬ • ಭಾವೈಕ್ಯದ ಮದುವೆಗೆ ಸಾಕ್ಷಿಯಾದ ಬಸ್ತವಾಡ ಗ್ರಾಮ

ಹಿಂದೂ ಹುಡುಗನಿಗೆ ಮುಸ್ಲಿಂ ದಂಪತಿ ಆಸರೆ

• ಪ್ರೊ.ಪಿ.ಜಿ.ಕೊಣ್ಣೂರ

ಹುಕ್ಕೇರಿ (ಬೆಳಗಾವಿ): ತಾಲ್ಲೂಕಿನ ಬಸ್ತವಾಡ ಗ್ರಾಮದ ಮುಸ್ಲಿಂ ದಂಪತಿಯು ಹಿಂದೂ ಧರ್ಮದ ಇಬ್ಬರು ಅನಾಥ ಮಕ್ಕಳನ್ನು ಸಾಕಿ ಬೆಳೆಸಿ, ಶಿಕ್ಷಣ ಕೊಡಿಸಿ, ಈಗ ಒಬ್ಬರ ಮದುವೆಯನ್ನೂ ಮಾಡಿದ್ದಾರೆ.

ಗ್ರಾಮದ ಕಾಡಸಿದ್ದೇಶ್ವರ ಸಭಾಭವನದಲ್ಲಿ ಭಾನುವಾರ ಹಾಕಿದ್ದ ಮದುವೆ ಮಂಟಪದಲ್ಲಿ ವಧು–ವರರಷ್ಟೇ ಹಿಂದೂಗಳು. ಮದುವೆ ಜವಾಬ್ದಾರಿ, ಖರ್ಚು– ವೆಚ್ಚ, ಓಡಾಟ ಎಲ್ಲವೂ ಮುಸ್ಲಿಮರದ್ದು.

ಗ್ರಾಮದ ಮೆಹಬೂಬ್ ಹಸನ್ ನಾಯಿಕವಾಡಿ (ಮುಲ್ಲಾ) ಹಾಗೂ ನೂರಜಾನ್ ದಂಪತಿಯೇ ಭಾವೈಕ್ಯ ಮೆರೆದವರು. ದಂಪತಿಯ ನಿರ್ಧಾರಕ್ಕೆ ಅವರ ಇಡೀ ಕುಟುಂಬದವರು ಬೆಂಬಲವಾಗಿ ನಿಂತರು.

ಇಡೀ ಬದುಕು ತ್ಯಾಗ: ಹಿಂದೂ–ಲಿಂಗಾಯತ ಸಮಾಜದ ಶಿವಾನಂದ ಕಾಡಯ್ಯ ಪೂಜಾರ ದಂಪತಿಗೆ ಇಬ್ಬರು ಪುತ್ರರಿದ್ದರು. ಹಿರಿಯ ಪುತ್ರ ಸೋಮಶೇಖರಗೆ 4 ವರ್ಷ, ಕಿರಿಯ ಪುತ್ರ ವಸಂತಗೆ 2 ವರ್ಷ ಇದ್ದಾಗ ಪೂಜಾರ ದಂಪತಿ ನಿಧನರಾದರು.


ಸೋಮಶೇಖರ್ ಪೂಜಾರ ಹಾಗೂ ಪೂನಂ ಮದುವೆಯಲ್ಲಿ ಮೆಹಬೂಬ್ ಹಸನ್ ನಾಯಿಕವಾಡಿ (ಮುಲ್ಲಾ)–ನೂರಜಾನ್ ದಂಪತಿ
ಪ್ರಜಾವಾಣಿ ಚಿತ್ರ

ಒಳ್ಳೆ ಸುದ್ದಿ

ಅನಾಥರಾದ ಮಕ್ಕಳನ್ನು ನಾಯಿಕವಾಡಿ ದಂಪತಿ ಮಡಿಲಿಗೆ ಹಾಕಿಕೊಂಡರು. ಇಬ್ಬರನ್ನೂ ಸಾಕಿ, ಸಲುಹಿ, ಉತ್ತಮ ಶಿಕ್ಷಣ ಕೊಡಿಸಿದರು. ನಾಯಿಕವಾಡಿ ದಂಪತಿಗೂ ನಾಲ್ವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಏಳು ಮಕ್ಕಳನ್ನು ದಂಪತಿ ಒಂದೇ ಮನೆಯಲ್ಲಿಟ್ಟುಕೊಂಡು ಸಲಹಿದ್ದಾರೆ.

ಮನುಷ್ಯರೆಲ್ಲ ಒಂದೇ ಎಂಬುದು ನನ್ನ ಭಾವನೆ. ಇಬ್ಬರೂ ಮಕ್ಕಳು ನಮ್ಮ ಮನೆಯಲ್ಲಿ ನಮ್ಮ ಮಕ್ಕಳಂತೆಯೇ ಬೆಳೆದರು. ಅವರ ಬಗ್ಗೆ ನನಗೆ ಹೆಮ್ಮೆ ಇದೆ.
ಮೆಹಬೂಬ್ ಹಸನ್ ನಾಯಿಕ್ (ಮುಲ್ಲಾ), ಪಾಲಕ


ಮೆಹಬೂಬ್ ಹಸನ್ ನಾಯಿಕವಾಡಿ ಅವರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಶಿವಾನಂದ ಕಾಡಯ್ಯ ಪೂಜಾರ ಕೂಡ ಖಾಸಗಿ ಬಸ್ ಚಾಲಕರಾಗಿದ್ದರು.

ಪದವಿ ಶಿಕ್ಷಣ ಪಡೆದಿರುವ ಸೋಮಶೇಖರ್ ಮತ್ತು ಪಿಯು ಶಿಕ್ಷಣ ಮುಗಿಸಿದ ವಸಂತ ಇಬ್ಬರೂ ವಿಶೇಷ ಆರ್ಥಿಕ ವಲಯದ (ಎಸ್.ಇ.ಝಡ್) ಏಕಸ್ ಕಂಪನಿಯ ಉದ್ಯೋಗಿಗಳು.

ಈಗ ಸೋಮಶೇಖರ್‌ಗೆ ಕನ್ಯೆ ನೋಡಿದ್ದಿ. ಗ್ರಾಮದಲ್ಲಿ ಹಿಂದೂ –ಲಿಂಗಾಯತ ಸಂಪ್ರದಾಯದಂತೆಯೇ ಮದುವೆ ಮಾಡಿದ್ದಾರೆ.ಮದುವೆಗೆ ಊರಿನ ಹಿರಿಯರು ಸಾಕ್ಷಿಯಾದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಹಸಿದವರಿಗೆ ನಮ್ಮಿಂದ ಊಟ ಹಾಕಲು ಆಗದಿದ್ದಾಗ ಊಟ ಹಾಕುವವರ ಮನೆಯನ್ನಾದರೂ ತೋರಿಸಬೇಕು.

-ಗಳಗನಾಥ

ಸಂಪಾದಕೀಯ

ವಿಧಾನಮಂಡಲದಲ್ಲಿ ದ್ವೇಷಭಾಷಣ ಸದನದ ಮಾನ ಹರಾಜಾಗದಿರಲಿ

ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಕಾಂಗ್ರೆಸ್ ಸದಸ್ಯ ನಸೀರ್ ಅಹ್ಮದ್ ಅವರ ರಾಷ್ಟ್ರೀಯತೆಯನ್ನು ಪರೋಕ್ಷವಾಗಿ ಪ್ರಶ್ನಿಸಿದ ಹೇಳಿಕೆಗೆ ಕ್ಷಮೆ ಕೋರಲು ನಿರಾಕರಿಸಿರುವ ಕಾರಣದಿಂದಾಗಿ ಸದನದಿಂದ ಒಂದು ದಿನದ ಅವಧಿಗೆ ಅಮಾನತುಗೊಂಡಿದ್ದಾರೆ. ಈ ಘಟನೆ, ರಾಜ್ಯದ ವಿಧಾನಮಂಡಲದಲ್ಲಿನ ಚರ್ಚೆಗಳು ತಲಪಿರುವ ಅಧೋಗತಿಗೆ ಸಂಕೇತದಂತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಕುರಿತ ತಮ್ಮ ಹೇಳಿಕೆಗಳಿಗೆ ನಸೀರ್ ಅಹ್ಮದ್ ವಿಷಾದ ವ್ಯಕ್ತಪಡಿಸಿದ ನಂತರವೂ, ಸಭಾಧ್ಯಕ್ಷರ ಆದೇಶವನ್ನು ಮತ್ತೆ ಮತ್ತೆ ಉಲ್ಲಂಘಿಸುವುದನ್ನೇ ರವಿ ತಮ್ಮ ಆಯ್ಕೆಯನ್ನಾಗಿಸಿಕೊಂಡರು. ಈ ನಡವಳಿಕೆ ಆಕಸ್ಮಿಕ ಅಥವಾ ಅನುದ್ದೇಶಿತ ಎಂದು ಭಾವಿಸಲಾಗದು. ಒಂದು ವರ್ಷದ ಹಿಂದೆ, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರನ್ನು ಉದ್ದೇಶಿಸಿ ಸದನದಲ್ಲಿ ಅಶ್ಲೀಲ ಹಾಗೂ ಅಸಭ್ಯವಾಗಿ ಮಾತನಾಡಿದ್ದಾರೆ ಎನ್ನುವ ಗಂಭೀರ ಆರೋಪಕ್ಕೆ ಸಿ.ಟಿ. ರವಿ ಗುರಿಯಾಗಿದ್ದರು. ಆದರೆ, ಇಂಥ ನೈತಿಕ ಅಧಃಪತನ ನಿರ್ದಿಷ್ಟ ವ್ಯಕ್ತಿ ಅಥವಾ ಪಕ್ಷಕ್ಕೆ ಸೀಮಿತವಾದುದಲ್ಲ. ವಿಧಾನಸಭೆಯಲ್ಲಿ ಕಾಂಗ್ರೆಸ್ ಶಾಸಕ ಶಿವಲಿಂಗೇಗೌಡ ಅವರು ವಿರೋಧ ಪಕ್ಷದ ಸದಸ್ಯರನ್ನುದ್ದೇಶಿಸಿ ಬಳಸಿದ ಅವಹೇಳನಕಾರಿ ಶಬ್ದಗಳು ಹಾಗೂ ಏಕವಚನ ಪ್ರಯೋಗವು ಸದನದ ಗೌರವ ಎತ್ತಿಹಿಡಿಯುವಂತಹದ್ದೇನಾಗಿರಲಿಲ್ಲ. ಶಾಸಕರ ಕುಟುಂಬದ ಸದಸ್ಯರನ್ನು ಪ್ರಸ್ತಾಪಿಸಿ ಅವರು ನಡೆಸಿದ ದಾಳಿ ಅಗ್ಗದ ಅಭಿರುಚಿಯಿಂದ ಕೂಡಿತ್ತು. ಅವರ ಬೀದಿರಂಪದ ಆಕ್ರೋಶ ಹಾಗೂ ಕೀಳು ಮಾತುಗಳು ಸದನದ ಚರ್ಚೆಗಳು ಮುಟ್ಟಿರುವ ಅಧಃಪತನದ ಸಂಕೇತದಂತಿದ್ದವು. ಉಮಾಶ್ರೀ ಅವರನ್ನು ಕುರಿತಂತೆ ವಿಧಾನ ಪರಿಷತ್ ಸಭಾಧ್ಯಕ್ಷರು ಆಡಿದ ಮಾತುಗಳೂ ಸದಭಿರುಚಿಯಿಂದ ಕೂಡಿರಲಿಲ್ಲ ಹಾಗೂ ಲಿಂಗಸೂಕ್ಷ್ಮತೆ ಒಳಗೊಂಡಿರಲಿಲ್ಲ. ದ್ವೇಷಭಾಷಣ ಕಾಯ್ದೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರ ಉತ್ಸುಕವಾಗಿರುವ ಸಂದರ್ಭದಲ್ಲಿ, ಪ್ರಜಾಪ್ರತಿನಿಧಿಗಳ ಕಲಾಪಗಳೇ ದ್ವೇಷಭಾಷಣಗಳ ಕಮ್ಮಟಗಳಾಗಿ ರೂಪುಗೊಂಡಿರುವುದು ವಿಷಾದಕರ ಬೆಳವಣಿಗೆ.



ವಿಧಾನಮಂಡಲ ಅಧಿವೇಶನ ರಾಜಕೀಯ ಪ್ರಹಸನಗಳ ಆಡುಂಬೊಲವಾಗಿದೆ. ರಾಜಕೀಯ ನಾಯಕರ ಅಸಭ್ಯ ಹಾಗೂ ದ್ವೇಷದ ಮಾತುಗಳಿಂದ ಸದನದ ಘನತೆಗೆ ಹಾನಿಯಾಗಿದೆ.

ವಾದಕ್ಕೆ ಪ್ರತಿವಾದ ಮಂಡಿಸುವ ಬದಲು ಪ್ರಚೋದನೆ ಹಾಗೂ ಬೈಗುಳವೇ ಸಂವಾದಕ್ಕೆ ಸರಿಯಾದ ನೀತಿ ಎನ್ನುವಂತಾಗಿರುವುದು ದುರದೃಷ್ಟಕರ. ಇದು, ಕರ್ನಾಟಕ ವಿಧಾನಮಂಡಲ ಕಂಡಿದ್ದ ಅತ್ಯುನ್ನತ ಮಟ್ಟದ ಬೌದ್ಧಿಕ ಹಾಗೂ ವಾಗ್ವಾದ ಪರಂಪರೆಯು ಅವನತಿಯತ್ತ ಸಾಗುತ್ತಿರುವುದನ್ನು ಸೂಚಿಸುವಂತಿದೆ. ವಿಧಾನಸಭೆ ಹಾಗೂ ವಿಧಾನ ಪರಿಷತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ದೇಗುಲಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಅಲ್ಲಿ ಗಂಟಲಿನ ಶಕ್ತಿಗಿಂತಲೂ ಕಾನೂನು ಸಂಹಿತೆ, ಅಂಕಿಅಂಶಗಳು ಹಾಗೂ ಅಧಿಕೃತ ದಾಖಲೆಗಳೇ ಮುಖ್ಯವಾಗಿದ್ದವು. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ನಾಯಕರು ಪೂರ್ವಸಿದ್ಧತೆಯೊಂದಿಗೆ ಆಗಮಿಸಿ, ಗಂಟೆಗಟ್ಟಲೆ ವಿದ್ವತ್ಪೂರ್ಣವಾಗಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ವ್ಯಂಗ್ಯ ಹಾಗೂ ವಿಡಂಬನೆ ಚರ್ಚೆಯ ಭಾಗವಾಗಿದ್ದರೂ, ಅದು ಯಾರನ್ನೂ ನೋಯಿಸುವಂತಿರಲಿಲ್ಲ; ಆಯುಧದಂತೆ ಬಳಕೆಯಾಗುತ್ತಿರಲಿಲ್ಲ; ವೈಯಕ್ತಿಕ ತೇಜೋವಧೆಯ ಉದ್ದೇಶ ಹೊಂದಿರುತ್ತಿರಲಿಲ್ಲ. ಗೌರವಪೂರ್ಣ ಸಂಬೋಧನೆ ಹಾಗೂ ಹದ್ದುಮೀರದ ಭಾಷೆ ಸದನದ ಘನತೆಯ ದ್ಯೋತಕವಾಗಿದ್ದವು. ನ್ಯಾಯಾಲಯದ ಕಲಾಪ ಮತ್ತು ವಿಶ್ವವಿದ್ಯಾಲಯಗಳಲ್ಲಿನ ಸೆಮಿನಾರ್‌ಗಳಂತೆ ಸದನದಲ್ಲಿನ ಮಾತುಕತೆಗಳೂ ಗಂಭೀರವಾಗಿ ನಡೆಯುತ್ತಿದ್ದವು. ಆ ಸಂಸ್ಕೃತಿ ಈಗ ಮರೆಯಾಗಿದ್ದು, ಸದನಗಳಲ್ಲಿನ ಚರ್ಚೆಗಳು ದ್ವೇಷಭಾಷಣದ ಸ್ವರೂಪ ಪಡೆದುಕೊಂಡಿರುವುದು ದುರದೃಷ್ಟಕರ. ಈ ಬೆಳವಣಿಗೆ ಸಾಂಸ್ಥಿಕ ಮೌಲ್ಯಗಳಲ್ಲಿ ಆಗಿರುವ ಆಳವಾದ ಸವಕಳಿಯ ಫಲಶ್ರುತಿಯಾಗಿದೆ.

ಉನ್ನತ ಮಟ್ಟದ ಚರ್ಚೆಯ ಮಾನದಂಡಗಳನ್ನು ಗುರುತಾಗಿ ಹೊಂದಿದ್ದ ಕರ್ನಾಟಕ ವಿಧಾನಮಂಡಲವು ತನ್ನ ಘನತೆಯನ್ನು ಮರುಸ್ಥಾಪಿಸಿಕೊಳ್ಳಬೇಕಾದ ತುರ್ತನ್ನು ಎದುರಿಸುತ್ತಿದೆ. ಸದನದ ಭಾಷೆ ಹಾಗೂ ನಡವಳಿಕೆಯಲ್ಲಿ ಆಗಿರುವ ಬದಲಾವಣೆಯು ಶಿಷ್ಟಾಚಾರಕ್ಕೆ ಸಂಬಂಧಿಸಿದ ಪ್ರಶ್ನೆ ಮಾತ್ರವಾಗಿರದೆ, ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಗೆ ಸಂಬಂಧಿಸಿದ್ದೂ ಆಗಿದೆ. ಕೋಮು ಪ್ರಚೋದನೆ, ಅಸಭ್ಯ ಭಾಷೆ ಹಾಗೂ ವೈಯಕ್ತಿಕ ದ್ವೇಷಕ್ಕೆ ಸದನ ಅವಕಾಶ ಮಾಡಿಕೊಟ್ಟಾಗ, ಸಾರ್ವಜನಿಕ ಸಂವಾದದ ಬದಲು ಅದೊಂದು ಪ್ರಹಸನದಂತೆ ಕಾಣಿಸತೊಡಗುತ್ತದೆ. ಸದನದಲ್ಲಿನ ಚರ್ಚೆಗಳನ್ನು ಬೀದಿಜಗಳದ ಮಟ್ಟಕ್ಕೆ ಇಳಿಸುವುದು ಪ್ರಜಾಪ್ರತಿನಿಧಿಗಳು ತಮ್ಮ ಮತದಾರರಿಗೆ ಮಾಡುವ ವಿಶ್ವಾಸದ್ರೋಹವಾಗಿದೆ ಹಾಗೂ ಸದನದ ಪರಂಪರೆಗೆ ಎಸಗುವ ಅವಮಾನವಾಗಿದೆ. ಸರ್ಕಾರದ ನೀತಿ, ಆಡಳಿತ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಚರ್ಚೆಗಳಿಗೆ ಸದನ ವೇದಿಕೆಯಾಗಬೇಕೆಂದು ಅಪೇಕ್ಷಿಸುವ ಎಲ್ಲ ಹಕ್ಕು ನಾಗರಿಕರಿಗಿದೆ. ಸದನದಲ್ಲಿ ಶಿಸ್ತು ಮತ್ತು ಘನತೆಯನ್ನು ಮರುಸ್ಥಾಪಿಸುವುದು ಶಿಷ್ಟಾಚಾರಕ್ಕೆ ಸಂಬಂಧಿಸಿದ ಸಂಗತಿಯಷ್ಟೇ ಆಗಿರದೆ, ಈಗಾಗಲೇ ಸಾರ್ವಜನಿಕರ ದೃಷ್ಟಿಯಲ್ಲಿ ತನ್ನ ಘನತೆಯನ್ನು ಕಳೆದುಕೊಳ್ಳುವ ದಾರಿಯಲ್ಲಿರುವ ಶಾಸಕಾಂಗದ ವಿಶ್ವಾಸಾರ್ಹತೆಯನ್ನು ಮರು ಸ್ಥಾಪಿಸುವ ಕ್ರಮವೂ ಆಗಿದೆ. ಜನರ ತೆರಿಗೆ ಹಣದಲ್ಲಿ ನಡೆಯುವ ಸದನ ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿದ ಚರ್ಚೆಗೆ ವೇದಿಕೆ ಆಗಬೇಕೇ ಹೊರತು, ರಾಜಕೀಯ ಪ್ರಹಸನಗಳಿಗಲ್ಲ.

ಚಾಟಿ

ಅವಮಾನಿಸುವುದೇ ರಾಜಕೀಯ!



ವಿಶ್ವದ ಅನೇಕ ದೇಶಗಳಲ್ಲಿ ತಮ್ಮ ನಾಡಿನ ಬಿಡುಗಡೆಗೆ ಹೋರಾಡಿದ ಹಿರಿಯರನ್ನು ಸಮಕಾಲೀನ ರಾಜಕೀಯ ಚರ್ಚೆಗಳಿಂದ ಹೊರಗಿಟ್ಟು ಗೌರವಿಸಲಾಗಿದೆ. ನಮ್ಮಲ್ಲಿ ಅಂಥ ಹಿರಿಯರನ್ನು ಅವಮಾನಿಸುವುದೇ ವರ್ತಮಾನದ ರಾಜಕೀಯವಾಗಿದೆ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಅಹಿಂಸೆ ಪ್ರತಿಪಾದಿಸಿದ ಗಾಂಧೀಜಿಯವರ ಕೈಯಲ್ಲಿ ದೊಣ್ಣೆ ಕೊಡುವುದು, ವಿದ್ಯಾಭ್ಯಾಸ-ಉದ್ಯೋಗ ಕೇಳುವ ಯುವಜನತೆಯ ಕೈಗಳಿಗೆ ತ್ರಿಶೂಲ, ಕತ್ತಿ, ಖಡ್ಗ ಕೊಡುವುದು ಬಿಜೆಪಿಯ ಮನುಷ್ಯ ವಿರೋಧಿ ಕ್ರೌರ್ಯದ ಸಂಸ್ಕೃತಿ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 9-2-2001

• **ನೇರ ನೇಮಕಾತಿ ನಿಷೇಧ ರದ್ದು**

ಬೆಂಗಳೂರು, ಫೆ. 8- ಗ್ರಾಮೀಣ ಅಭ್ಯರ್ಥಿಗಳಿಗೆ ಶೇ 25ರ ಕೃಪಾಂಕ ನೀಡುವ ಕಾಯ್ದೆ ಈಗ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ ನೇರ ನೇಮಕಾತಿ ಮೇಲೆ ಇದ್ದ ನಿಷೇಧವನ್ನು ರದ್ದುಪಡಿಸಲು ಇಂದು ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿತು.

ಈಗ ಖಾಲಿ ಇರುವ ಹುದ್ದೆಗಳಿಗೆ ಹೊಸದಾಗಿ ಅಧಿಸೂಚನೆ ಹೊರಡಿಸಿ ನೇಮಕ ಮಾಡಿಕೊಳ್ಳಲಾಗುವುದು ಎಂದು ಸಚಿವ ಸಂಪುಟ ಸಭೆಯ ತೀರ್ಮಾನಗಳನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಡಿ.ಬಿ. ಚಂದ್ರೇಗೌಡ ತಿಳಿಸಿದರು.

• **ಗಡಿ ವಿವಾದ: ಸಭೆ ಕರೆಯಲು ಪ್ರಧಾನಿಗೆ ವಿಲಾಸರಾವ್ ಪತ್ರ**

ನವದೆಹಲಿ, ಫೆ. 8- ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಮಾತುಕತೆ ನಡೆಸಲು ಉಭಯ ರಾಜ್ಯಗಳ ಸಭೆ ಕರೆಯಬೇಕೆಂದು ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್ ಅವರು ಪ್ರಧಾನಿಗೆ ಪತ್ರ ಬರೆದಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 9-2-1951

• **ಮೇದಪ್ಪನವರಿಗೆ ವಿಷಪ್ರಾಶನ ಯತ್ನ**

ಬೆಂಗಳೂರು, ಫೆ. 8- ಜನವರಿ 29ನೆಯ ತಾರೀಖು ಸಂಜೆ ಮೈಸೂರು ಶ್ರೇಷ್ಠ ನ್ಯಾಯಾಧೀಶ ಪಿ. ಮೇದಪ್ಪ ಅವರ ಮನೆಯವರೆಲ್ಲರೂ ಹೊರಗೆ ಹೋಗಿದ್ದಾಗ ಶ್ರೇಷ್ಠ ನ್ಯಾಯಾಧೀಶರ ಮನೆಯ ಸೇವಕರನ್ನು ಒಳಹಾಕಿಕೊಂಡು, ಅವರ ನೆರವಿನಿಂದ ಮೇದಪ್ಪನವರಿಗೆ ವಿಷಪ್ರಾಶನ ಮಾಡಿರುವ ಹೇಡಿತನದ ಪ್ರಯತ್ನವೊಂದು ನಡೆಯಿತೆಂದು ನಂಬಿಕೆಗೆ ಅರ್ಹವಾದ ಕಡೆಗಳಿಂದ ನಿರ್ದಿಷ್ಟವಾಗಿ ತಿಳಿದುಬಂದಿದೆ.

ಈ ವಿಷಪ್ರಾಶನ ಪ್ರಯತ್ನದಲ್ಲಿ ಉಪಯೋಗಿಸಲಾದ ಕರಾಳ ವಿಷವು 'ಮರ್ಕ್ಯೂರಿಕ್ ಕ್ಲೋರೈಡ್' ಎಂದೂ, ಈ ವಿಷವು ಸಾಮಾನ್ಯವಾಗಿ ದೊರೆಯುವಂತಹದ್ದಲ್ಲವೆಂದೂ ಗೊತ್ತಾಗಿದೆ. ಮೇದಪ್ಪನವರು ಕುಡಿಯಲಿದ್ದ 'ಟೀ'ಯಲ್ಲಿ ವಿಷವನ್ನು ಹಾಕಲಾಗಿತ್ತು ಎಂದೂ, ಈ ವಿಪತ್ತಿನಿಂದ ಅವರು ಪಾರಾದುದು ದೈವವಶವೆಂದೂ ತಿಳಿದುಬಂದಿದೆ.

ಪ್ಲಾಸ್ಟಿಕ್: ಭಾರತದ್ದೇನು ಹೊಣೆ?



ವಿಶ್ಲೇಷಣೆ

ಸುಚಿತ್ರ

ವಿಶ್ವದ ಬಹುದೊಡ್ಡ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಕ ದೇಶಗಳಲ್ಲಿ ಭಾರತವೂ ಒಂದಾಗಿದೆ. ಹಾಗಾಗಿಯೇ, 'ಜಾಗತಿಕ ಪ್ಲಾಸ್ಟಿಕ್ ಒಪ್ಪಂದ'ದಲ್ಲಿ ಸಕ್ರಿಯ ಪಾತ್ರ ವಹಿಸುವುದು ಭಾರತದ ಹೊಣೆಗಾರಿಕೆಯಾಗಿದೆ. ಈ ಭಾಗವಹಿಸುವಿಕೆ, ವಿಶ್ವ ಮಟ್ಟದಲ್ಲಿ ಮಾತ್ರವಲ್ಲದೆ, ದೇಶದಲ್ಲಿ ಆಂತರಿಕ ಪರಿಸರ ನೀತಿಗಳನ್ನು ರೂಪಿಸುವ ಕಾರಣದಿಂದಲೂ ಅಗತ್ಯವಾದುದು.

ಲಿಯೋ ಬೇಕೆಲ್ಯಾಂಡ್ ಅವರು 1907ರಲ್ಲಿ 'ಬೇಕಲೈಟ್' ಎಂಬ ಕೃತಕ ಪ್ಲಾಸ್ಟಿಕ್ ಕಂಡುಹಿಡಿದಾಗ, ಅದು ಹೊಸ ಯುಗಕ್ಕೆ ದಾರಿ ತೆರೆಯಿತು. ಕಬ್ಬಿಣಕ್ಕಿಂತ ಹಗುರ, ಮರಕ್ಕಿಂತ ಬಾಳಿಕೆ, ಗಾಜಿಗಿಂತ ಸುರಕ್ಷಿತವೆನಿಸಿದ್ದ ಪ್ಲಾಸ್ಟಿಕ್ ಮಾನವಕುಲದ ವೈಜ್ಞಾನಿಕ ಕ್ರಾಂತಿಯ ಸಂಕೇತವಾಗಿತ್ತು. ಮನೆಗಳಲ್ಲಿನ ಪಾತ್ರೆಗಳಿಂದ ಹಿಡಿದು ಮಕ್ಕಳ ಆಟಿಕೆಗಳು, ವೈದ್ಯಕೀಯ ಉಪಕರಣಗಳು, ಅಂತರಿಕ್ಷ ತಂತ್ರಜ್ಞಾನದವರೆಗೆ ಪ್ಲಾಸ್ಟಿಕ್ ಎಲ್ಲೆಡೆ ಒಂದು 'ಮಿರಾಕಲ್ ಪ್ರಾಡಕ್ಟ್' ಎನಿಸಿತ್ತು. 20ನೇ ಶತಮಾನದ ಮಧ್ಯಭಾಗದಲ್ಲಿ ಪ್ಲಾಸ್ಟಿಕ್ ಅನ್ನು ಮನೆ ಮನೆಯಲ್ಲಿ 'ವಿಕಾಸದ ಸಂಕೇತ' ಎಂದು ಬಣ್ಣಿಸಲಾಗಿತ್ತು. ಇಂದಿನ ನಮ್ಮ ಜೀವನದಲ್ಲಿ ಒಂದು ವಾರ ಪ್ಲಾಸ್ಟಿಕ್‌ರಹಿತ ಜೀವನ ನಡೆಸುವುದು ಅಸಾಧ್ಯ ಅನ್ನುವಷ್ಟರ ಮಟ್ಟಿಗೆ ಅದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ.

1950ರ ಸುಮಾರಿಗೆ ಜಗತ್ತಿನಾದ್ಯಂತ ವರ್ಷಕ್ಕೆ 2 ದಶಲಕ್ಷ ಟನ್‌ನಷ್ಟು ಉತ್ಪಾದನೆ ಆಗುತ್ತಿದ್ದ ಪ್ಲಾಸ್ಟಿಕ್, ಇಂದು 600 ದಶಲಕ್ಷ ಟನ್‌ಗೆ ಏರಿದೆ. ಅಂದರೆ ಪ್ರತಿದಿನಕ್ಕೆ ಸುಮಾರು 1.6 ದಶಲಕ್ಷ ಟನ್ ಪ್ಲಾಸ್ಟಿಕ್ ಮಾರುಕಟ್ಟೆಗೆ ಬರುತ್ತಿದೆ. ಈ ಉತ್ಪಾದನೆಯಲ್ಲೂ ಸುಮಾರು ಶೇ 40ಕ್ಕಿಂತ ಹೆಚ್ಚು ಒಮ್ಮೆಯಷ್ಟೇ ಬಳಸಲಾಗುವ, ಅಂದರೆ ಪ್ಯಾಕೇಜಿಂಗ್ ವಸ್ತುಗಳು, ಪ್ಲಾಸ್ಟಿಕ್ ಚೀಲಗಳು ಮತ್ತು ಬಾಟಲಿಗಳಂತಹ ಬಳಸಿ ತ್ಯಜಿಸುವ ವಸ್ತುಗಳಾಗಿವೆ. ವಿಶ್ವಬ್ಯಾಂಕ್‌ನ 2021ರ ವರದಿ ಪ್ರಕಾರ, ಜಾಗತಿಕ ಪ್ಲಾಸ್ಟಿಕ್ ಉತ್ಪಾದನೆಯಲ್ಲಿ ಚೀನಾ ಅಗ್ರಸ್ಥಾನದಲ್ಲಿದೆ. ಅದರ ನಂತರ ಅಮೆರಿಕ ಮತ್ತು ಭಾರತ ಪ್ರಮುಖ ಸ್ಥಾನವನ್ನು ಹೊಂದಿವೆ. ತ್ಯಾಜ್ಯದ ದೃಷ್ಟಿಯಿಂದ ನೋಡಿದರೆ, 'ನೇಚರ್' ವರದಿ (2023) ಪ್ರಕಾರ, ಭಾರತವು ವಿಶ್ವದ ಅತಿದೊಡ್ಡ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಕ ರಾಷ್ಟ್ರವಾಗಿದೆ. ಪ್ರತಿವರ್ಷ ಸುಮಾರು 9.3 ದಶಲಕ್ಷ ಮೆಟ್ರಿಕ್ ಟನ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಉತ್ಪಾದಿಸುತ್ತಿದೆ. ಈ ಪಟ್ಟಿಯಲ್ಲಿ ಅಮೆರಿಕವು 34 ದಶಲಕ್ಷ ಟನ್ ಮತ್ತು ಚೀನಾ 29 ದಶಲಕ್ಷ ಟನ್ ತ್ಯಾಜ್ಯ ಉತ್ಪಾದನೆಯೊಂದಿಗೆ ನಂತರದ ಸ್ಥಾನದಲ್ಲಿವೆ.

ಭಾರತದಲ್ಲಿ ಪ್ಲಾಸ್ಟಿಕ್ ತ್ಯಾಜ್ಯದ ಶೇ 40ಕ್ಕಿಂತ ಹೆಚ್ಚು ಭಾಗವು ಸರಿಯಾದ ನಿರ್ವಹಣೆಗೆ ಒಳಪಡದೆ ನೇರವಾಗಿ ನಮ್ಮದೇ ಸುತ್ತಮುತ್ತಲಿನ ನದಿಗಳು, ಮಣ್ಣು ಮತ್ತು ತೆರೆದ ಹೊಲಗಳಲ್ಲಿ ಸೇರುತ್ತಿದೆ. ಬೆಂಗಳೂರಿನಂತಹ ಮಹಾನಗರವು ಪ್ರತಿದಿನ 4,000 ಟನ್ ಘನತ್ಯಾಜ್ಯ ಹೊರಚೆಲ್ಲುತ್ತದೆ ಎಂದು ವರದಿಗಳು ಹೇಳುತ್ತವೆ. ಈ ತ್ಯಾಜ್ಯದಲ್ಲಿ ಬಹುದೊಡ್ಡ ಅಂಶ ಪ್ಲಾಸ್ಟಿಕ್ ಆಗಿದೆ. ಇದೇ ಪ್ರಮಾಣದಲ್ಲಿ ಉತ್ಪಾದನೆ ಮತ್ತು ಬಳಕೆಯ ಧೋರಣೆ ಮುಂದುವರಿದರೆ, 2050ರೊಳಗೆ ಪ್ಲಾಸ್ಟಿಕ್ ಉತ್ಪಾದನೆ ಮೂರು ಪಟ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು 'ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ' (ಒಇಸಿಡಿ) ಎಚ್ಚರಿಸಿದೆ. ಅಂದರೆ, ಪ್ರತಿವರ್ಷದ ಉತ್ಪಾದನೆ, ಮುಂದಿನ ಮೂರು ದಶಕಗಳಲ್ಲಿ 1.8 ಬಿಲಿಯನ್ ಟನ್‌ಗೆ ಏರಲಿದೆ. ವಿಜ್ಞಾನಿಗಳ ಅಂದಾಜಿನ ಪ್ರಕಾರ, ಇದರಿಂದ ಸಮುದ್ರಗಳಲ್ಲಿ ತೇಲಾಡುವ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣವು ಇವತ್ತು ಸಮುದ್ರದಲ್ಲಿರುವ ಮೀನುಗಳ ತೂಕಕ್ಕಿಂತಲೂ ಹೆಚ್ಚು ಆಗಬಹುದು. ಇಷ್ಟೊಂದು ಪ್ರಮಾಣದ ತ್ಯಾಜ್ಯ ನಿರ್ವಹಣೆ ಅಸಾಧ್ಯವಾಗುವುದರಿಂದ, ಭೂಮಿಯ ಮಣ್ಣು, ಜಲಮೂಲಗಳು ಮತ್ತು ವಾಯುಮಂಡಲಕ್ಕೆ ಪ್ಲಾಸ್ಟಿಕ್‌ನ ಸೂಕ್ಷ್ಮ ಕಣಗಳು (ಮೈಕ್ರೊ ಮತ್ತು ನ್ಯಾನೊ ಪ್ಲಾಸ್ಟಿಕ್) ವ್ಯಾಪಕವಾಗಿ ಸೇರುತ್ತವೆ.

ಇತ್ತೀಚಿನ ವೈಜ್ಞಾನಿಕ ಅಧ್ಯಯನಗಳು ಮೈಕ್ರೊ ಪ್ಲಾಸ್ಟಿಕ್‌ಗಳು ಮಾನವ ದೇಹದ ಅತ್ಯಂತ ಸೂಕ್ಷ್ಮ ಅಂಗಾಂಗಗಳವರೆಗೂ ತಲಪುತ್ತಿರುವುದನ್ನು ಸ್ಪಷ್ಟಪಡಿಸಿವೆ. ಒಂದು ಅಧ್ಯಯನದ ಪ್ರಕಾರ, ಗರ್ಭಿಣಿಯರ ಪ್ಲಾಸೆಂಟಾದಲ್ಲಿಯೂ ಮೈಕ್ರೊ ಪ್ಲಾಸ್ಟಿಕ್ ಪತ್ತೆಯಾಗಿದೆ. ರಕ್ತದ ಮಾದರಿ ಮತ್ತು ಶ್ವಾಸಕೋಶಗಳಲ್ಲಿ ಸಹ ಪ್ಲಾಸ್ಟಿಕ್ ಕಣಗಳು ಪತ್ತೆಯಾಗಿವೆ. ವಿಯೆನ್ನಾ ವಿಶ್ವವಿದ್ಯಾಲಯದ ಒಂದು ಅಧ್ಯಯನವು (2023), ಮಾನವನ ಮೆದುಳಿಗೂ ಮೈಕ್ರೊ ಪ್ಲಾಸ್ಟಿಕ್ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಸೂಚಿಸಿದೆ. ನಾವು ಕುಡಿಯುವ ನೀರು, ತಿನ್ನುವ ಪದಾರ್ಥಗಳು, ಉಸಿರಾಡುವ ಗಾಳಿಯ ಮೂಲಕ ಪ್ಲಾಸ್ಟಿಕ್ ಕಣಗಳು ಮನುಷ್ಯನ ದೇಹವನ್ನು ಸೇರುತ್ತಿವೆ. ಹೃದಯಾಘಾತ, ಶ್ವಾಸಕೋಶದ ಕಾಯಿಲೆಗಳು, ಸಂತಾನೋತ್ಪತ್ತಿ ಸಮಸ್ಯೆಗಳು ಮತ್ತು ನರ ಸಂಬಂಧಿ ತೊಂದರೆಗಳು ಹೆಚ್ಚುತ್ತಿರುವುದಕ್ಕೆ ಪ್ಲಾಸ್ಟಿಕ್ ಪ್ರಮುಖ ಕಾರಣವಾಗಿರುವ ಶಂಕೆಯನ್ನು ತಜ್ಞರು ವ್ಯಕ್ತಪಡಿಸುತ್ತಿದ್ದಾರೆ.

ಭಾರತದಲ್ಲೂ, ಮುಂಬೈ ಹಾಗೂ ಚೆನ್ನೈ ಕರಾವಳಿಯಿಂದ ಸಂಗ್ರಹಿಸಿದ ಮೀನುಗಳಲ್ಲಿ ಮೈಕ್ರೊ ಪ್ಲಾಸ್ಟಿಕ್ ಪತ್ತೆಯಾದ ಬಗ್ಗೆ 'ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಫಿಷರೀಸ್ ಎಜುಕೇಷನ್' ವರದಿ (2021) ಮಾಡಿದೆ. ಉಪ್ಪು ಮತ್ತು ಅಕ್ಕಿಯ ಮಾದರಿಗಳಲ್ಲಿಯೂ ಮೈಕ್ರೊ ಪ್ಲಾಸ್ಟಿಕ್ ಕಣಗಳು ಕಂಡುಬಂದಿವೆ. ಅಂದರೆ, ನಾವು ತಿನ್ನುವ ಆಹಾರ, ಕುಡಿಯುವ ನೀರು, ಉಸಿರಾಡುವ ಗಾಳಿ- ಎಲ್ಲವೂ ಪ್ಲಾಸ್ಟಿಕ್‌ನಿಂದ ಮಲಿನಗೊಂಡಿವೆ.

ಈ ಗಂಭೀರ ಪರಿಸ್ಥಿತಿಯಲ್ಲಿ, ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಯಲು ಮತ್ತು ಅದರೊಳಗೆ ಅಡಗಿರುವ ಅಪಾಯಕಾರಿ ರಾಸಾಯನಿಕಗಳನ್ನು ನಿಯಂತ್ರಿಸಲು, ತನ್ಮೂಲಕ ಪ್ಲಾಸ್ಟಿಕ್‌ನಿಂದಾಗಿ ಮಾನವ ಪರಿಸರ, ಮಾನವ ಆರೋಗ್ಯದ ಮೇಲಾಗುತ್ತಿರುವ ಕೆಟ್ಟ ಪರಿಣಾಮಗಳನ್ನು ನಿಯಂತ್ರಿಸಲು, ವಿಶ್ವಸಂಸ್ಥೆ ಪ್ರತಿಪಾದಿಸುತ್ತಿರುವ, 'ಜಾಗತಿಕ ಪ್ಲಾಸ್ಟಿಕ್ ಒಪ್ಪಂದ' ಅತ್ಯಂತ ಮಹತ್ವದ ಅಂತರರಾಷ್ಟ್ರೀಯ ಪ್ರಕ್ರಿಯೆಯಾಗಿದೆ. ಈ ಒಪ್ಪಂದದ ಉದ್ದೇಶ ಪ್ಲಾಸ್ಟಿಕ್‌ನ ಸಂಪೂರ್ಣ ಜೀವನಚಕ್ರವನ್ನು, ಅಂದರೆ- ಉತ್ಪಾದನೆ, ಬಳಕೆ, ತ್ಯಾಜ್ಯ ನಿರ್ವಹಣೆ ಮತ್ತು ರಾಸಾಯನಿಕ ನಿಯಂತ್ರಣ, ಎಲ್ಲವನ್ನು ನಿಯಮಿತಗೊಳಿಸುವುದು. ಎಂಬತ್ತಕ್ಕೂ ಹೆಚ್ಚು ರಾಷ್ಟ್ರಗಳು (ಯುರೋಪಿನ ಎಲ್ಲ ರಾಷ್ಟ್ರಗಳು ಸೇರಿದಂತೆ) ಈ ಒಪ್ಪಂದವನ್ನು ಬೆಂಬಲಿಸುತ್ತಿರುವಾಗ, ಭಾರತ ಇನ್ನೂ ಸ್ಪಷ್ಟವಾದ ನಿಲುವು ತಾಳಿಲ್ಲ.

'ಜಾಗತಿಕ ಪ್ಲಾಸ್ಟಿಕ್ ಒಪ್ಪಂದ'ವು ಭಾರತಕ್ಕೆ ಎರಡು ಪ್ರಮುಖ ಕಾರಣಗಳಿಂದ ಬಹಳ ಮಹತ್ವದ್ದಾಗಿದೆ: 1. ಆರೋಗ್ಯದ ದೃಷ್ಟಿಯಿಂದ. ಭಾರತೀಯ ಜನಸಂಖ್ಯೆ ಜಗತ್ತಿನ ಅತಿದೊಡ್ಡ ಪ್ಲಾಸ್ಟಿಕ್ ತ್ಯಾಜ್ಯದ ಹೊರೆ ಹೊರುತ್ತಿದ್ದು, ಅದರಲ್ಲೂ ಅಪಾಯಕಾರಿ ರಾಸಾಯನಿಕಗಳು ಮಾನವ ದೇಹಕ್ಕೆ ನೇರ ಹಾನಿ ಮಾಡುತ್ತಿರುವುದನ್ನು ಅಧ್ಯಯನಗಳು ಸಾಬೀತುಪಡಿಸಿವೆ. 2. ಪರಿಸರ ಮತ್ತು ಆರ್ಥಿಕ ದೃಷ್ಟಿಯಿಂದ. ಪ್ಲಾಸ್ಟಿಕ್ ತ್ಯಾಜ್ಯದಿಂದ ನದಿಗಳು, ಸಾಗರಗಳು ಹಾಗೂ ಕೃಷಿ ಮಣ್ಣು ಹಾನಿಗೊಳಗಾಗುತ್ತಿವೆ. ಇದರಿಂದ ಮೀನುಗಾರಿಕೆ, ಕೃಷಿ ಮತ್ತು ಪ್ರವಾಸೋದ್ಯಮದಂತಹ ಆರ್ಥಿಕ ಚಟುವಟಿಕೆಗಳಿಗೂ ಹಾನಿ ಉಂಟಾಗಿದೆ.


ಜಾಗತಿಕ ಪ್ಲಾಸ್ಟಿಕ್ ಒಪ್ಪಂದದಲ್ಲಿ ಭಾರತ ಸಕ್ರಿಯ ಪಾತ್ರವಹಿಸಿದರೆ, ದೇಶೀಯ ಕಾನೂನು ರೂಪಿಸುವಲ್ಲಿ ಅಂತರರಾಷ್ಟ್ರೀಯ ಮಾರ್ಗಸೂಚಿಗಳು ಮತ್ತು ವಿಜ್ಞಾನಾಧಾರಿತ ಮಾನದಂಡಗಳು ಸಿಗುತ್ತವೆ. ಇದು ಭಾರತಕ್ಕೆ ಕೇವಲ ಪರಿಸರ ನೀತಿಗಳಿಗೆ ಮಾತ್ರವಲ್ಲ, ಸಾರ್ವಜನಿಕ ಆರೋಗ್ಯ ಮತ್ತು ಭವಿಷ್ಯದ ಪೀಳಿಗೆಯ ಸುರಕ್ಷತೆಗಾಗಿ ಅತ್ಯಂತ ಅವಶ್ಯಕವಾಗಿದೆ.

ಜಾಗತಿಕ ಪ್ಲಾಸ್ಟಿಕ್ ಒಪ್ಪಂದ ಪ್ಲಾಸ್ಟಿಕ್‌ನ ಸಂಪೂರ್ಣ ಜೀವನಚಕ್ರವನ್ನು ನಿಯಂತ್ರಿಸಲು ಬೇಕಾಗಿರುವ, ಅತ್ಯಂತ ಪ್ರಸ್ತುತ ಮತ್ತು ಮಹತ್ವದ ಅಂತರರಾಷ್ಟ್ರೀಯ ಚೌಕಟ್ಟಾಗಿದೆ. ಇದರ ಗುರಿ, ಬರೀ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಮಾತ್ರವಲ್ಲ; ಪ್ಲಾಸ್ಟಿಕ್ ಉತ್ಪಾದನೆ ಕಡಿತಗೊಳಿಸುವುದು, ಪ್ಲಾಸ್ಟಿಕ್ ತಯಾರಿಯಲ್ಲಿ ಬಳಸಲಾಗುವ ಅಪಾಯಕಾರಿ ರಾಸಾಯನಿಕಗಳ ನಿಯಂತ್ರಣ, ಏಕಬಾರಿ ಬಳಕೆಯಾಗುವ ಪ್ಲಾಸ್ಟಿಕ್‌ಗಳ ನಿಷೇಧ ಮತ್ತು ಜಾಗತಿಕ ಮಟ್ಟದಲ್ಲಿ ಕಾನೂನು ರೂಪಿಸುವುದಾಗಿದೆ. ಪರಿಸರ ದೃಷ್ಟಿಯಿಂದ ಇದು ಸಾಗರ ಮಾಲಿನ್ಯ ತಡೆಗಟ್ಟಲು ಹಾಗೂ ಜೀವವೈವಿಧ್ಯ ಕಾಪಾಡಲು ಅವಶ್ಯಕ. ಕಾನೂನು ಮತ್ತು ನೀತಿಯ ದೃಷ್ಟಿಯಿಂದ ನೋಡಿದರೆ, ಈ ಒಪ್ಪಂದವು ಪ್ರತಿ ದೇಶಕ್ಕೂ ಸಮಗ್ರ ರಾಷ್ಟ್ರೀಯ ನಿಯಮಗಳನ್ನು ರೂಪಿಸಲು ಅಂತರರಾಷ್ಟ್ರೀಯ ಚೌಕಟ್ಟನ್ನು ಒದಗಿಸುತ್ತದೆ.

ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ಭಾರತವು ಜಾಗತಿಕ ಪ್ಲಾಸ್ಟಿಕ್ ಒಪ್ಪಂದವನ್ನು ಬೆಂಬಲಿಸಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ವಿನಂತಿಸಿದೆ. ಈಗಾಗಲೇ ಏಕಬಾರಿ ಬಳಸಲಾಗುವ ಪ್ಲಾಸ್ಟಿಕ್‌ಗಳ ನಿಷೇಧದಲ್ಲಿ ತಮಿಳುನಾಡು ಮುಂಚೂಣಿಯಲ್ಲಿದೆ; ತನ್ನ ಪರಿಸರಸ್ನೇಹಿ ನೀತಿಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಜೋಡಿಸುವ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದೆ. ಭಾರತದಂತಹ ದೊಡ್ಡ ತ್ಯಾಜ್ಯ ಉತ್ಪಾದಕ ರಾಷ್ಟ್ರವು ಈ ಒಪ್ಪಂದದಲ್ಲಿ ಭಾಗವಹಿಸುವುದು ಜಾಗತಿಕ ಹೊಣೆಗಾರಿಕೆ ದೃಷ್ಟಿಯಿಂದ ಮಾತ್ರವಲ್ಲ, ದೇಶದ ಆಂತರಿಕ ಪರಿಸರ ನೀತಿಗಳಿಗೆ ಬಲ ತುಂಬುವ ಕಾರಣದಿಂದಲೂ ಮಹತ್ವದ ಹೆಜ್ಜೆಯಾಗಿದೆ. ತಮಿಳುನಾಡಿನ ಕಾಳಜಿಯ ಕ್ರಮ ಇತರ ರಾಜ್ಯಗಳಿಗೆ ಮಾದರಿ ಆಗಬಹುದಾದಂತೆ, ಪರಿಸರ ನೀತಿಗಳನ್ನು ವಿಶ್ವಮಟ್ಟದ ಚಳವಳಿಗೆ ಕೊಂಡೊಯ್ಯುವ ಶಕ್ತಿಯನ್ನು ಭಾರತ ಹೊಂದಿದೆ.

ಗರ್ಭಿಣಿಯರ ಪ್ಲಾಸೆಂಟಾದಿಂದ ಹಿಡಿದು ಮಾನವನ ಮೆದುಳಿನವರೆಗೆ ಮೈಕ್ರೊ ಪ್ಲಾಸ್ಟಿಕ್ ಪ್ರವೇಶಿಸಿರುವುದನ್ನು ವೈಜ್ಞಾನಿಕ ಅಧ್ಯಯನಗಳು ದೃಢಪಡಿಸಿರುವಾಗ, ಇದನ್ನು 'ಬರೀ ತ್ಯಾಜ್ಯದ ಸಮಸ್ಯೆ' ಎಂದು ಕಾಣಲು ಸಾಧ್ಯವಿಲ್ಲ. ಜಾಗತಿಕ ಪ್ಲಾಸ್ಟಿಕ್ ಒಪ್ಪಂದದ ಅಗತ್ಯ ಅಂತರರಾಷ್ಟ್ರೀಯ ರಾಜತಾಂತ್ರಿಕತೆಯ ವಿಷಯವಷ್ಟೇ ಅಲ್ಲ; ಅದು, ಭಾರತದ ಭವಿಷ್ಯವನ್ನು ಸುರಕ್ಷಿತಗೊಳಿಸುವ ಹಾದಿಯಾಗಿದೆ.

ಲೇಖಕಿ: ಸಂಶೋಧಕರು, ಮ್ಯೂನಿಕ್ ತಾಂತ್ರಿಕ ವಿಶ್ವವಿದ್ಯಾಲಯ, ಜರ್ಮನಿ



ವಾಚಕರ ವಾಣಿ

ಥಾಣೆ ಪೊಲೀಸರ ಅನುಕರಣೀಯ ಕ್ರಮ

ಮಹಾರಾಷ್ಟ್ರದ ಥಾಣೆಯಲ್ಲಿ ಫೆ. 10 ಮತ್ತು 20ರಿಂದ 10ನೇ ಹಾಗೂ 12ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ಆರಂಭವಾಗಲಿದೆ. ಈ ವೇಳೆ ವಿದ್ಯಾರ್ಥಿಗಳಿಗೆ ಸಂಚಾರ ಸಮಸ್ಯೆ ಎದುರಾಗದಂತೆ ಎಚ್ಚರವಹಿಸಲು ಅಲ್ಲಿನ ಸಂಚಾರ ಪೊಲೀಸ್ ಇಲಾಖೆಯು ಟ್ರಾಫಿಕ್ ಪೊಲೀಸ್ ರೈಡರ್‌ಗಳನ್ನು ನಿಯೋಜಿಸಿದೆ. ಪರೀಕ್ಷೆಯ ದಿನಗಳಲ್ಲಿ ಸಂಚಾರದಟ್ಟಣೆ, ವಾಹನ ಅಥವಾ ಇತರೆ ಸಮಸ್ಯೆಗಳಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸದಂತೆ ಈ ರೈಡರ್‌ಗಳು ಕಾರ್ಯ ನಿರ್ವಹಿಸಲಿದ್ದಾರೆ. ವಿದ್ಯಾರ್ಥಿಗಳನ್ನು ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ತಲಪಿಸಲು ಸಹಾಯ ಮಾಡುತ್ತಾರೆ. ಪರೀಕ್ಷೆಯ ವೇಳೆ ವಿದ್ಯಾರ್ಥಿಗಳು ಮಾನಸಿಕ ಒತ್ತಡದಲ್ಲಿ ಇರುತ್ತಾರೆ. ಸಂಚಾರದಟ್ಟಣೆಯಲ್ಲಿ ಸಿಲುಕಿಕೊಂಡರೆ ಅವರ ಪರಿಸ್ಥಿತಿ ಹೇಳತೀರದು. ಕಳೆದ ವರ್ಷ ಸುಮಾರು 34 ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ತಲಪಲು ರೈಡರ್‌ಗಳು ನೆರವಾಗಿದ್ದಾರೆ. ಇಂತಹ ಯೋಜನೆ ಕರ್ನಾಟಕದಲ್ಲೂ ಕಾರ್ಯಗತವಾಗಲಿ

ಎ.ಜೆ. ಜಾವೀದ್, ಹಾಸನ

ಅಂಚೆ ಇಲಾಖೆ ದಕ್ಷತೆ ಮುಂದುವರಿದೀತೆ?

ನಾನು ನಿವೃತ್ತ ಅಂಚೆ ಪೇದೆ. ಇತ್ತೀಚೆಗೆ ಒಂದು ಲಕೋಟೆಯನ್ನು ರಾಮದುರ್ಗದ ಅಂಚೆ ಕಚೇರಿಯಿಂದ ಹುಬ್ಬಳ್ಳಿ ನವನಗರದಲ್ಲಿರುವ ನಿವೃತ್ತ ಸಿಜಿಎಚ್‌ಎಸ್ ಸೆಕ್ರೆಟರಿಗೆ ಜನವರಿಯಲ್ಲಿ ಪೋಸ್ಟ್ ಮಾಡಿದ್ದೆ. ಅದು ಅವರಿಗೆ ಮುಟ್ಟಿಲ್ಲ. ಡಿ. 27 ರಂದು ರಾಮದುರ್ಗದ ಕಚೇರಿಯಿಂದಲೇ ರಾಯಚೂರಿಗೆ ಸಾದಾ ಲಕೋಟೆಯಲ್ಲಿ ಒಂದು ಪತ್ರ ಕಳುಹಿಸಿದ್ದೆ. ಅದು ಕೂಡ ತಲಪಿಲ್ಲ. ಈ ಮೊದಲು ಸಾದಾಪತ್ರ ಕಳುಹಿಸುವುದಕ್ಕೆ ಅಂಚೆ ಕಚೇರಿಯಲ್ಲಿ ಒಂದು ಫಾರ್ಮ್‌ಗೆ ಒಂದು ರೂಪಾಯಿಯ ಸ್ಟ್ಯಾಂಪ್ ಹಚ್ಚಿ ರಸ್ತೆ ಹಾಕಿ ಕೊಡುತ್ತಿದ್ದರು. ಅದು ಕಳುಹಿಸಿದ್ದಕ್ಕೆ ದಾಖಲೆಯಾಗುತ್ತಿತ್ತು. ಈಗ ಅದನ್ನು ತೆಗೆದುಹಾಕಿದ್ದಾರೆ. ಇಲಾಖೆಯು ಸದಾಪತ್ರಗಳನ್ನು ಮುಟ್ಟುತ್ತಿಲ್ಲ. ಸ್ಪೀಡ್‌ಪೋಸ್ಟ್ ದುಬಾರಿಯಾಗಿದೆ. ಬಡಜನರಿಗೆ ಅಷ್ಟು ದುಡ್ಡು ಕೊಟ್ಟು ಪತ್ರ ಕಳಿಸುವುದು ಅಸಾಧ್ಯ. ಸಾದಾಪತ್ರ ತಲಪಿಸದಿದ್ದರೆ ಅಂಚೆ ಕಚೇರಿಯ ವಿಶ್ವಾಸ ಉಳಿಯುವುದಾದರೂ ಹೇಗೆ?

ಬಿ.ಎಸ್. ಮುಳ್ಳೂರ, ಹಲಗತ್ತಿ

ರೈಲ್ವೆ ಮತ್ತು ಮೌನವ್ರತಸ್ಥ ಸಂಸದರು

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ರೈಲ್ವೆ ಯೋಜನೆಗಳ ಅನುಷ್ಠಾನಕ್ಕಾಗಿ ₹23,926 ಕೋಟಿ ಪಡೆದ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ₹7,748 ಕೋಟಿ ದಕ್ಕಿಸಿಕೊಂಡು ಕರ್ನಾಟಕ ಕೊನೇ ಸ್ಥಾನದಲ್ಲಿದೆ! ಸಂಸದರಾದ ವಿ. ಸೋಮಣ್ಣನವರೇ ಕೇಂದ್ರದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದಾರೆ. ಕರ್ನಾಟಕಕ್ಕೆ ದಕ್ಕಿರುವ ಅನುದಾನವನ್ನೇ ಭಾರೀ ಪ್ರಮಾಣದ್ದು ಎಂಬಂತೆ ಅವರು ಬಿಂಬಿಸುತ್ತಿರುವುದು ಹಾಸ್ಯಾಸ್ಪದ. ಕೇಂದ್ರದಲ್ಲಿ ಭವಿಷ್ಯದುದ್ದಕ್ಕೂ ಕೊನೆಯ ಸ್ಥಾನಕ್ಕೆ ತೃಪ್ತಿಪಡಬೇಕಾದ 'ಕರ್ನಾಟಕದ ದೌರ್ಭಾಗ್ಯ'ಕ್ಕೆ ರಾಜ್ಯದ 'ಮೌನವ್ರತಸ್ಥ ಸಂಸದ' ಮಹಾಶಯರೇ ಕಾರಣಕರ್ತರು ಎಂಬುದಕ್ಕೆ ರೈಲ್ವೆ ಅನುದಾನವೇ ನಿದರ್ಶನ.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ನಕಲಿ ಪಿಎಚ್.ಡಿಗಳಿಗೆ ಲಗಾಮು ಅಗತ್ಯ

ಯುಜಿಸಿ ಮಾನ್ಯತೆಗೆ ಒಳಪಟ್ಟ ವಿಶ್ವವಿದ್ಯಾಲಯಗಳು ಸಂಶೋಧನಾ ಮನೋಭಾವ ಬೆಳೆಸುವ ಉದ್ದೇಶದಿಂದ ಪಿಎಚ್.ಡಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವುದು ವಾಡಿಕೆ. ಅದರಂತೆ ಸರ್ಕಾರಿ ವಿ.ವಿಗಳ ಜೊತೆಗೆ ಸ್ವಾಯತ್ತ ವಿ.ವಿಗಳು, ಖಾಸಗಿ ವಿ.ವಿಗಳು ಹಾಗೂ ತಾಂತ್ರಿಕ ವಿ.ವಿಗಳು ಸಂಶೋಧನೆಗೆ ಅರ್ಜಿ ಆಹ್ವಾನಿಸುತ್ತವೆ. ಯುಜಿಸಿ ನಿಯಮಗಳಿಗೆ ಅನುಗುಣವಾಗಿ ಕೆಲವೊಂದು ವಿ.ವಿಗಳಿವೆ. ಕೆಲವು ವಿ.ವಿಗಳು ಸ್ಥಳೀಯತೆಗೆ ಅನುಗುಣವಾಗಿ ಯುಜಿಸಿ ನಿಯಮಗಳನ್ನು ಗಾಳಿಗೆ ತೂರಿ ಸಂಶೋಧನೆಗೆ ಅವಕಾಶ ನೀಡುತ್ತಿವೆ. ಇದೇ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ನಕಲಿ ಪಿಎಚ್.ಡಿ ಪ್ರಮಾಣಪತ್ರ ಸಲ್ಲಿಸಿ ನೇಮಕಗೊಳ್ಳಲು ಕಾರಣವಾಗಿದೆ. ಇನ್ನೂ ಮುಂದಾದರೂ ನಕಲಿ ಪಿಎಚ್.ಡಿ ಪದವಿ ನೀಡುವ ವಿ.ವಿಗಳ ವಿರುದ್ಧ ಯುಜಿಸಿ ಕಠಿಣ ಕ್ರಮ ಜರುಗಿಸಬೇಕಿದೆ.

ದಿವಾಕರ್ ಡಿ., ಮದ್ದೂರು

ನೇಮಕಾತಿ ತಡ: ಚುನಾವಣೆಗೆ ಬಹಿಷ್ಕಾರ

ರಾಜ್ಯದಲ್ಲಿ ಶಿಕ್ಷಕರ ಕೊರತೆಯಿಂದ ಸರ್ಕಾರಿ ಶಾಲೆಗಳ ಸ್ಥಿತಿ ಅಸ್ತವ್ಯಸ್ತಗೊಂಡಿದೆ. ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಸರ್ಕಾರ ಹಲವು ಬಾರಿ ಭರವಸೆ ನೀಡಿದರೂ, ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಶಾಲೆಗಳು ದುರ್ಬಲವಾದರೆ ಸಮಾಜ ದುರ್ಬಲವಾಗಲಿದೆ. ಆದರೆ, ನೇಮಕಾತಿ ವಿಷಯದಲ್ಲಿ ಸರ್ಕಾರದ್ದು ನಿರ್ಲಕ್ಷ್ಯದ ಧೋರಣೆ. ರಾಜ್ಯದಲ್ಲಿ ಸುಮಾರು 75 ಸಾವಿರ ಶಿಕ್ಷಕರ ಕೊರತೆಯಿದೆ. ಇದನ್ನು ಕಂಡೂಕಾಣದಂತೆ ಸರ್ಕಾರ ಉಚಿತ ಭಾಗ್ಯಗಳಲ್ಲಿ ತಲ್ಲೀನವಾಗಿದೆ. ತ್ವರಿತವಾಗಿ ಶಿಕ್ಷಕರ ನೇಮಕಾತಿ ಕೈಗೊಳ್ಳದಿದ್ದರೆ ಮುಂಬರುವ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಚುನಾವಣೆ ಬಹಿಷ್ಕರಿಸುವುದರ ಹೊರತು ಉದ್ಯೋಗಾಕಾಂಕ್ಷಿಗಳಿಗೆ ಅನ್ಯಮಾರ್ಗವಿಲ್ಲ.

ಮುತ್ತು ಕುಂಟೋಜಿ, ದೇವರಹಿಪ್ಪರಗಿ

'ಉರಿವ ಕೆಂಡದ ಸಿಟ್ಟು' ಎಲ್ಲರದಾಗಲಿ...

ತಿದ್ದುವ ತಿವಿಯುವ 'ಕಾವ್ಯಖಡ್ಗ' ಲೇಖನದಲ್ಲಿ (ಲೇ: ವೈ.ಎಸ್.ವಿ. ದತ್ತ, ಪ್ರ.ವಾ., ಫೆ. 7) 'ಚೈತ್ರದ ಕವಿ' ಜಿ.ಎಸ್. ಶಿವರುದ್ರಪ್ಪರ ಜನ್ಮಶತಾಬ್ದಿ ವರ್ಷದಲ್ಲಿ ಅವರ ಕವಿತೆಗಳನ್ನು ವರ್ತಮಾನದ ಕಾಲಕ್ಕೆ ವಿಶ್ಲೇಷಣೆ ಮಾಡಿರುವುದು ಸೊಗಸಾಗಿದೆ. ಪ್ರಸ್ತುತ ಸಮಾಜದಲ್ಲಿ ಎದುರಾಗಿರುವ ಬಿಕ್ಕಟ್ಟುಗಳು ಒಂದೆರಡಲ್ಲ. ಅವುಗಳಿಗೆ ಪರಿಹಾರ ಹುಡುಕುವುದೇ ಸವಾಲಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮೊದಲು ನಮ್ಮಲ್ಲಿ ಸಾತ್ವಿಕ ಸಿಟ್ಟು ಮೂಡಬೇಕು. ಸಮಾಜದಲ್ಲಿ ಉರಿವ ಕೆಂಡದ ಉಂಡೆಯಾಗುವ ಈ ಸಾತ್ವಿಕ ಸಿಟ್ಟು ನಮ್ಮೆಲ್ಲರದ್ದಾಗಬೇಕಿದೆ.

ಸುನಂದಾ ಜಯರಾಂ, ಮಂಡ್ಯ

ಚುರುಮುರಿ



ಲೋಕಲ್ ಹೈಕಮಾಂಡ್

• ಸುಮಂಗಲಾ

ಪೇಪರು ಓದುತ್ತಿದ್ದ ಬೆಕ್ಕಣ್ಣ 'ಒಂದು ಕಂಪನಿಗೆ ಎಷ್ಟು ಮಂದಿ ಸಿಇಒ ಇರತಾರೆ?' ಎಂದು ಕೇಳಿತು.

'ಒಬ್ಬರು' ಎಂದೆ.

'ಒಂದು ಕಂಪನಿಗೆ ನಿರ್ದೇಶಕರ ಮಂಡಳಿ ಎಷ್ಟು ಇರತೈತಿ?' ಎಂದು ಕೇಳಿತು.

'ಒಂದೇ ಇರತೈತಲೇ' ಎಂದೆ.

'ಒಂದು ಪಕ್ಷಕ್ಕೆ ಎಷ್ಟು ಹೈಕಮಾಂಡ್ ಇರತೈತಿ?' ಎಂದು ಮತ್ತೆ ಪ್ರಶ್ನೆ ಹಾಕಿತು.

'ಅದೂ ಒಂದೇ ಇರತೈತಿ, ಹೌದಿಲ್ಲೋ?' ನನಗೂ ಅನುಮಾನವಾಯಿತು.

ಕ್ವಿಜ್ ಪ್ರಶ್ನೆ ನಿಲ್ಲಿಸಿದ ಬೆಕ್ಕಣ್ಣ, 'ಅಲ್ಲೇ ಇರೂದು ಮಜಾ. ಈಗ ಕೆಲವು ಪಕ್ಷಗಳಿಗೆ ಎರಡು ಹೈಕಮಾಂಡ್ ಇರತಾವು. ತಿಳಕೋ!' ಎಂದು ಮುಗುಮ್ಮಾಗಿ ಹೇಳಿತು.

'ಯಾವುದೇ ಪಕ್ಷದಾಗೆ ಮುಖ್ಯ ನಾಯಕರ ಗಂಡು ಮಕ್ಕಳು ಅಗದಿ ಸ್ಟ್ರಾಂಗ್ ಆಗಿ ಬೆಳೆದರೆ, ಅವರೇ ಒಂದು ಲೋಕಲ್ ಹೈಕಮಾಂಡ್! ಕೈಪಕ್ಷದಾಗೆ ಯತೀಂದ್ರಣ್ಣನೇ ಲೋಕಲ್ ಹೈಕಮಾಂಡ್. ಡಿಕೇಶಂಕಲ್ಲೂ ಅದನ್ನು ಒಪ್ಪಿಕೊಂಡಾರೆ' ಎಂದು ನಕ್ಕಿತು.

'ಡಿಕೇಶಂಕಲ್ಲು ಹೇಳಿದ್ದು ವ್ಯಂಗ್ಯವಾಗಿ ಕಣಲೇ. ಇಷ್ಟ್ ವರ್ಷದಿಂದ ಕೈಪಕ್ಷಕ್ಕೆ ಬಂಡೆ ಅಡಿಗಲ್ಲಾಗಿ ಇದ್ದವರು ಈಗೀಗ ರಾಜಕೀಯಕ್ಕೆ ಇಳಿದ ಬಚ್ಚಾಗಳ ಮಾತನ್ನು ಹೆಂಗೆ ಒಪ್ಪತಾರೆ?'

'ಜನರು, ಶಾಸಕರು, ಮಾಧ್ಯಮದವರು ಎಲ್ಲರೂ ಡಿಕೇಶಂಕಲ್ಲು ಸಿಎಂ ಆಗಲಿ ಅಂತ ಕನಸು ಕಾಣುತ್ತಿದ್ದಾರಂತೆ. ಖರೇ ಅಂದ್ರ ನನ್ನ ಕನಸಿನಾಗೂ ಡಿಕೇಶಂಕಲ್ಲು ಸಿಎಂ ಕುರ್ಚಿ ಮೇಲೆ ಕುಂತಿದ್ದರು!' ಎಂದಿತು ಬೆಕ್ಕಣ್ಣ.

'ಆಹಾ! ಇನ್ನು ಹೈಕಮಾಂಡು ಕನಸು ಕಾಣೋದೊಂದೇ ಬಾಕಿ!' ಎಂದೆ ವ್ಯಂಗ್ಯವಾಗಿ.

'ದಿಲ್ಲೀ ಹೈಕಮಾಂಡು ಕನಸು ಕಂಡರೂ, ಲೋಕಲ್ ಹೈಕಮಾಂಡು ಆ ಕನಸು ಕಾಣಂಗಿಲ್ಲ!' ಎಂದು ಬೆಕ್ಕಣ್ಣ ನಕ್ಕಿತು.

'ಇವರು ಹಿಂಗೇ ಸಿಎಂ ಕುರ್ಚಿಗೆ ಕಿತ್ತಾಡತಿದ್ದರೆ, ಮುಂದಿನ ಚುನಾವಣೆಯಲ್ಲಿ ಗೆಲ್ಲೋ ಕನಸು ದೂರ ಉಳೀತು' ಎಂದೆ ಸಿಟ್ಟಿನಿಂದ.

'ಮುಂದಿನ ಚುನಾವಣೆ, ಶ್ರೀಸಾಮಾನ್ಯರ ಹಿತದ ಕನಸು ಯಾರಿಗೆ ಬೇಕಾಗೈತಿ? ಹತ್ತು ತಲೆಮಾರಿಗೆ ಆಗುವಷ್ಟು ಆಸ್ತಿ, ಅಧಿಕಾರ ಅಷ್ಟೇ ಇವರ ಕನಸು' ಎಂದು ಬೆಕ್ಕಣ್ಣನೂ ಗುರುಗುಟ್ಟಿತು.

ಸಂಗತ

ದೇಶ ಸೋಲುವಾಗ ಪ್ರಧಾನಿ ಗೆಲ್ಲುವರೆ?

ಅಮೆರಿಕದೊಂದಿನ 'ವ್ಯಾಪಾರ ಒಪ್ಪಂದ'ವು ಹಲವಾರು ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ ಹಾಗೂ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವಂತಿದೆ.

• ವಿಕಾಸ್ ಆರ್. ಮೌರ್ಯ

ಭಾರತದ ಸಂವಿಧಾನವು ಭಾರತವನ್ನು ಸಾರ್ವಭೌಮ ರಾಷ್ಟ್ರವೆಂದು ಘೋಷಿಸಿದೆ. ನಮ್ಮ ದೇಶದ ಎಲ್ಲ ತೀರ್ಮಾನಗಳನ್ನೂ ನಾವೇ ಚುನಾಯಿಸಿ ಕಳಿಸಿದ ಸರ್ಕಾರವು ನಮ್ಮ ಪರವಾಗಿ ತೆಗೆದುಕೊಳ್ಳಬೇಕು. ಅದೂ ಸಹ ಕೆಳಮನೆ ಮತ್ತು ಮೇಲ್ಮನೆಗಳ ಬಹುಮತದ ಒಪ್ಪಿಗೆಯ ಮೇರೆಗೆ. ಭಾರತೀಯರು ಭಾರತದ ಸಂವಿಧಾನದ ಮೂಲಕ ಒಕ್ಕೂಟ ಸರ್ಕಾರ ಮತ್ತು ರಾಜ್ಯಗಳ ಸರ್ಕಾರಗಳಿಗಲ್ಲದೇ ಬೇರೆ ಯಾರಿಗೂ ಈ ಅಧಿಕಾರವನ್ನು ನೀಡಿಲ್ಲ. ಸತ್ಯ ಹೀಗಿರುವಾಗ, ಭಾರತದೊಂದಿಗೆ ಭಾರತಕ್ಕೇ ಹಾನಿಯುಂಟು ಮಾಡುವ ಸುಂಕ ನೀತಿಯನ್ನು ಹಾಗೂ ವ್ಯಾಪಾರ ಒಪ್ಪಂದವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸುವುದು ಎಷ್ಟು ಸರಿ?

ಫೆಬ್ರುವರಿ 2ರಂದು ತಮ್ಮ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಟ್ರಂಪ್ ಅವರು ಕೆಲವು ಘೋಷಣೆಗಳನ್ನು ಮಾಡಿದ್ದಾರೆ. ಅವರು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಕರೆ ಮಾಡಿ, ತತ್‌ಕ್ಷಣದಿಂದ ಜಾರಿಗೆ ಬರುವಂತೆ ಕೆಲವು ಒಪ್ಪಂದ ಮಾಡಿಕೊಂಡಿರುವುದಾಗಿ ಹೇಳಿದ್ದಾರೆ. ಆ ಒಪ್ಪಂದಗಳೇನೆಂದರೆ, ಭಾರತವು ಇನ್ನು ಮುಂದೆ ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿ, ಅಮೆರಿಕ-ವೆನೆಜುವೆಲಾದಿಂದ ತೈಲ ಖರೀದಿ ಮಾಡುತ್ತದೆ. ಅದಕ್ಕೆ ಬದಲಾಗಿ ಭಾರತದ ಉತ್ಪನ್ನಗಳ ಮೇಲೆ ಅಮೆರಿಕದಲ್ಲಿ ವಿಧಿಸುವ ಸುಂಕದ ಪ್ರಮಾಣವನ್ನು ಶೇ 18ಕ್ಕೆ ಇಳಿಸಲಾಗುತ್ತದೆ. ಅಷ್ಟೇ ಅಲ್ಲ, ಭಾರತವು ಅಮೆರಿಕದ ಸರಕುಗಳ ಮೇಲೆ ಶೂನ್ಯ ಸುಂಕ ವಿಧಿಸುತ್ತದೆ! ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ 500 ಬಿಲಿಯನ್ ಡಾಲರ್ (₹45 ಲಕ್ಷ ಕೋಟಿ) ಮೊತ್ತದ ಇಂಧನ, ತಂತ್ರಜ್ಞಾನ, ಕೃಷಿ ಉತ್ಪನ್ನ ಮತ್ತು ಕಲ್ಲಿದ್ದಲು ಖರೀದಿಸಲು ಭಾರತ ಒಪ್ಪಿದೆ ಎಂದು ಹೇಳಲಾಗಿದೆ.

ಇಲ್ಲಿ ಏಳುವ ಸಾಮಾನ್ಯ ಪ್ರಶ್ನೆ ಏನೆಂದರೆ, ಈ ಒಪ್ಪಂದದಿಂದ ಭಾರತಕ್ಕೆ ಯಾವ ರೀತಿಯ ಲಾಭವಾಗಲಿದೆ? ಸ್ವಲ್ಪಮಟ್ಟಿಗಿನ ಸುಂಕ ಇಳಿಸಿಕೊಳ್ಳಲು ಭಾರತ ಅಗಾಧ ನಷ್ಟಕ್ಕೊಳಗಾಗುವುದಲ್ಲದೆ, ತನ್ನ ಸಾರ್ವಭೌಮತ್ವದೊಂದಿಗೆ ರಾಜಿ ಮಾಡಿಕೊಳ್ಳಬೇಕೆ? ನಮ್ಮ ದೇಶ ಯಾರೊಂದಿಗೆ ಏನನ್ನು ಯಾವಾಗ ಖರೀದಿ ಮಾಡಬೇಕು ಎಂಬುದನ್ನು ಅಮೆರಿಕದ ಅಧ್ಯಕ್ಷರು ಹೇಗೆ ತೀರ್ಮಾನಿಸಲು ಸಾಧ್ಯ? ಅದಕ್ಕೆ ಭಾರತ ಸರ್ಕಾರವೇಕೆ ಒಪ್ಪಿಕೊಳ್ಳಬೇಕು? ಎಲ್ಲಿ ತೈಲ ಬೆಲೆ ಕಡಿಮೆ ಇರುತ್ತದೆಯೋ ಅಲ್ಲಿ ಖರೀದಿ ಮಾಡಿದರೆ ಭಾರತೀಯರಿಗೆ ಒಳಿತಲ್ಲವೇ?

ನಮ್ಮ ದೇಶವು ಅಮೆರಿಕದ ಉತ್ಪನ್ನಗಳಿಗೆ ಶೂನ್ಯ ಸುಂಕ ವಿಧಿಸುವಾಗ, ಅಮೆರಿಕ ಕೂಡ ಭಾರತದ ಉತ್ಪನ್ನಗಳಿಗೆ ಶೂನ್ಯ ಸುಂಕವನ್ನೇ ವಿಧಿಸುವುದು ನ್ಯಾಯಯುತ. ಶೇ 18ರಷ್ಟು ಸುಂಕವನ್ನು ಭಾರತ ಸರ್ಕಾರ ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲ. ಟ್ರಂಪ್ ಘೋಷಿಸಿರುವಂತೆ ಅಮೆರಿಕದ ಉತ್ಪನ್ನಗಳನ್ನು ಅಷ್ಟೊಂದು ಪ್ರಮಾಣದಲ್ಲಿ ಖರೀದಿ ಮಾಡಿದರೆ 'ಮೇಕ್ ಇನ್ ಇಂಡಿಯಾ' ಬರೀ ಘೋಷಣೆಯಾಗಿಯೇ ಉಳಿಯುತ್ತದೆ. ನಮ್ಮ ರೈತರು ಬೀದಿಪಾಲಾಗುತ್ತಾರೆ. ಕಲ್ಲಿದ್ದಲಿನ ಗಣಿಗಾರಿಕೆ ಹಾಗೂ ಸೋಲಾರ್ ವಿದ್ಯುತ್ ಉತ್ಪಾದನೆಗೆ ನೀಡುತ್ತಿರುವ ಸರ್ಕಾರದ ಸಹಕಾರ ಸಂಪೂರ್ಣ ನೆಲಕಚ್ಚುತ್ತದೆ.



ಮೇಲ್ನೋಟಕ್ಕೆ ಟ್ರಂಪ್ ಘೋಷಿತ ಒಪ್ಪಂದವು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ. ಇಲ್ಲಿಯವರೆಗೆ ಭಾರತ ಸರ್ಕಾರದಿಂದ ಸಮರ್ಪಕ ಸ್ಪಷ್ಟೀಕರಣ ಬರದಿರುವುದು ಸಹ ಇಲ್ಲೇನೋ ನಡೆದಿದೆ ಎಂಬುದನ್ನು ಸೂಚಿಸುತ್ತಿದೆ. ನಮ್ಮ ಪ್ರಧಾನಿಯವರು ಅಮೆರಿಕ ಸುಂಕ ಕಡಿತಗೊಳಿಸಿದ್ದರ ಬಗ್ಗೆ ಪ್ರಸ್ತಾಪಿಸಿ ಟ್ರಂಪ್‌ಗೆ ಧನ್ಯವಾದ ಹೇಳಿ ಟ್ವೀಟ್ ಮಾಡಿದ್ದಾರೆ ಅಷ್ಟೆ. ಆದರೆ, ಟ್ರಂಪ್ ಘೋಷಣೆಗಳನ್ನು ಅಲ್ಲಗೆಳೆದಿಲ್ಲ. ಈ ನಡುವೆ 'ಮೇಕ್ ಅಮೆರಿಕ ಗ್ರೇಟ್ ಎಗೈನ್'ಗಾಗಿ ಟ್ರಂಪ್ ಭಾರತವನ್ನು ಬಗ್ಗಿಸಿದ್ದಾರೆ ಎಂದು ಅಮೆರಿಕ ಮಾಧ್ಯಮಗಳು ಹರ್ಷ ವ್ಯಕ್ತಪಡಿಸುತ್ತಿದ್ದರೆ, ಭಾರತದ ಮಾಧ್ಯಮಗಳು ಭಾರತೀಯರಿಗಾಗಿರುವ ಮಹಾಸೋಲನ್ನು ಪ್ರಧಾನಿಯವರ ದಿಗ್ವಿಜಯವೆಂದು ಸಂಭ್ರಮಿಸುತ್ತಿವೆ. ಭಾರತೀಯರು ಸೋಲುವಾಗ ಪ್ರಧಾನಿಯವರು ಗೆಲ್ಲಲು ಹೇಗೆ ಸಾಧ್ಯ?

ಈ ಹಿಂದೆಯೂ ಟ್ರಂಪ್ ಏಕಾಏಕಿ ಭಾರತದ ಉತ್ಪನ್ನಗಳ ಮೇಲೆ ಸುಂಕ ಸಮರ ಸಾರಿದಾಗ ಭಾರತ ಸರ್ಕಾರವು ಅದನ್ನು 'ಅಸಮರ್ಥನೀಯ, ಅನ್ಯಾಯ ಮತ್ತು ವಿಚಾರಹೀನ' ಎಂದು ಹೇಳಿತ್ತು. ಆದರೆ, ಈಗ ಭಾರತಕ್ಕೆ ಅತ್ಯಂತ ನಷ್ಟ ಉಂಟುಮಾಡುವ ಒಪ್ಪಂದಕ್ಕೆ ತಲೆದೂಗುತ್ತಿದೆ. ಇಂತಹ ವ್ಯಕ್ತಿಗೇಕೆ 'ನಮಸ್ತೆ ಟ್ರಂಪ್' ಎಂದು ಎತ್ತಿ ಮೆರೆಸಿದೆವು ಎನ್ನುವುದು ತಿಳಿಯುತ್ತಿಲ್ಲ.

140 ಕೋಟಿ ಭಾರತೀಯರ ಸಾರ್ವಭೌಮತ್ವವನ್ನು 35 ಕೋಟಿ ಅಮೆರಿಕದವರು ನಿರ್ಧರಿಸುವುದೆಂದರೆ, ನಮ್ಮ ಪ್ರಜಾಪ್ರಭುತ್ವವನ್ನು ನಾವೆಲ್ಲಿಗೆ ತಂದು ನಿಲ್ಲಿಸಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ. ಭಾರತದಂತಹ ಅತಿದೊಡ್ಡ ಪ್ರಜಾಪ್ರಭುತ್ವ ದೇಶದೊಂದಿಗೆ ಅಮೆರಿಕ ಅಧ್ಯಕ್ಷ ನಡೆಸುತ್ತಿರುವ ಹುಡುಗಾಟಕ್ಕೆ ಇದುವರೆಗೆ ಭಾರತದಿಂದ ಸರಿಯಾದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧ ನಿಲ್ಲಿಸಿರುವುದಾಗಿ ಟ್ರಂಪ್ ಪದೇ ಪದೇ ಘೋಷಿಸಿಕೊಳ್ಳುತ್ತಿದ್ದರೂ ಭಾರತ ಸರ್ಕಾರದಿಂದ ಯಾವುದೇ ಸ್ಪಷ್ಟೀಕರಣ ಬಂದಿಲ್ಲ. ಆದರೆ, ವ್ಯಾಪಾರ ಒಪ್ಪಂದದ ಕುರಿತು ಭಾರತ ಸರ್ಕಾರ ಸ್ಪಷ್ಟೀಕರಣ ನೀಡಲೇಬೇಕಿದೆ. ರಾಜಕೀಯ ತಂತ್ರಗಾರಿಕೆಯ ನೆಪವೊಡ್ಡಿ ಭಾರತೀಯರು ಕಷ್ಟಪಟ್ಟು ಪಡೆದುಕೊಂಡಿರುವ ಸಾರ್ವಭೌಮತ್ವವನ್ನು ಮತ್ತೆ ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಭಾರತ ವಿಶ್ವಗುರು ಆಗದಿದ್ದರೂ ಸರಿಯೇ, ಕಷ್ಟಪಟ್ಟು ಪಡೆದುಕೊಂಡಿರುವ ಸ್ವರಾಜ್ಯದಲ್ಲಾಗುವ ಕಿಂಚಿತ್ತು ಕದಲಿಕೆಯನ್ನೂ ಭಾರತೀಯರು ಸಹಿಸುವುದಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತ-ಅಮೆರಿಕ ವ್ಯಾಪಾರ ಒಪ್ಪಂದ; ಹಲವು ಅಂಶಗಳಿಗೆ ಆಕ್ಷೇಪ, ಕೃಷಿ ವಲಯ ಅತಂತ್ರವಾಗುವ ಆತಂಕ

ಟ್ರಂಪ್ ಒತ್ತಡ ತಂತ್ರಕ್ಕೆ ಮಣಿಯಿತೇ ಭಾರತ?

ಭಾರತ ಮತ್ತು ಅಮೆರಿಕದ ನಡುವೆ ಏರ್ಪಟ್ಟಿರುವ ಮಧ್ಯಂತರ ವ್ಯಾಪಾರ ಒಪ್ಪಂದವು ಭಾರತದ ರಫ್ತುದಾರರಿಗೆ ವಿಶಾಲ ಮಾರುಕಟ್ಟೆ ಒದಗಿಸಲಿದೆ ಎಂದು ಹೇಳಲಾಗುತ್ತಿದೆಯಾದರೂ, ಅದರಲ್ಲಿನ ಕೆಲವು ಅಂಶಗಳಿಗೆ ಆಕ್ಷೇಪವೂ ವ್ಯಕ್ತವಾಗಿದೆ. ಅಮೆರಿಕದಿಂದ ಆಮದು ಮಾಡಲಾಗುವ ಕೆಲವು ತಾಜಾ ಮತ್ತು ಸಂಸ್ಕರಿಸಿದ ಹಣ್ಣುಗಳು, ಪಶುಆಹಾರಕ್ಕೆ ಬಳಸುವ ಗೋವಿನ ಜೋಳ, ಸೋಯಾಬೀನ್ ಎಣ್ಣೆಯ ಮೇಲಿನ ಸುಂಕವನ್ನು ಸಂಪೂರ್ಣವಾಗಿ ತೆಗೆದು ಹಾಕಿದರೆ, ಭಾರತದ ರೈತರಿಗೆ, ಪಶು ಆಹಾರ ಉದ್ಯಮಕ್ಕೆ ಹೊಡೆತ ಬೀಳಲಿದೆ ಎಂದು ರೈತ ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ. ರಷ್ಯಾದಿಂದ ತೈಲ ಖರೀದಿ ಸ್ಥಗಿತ, ಐದು ವರ್ಷಗಳಲ್ಲಿ ಅಮೆರಿಕದಿಂದ 50 ಸಾವಿರ ಕೋಟಿ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಖರೀದಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರವು ಟ್ರಂಪ್ ಅವರ ಒತ್ತಡಕ್ಕೆ ಮಣಿದು, ಅವರ ಷರತ್ತುಗಳಿಗೆ ಒಪ್ಪಿದಂತೆ ಕಾಣುತ್ತಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ

ಪ್ರಜಾವಾಣಿ ವಾರ್ತೆ

ದೀರ್ಘ ಸಮಯದ ನಂತರ ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ಅಂತಿಮವಾಗಿದೆ. ಮಧ್ಯಂತರ ಒಪ್ಪಂದದ ಚೌಕಟ್ಟನ್ನೂ ರೂಪಿಸಲಾಗಿದೆ. ಆದರೆ, ಉಭಯ ರಾಷ್ಟ್ರಗಳು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿನ ಕೆಲವು ಅಂಶಗಳು ಮತ್ತು ರಷ್ಯಾದಿಂದ ತೈಲ ಖರೀದಿಸುವುದಕ್ಕೆ ಪ್ರತಿಯಾಗಿ ಭಾರತದ ಮೇಲೆ ಹೇರಲಾಗಿದ್ದ ಶೇ 25ರಷ್ಟು ಹೆಚ್ಚುವರಿ ತೆರಿಗೆಯನ್ನು ವಾಪಸ್ ಪಡೆದ ಟ್ರಂಪ್ ಹೊರಡಿಸಿರುವ ಕಾರ್ಯಾದೇಶದಲ್ಲಿ ಪ್ರಸ್ತಾಪಿಸಿರುವ ಹಲವು ಅಂಶಗಳನ್ನು ಗಮನಿಸಿದರೆ ಭಾರತಕ್ಕಿಂತಲೂ ಹೆಚ್ಚಾಗಿ ಅಮೆರಿಕಕ್ಕೆ ಬೇಕಾದ ರೀತಿಯಲ್ಲೇ ಒಪ್ಪಂದ ರೂಪುಗೊಂಡಂತೆ ಕಾಣುತ್ತದೆ ಎಂಬ ಮಾತು ಕೇಳಿಬಂದಿದೆ. ಜತೆಗೆ, ಒಪ್ಪಂದದಿಂದ ಹಲವು ಕೃಷಿ ಉತ್ಪನ್ನಗಳ ಬೆಲೆ ಕುಸಿಯಲಿದ್ದು, ಪಶು ಆಹಾರ ಉದ್ಯಮವು ಅಮೆರಿಕದ ಹಿಡಿತಕ್ಕೆ ಹೋಗಲಿದೆ. ಜತೆಗೆ, ಕುಲಾಂತರಿ ಬೀಜಗಳು ಮತ್ತು ಉತ್ಪನ್ನಗಳು ಪರೋಕ್ಷವಾಗಿ ದೇಶದೊಳಗೆ ಬರಲು ಒಪ್ಪಂದ ದಾರಿ ಮಾಡಿಕೊಟ್ಟಿದೆ ಎನ್ನುವ ಆಕ್ಷೇಪಣೆಯೂ ವ್ಯಕ್ತವಾಗಿದೆ.

ಜಂಟಿ ಹೇಳಿಕೆಯಲ್ಲಿನ 11ನೇ ಅಂಶವು ಭಾರತವು ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ ಇಂಧನ ಉತ್ಪನ್ನಗಳು, ವಿಮಾನಗಳು, ಅದರ ಬಿಡಿಭಾಗಗಳು, ಬೆಲೆಬಾಳುವ ಲೋಹಗಳು, ತಂತ್ರಜ್ಞಾನ ಉತ್ಪನ್ನಗಳು, ಕಲ್ಲಿದ್ದಲು ಸೇರಿದಂತೆ 50,000 ಕೋಟಿ ಡಾಲರ್ ಅಂದರೆ, ಅಂದಾಜು ₹45.29 ಲಕ್ಷ ಕೋಟಿ ಮೌಲ್ಯದ ಉತ್ಪನ್ನಗಳನ್ನು ಖರೀದಿಸಲು ಉದ್ದೇಶಿಸಿದೆ ಎಂದು ಹೇಳುತ್ತದೆ. ಭಾರತವು ಅಮೆರಿಕದಿಂದ 50 ಸಾವಿರ ಕೋಟಿ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಖರೀದಿಸಲಿದೆ ಎಂದು ಟ್ರಂಪ್ ಅವರು ಆರಂಭದಿಂದಲೂ ಹೇಳುತ್ತಲೇ ಬಂದಿದ್ದರು.

ಭಾರತ ಮತ್ತು ಅಮೆರಿಕದ ನಡುವೆ ಕಳೆದ ವರ್ಷ ಒಟ್ಟು 13,220 ಕೋಟಿ ಡಾಲರ್ ಮೌಲ್ಯದ (₹11.45 ಲಕ್ಷ ಕೋಟಿ) ಸರಕು ವ್ಯಾಪಾರ ನಡೆದಿದೆ. ಇದರಲ್ಲಿ ಅಮೆರಿಕವು ಭಾರತದಿಂದ ₹7.42 ಲಕ್ಷ ಕೋಟಿ ಮೌಲ್ಯದ ಸರಕು ಖರೀದಿಸಿದೆ. ಭಾರತ ಖರೀದಿಸಿದ್ದು ₹4.01 ಲಕ್ಷ ಕೋಟಿ ಮೌಲ್ಯದ್ದು. ಅಂದರೆ, ಭಾರತದೊಂದಿಗೆ ಅಮೆರಿಕದ ವ್ಯಾಪಾರ ಕೊರತೆ ಹೆಚ್ಚಿದೆ. ಐದು ವರ್ಷಗಳಲ್ಲಿ ಭಾರತ ₹45.29 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಖರೀದಿಸಬೇಕು ಎಂದಾದರೆ ಭಾರತವು ವರ್ಷಕ್ಕೆ ಸರಾಸರಿ ₹9.05 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಬೇಕು. ಹಾಗಾದರೆ, ಈಗಿನದಕ್ಕಿಂತ ದುಪ್ಪಟ್ಟು ಸರಕುಗಳನ್ನು ಖರೀದಿಸಬೇಕಾಗುತ್ತದೆ. ಅಮೆರಿಕವು ಭಾರತದಿಂದ ಹೆಚ್ಚು ಸರಕು ಖರೀದಿಸದೇ ಇದ್ದಲ್ಲಿ ಭಾರತದ ವ್ಯಾಪಾರ ಕೊರತೆ ಹೆಚ್ಚಲಿದೆ.

‘ಟ್ರಂಪ್ ಅವರು ಜಪಾನ್, ದಕ್ಷಿಣ ಕೊರಿಯಾ ಮತ್ತು ಮಲೇಷ್ಯಾಗಳೊಂದಿಗೆ ವ್ಯಾಪಾರ ಒಪ್ಪಂದ ಅಂತಿಮಗೊಳಿಸುವಾಗಲೂ ಆ ರಾಷ್ಟ್ರಗಳು ಅಮೆರಿಕದಲ್ಲಿ ಕ್ರಮವಾಗಿ 55,000 ಕೋಟಿ ಡಾಲರ್, 35,000 ಕೋಟಿ ಡಾಲರ್ ಮತ್ತು 7,000 ಕೋಟಿ ಡಾಲರ್ ಬಂಡವಾಳ ಹೂಡಿಕೆ ಮಾಡುವುದನ್ನು ಖಾತರಿ ಪಡಿಸಿಕೊಂಡಿದ್ದರು. ಭಾರತದೊಂದಿಗಿನ ಒಪ್ಪಂದದಲ್ಲೂ ಟ್ರಂಪ್ ಅವರು ಅದನ್ನೇ ಮಾಡಿದ್ದಾರೆ’ ಎಂದು ಅಂತರರಾಷ್ಟ್ರೀಯ ವ್ಯವಹಾರಗಳ ವಿಶ್ಲೇಷಕ ಬ್ರಹ್ಮ ಚಲೆನಿ ‘ಎಕ್ಸ್’ನಲ್ಲಿ ಬರೆದಿದ್ದಾರೆ.

ಕಾರ್ಯಾದೇಶದಲ್ಲೇನಿದೆ?: ಇದಲ್ಲದೇ ಭಾರತದ ಮೇಲೆ ಹೇರಲಾಗಿದ್ದ ಹೆಚ್ಚುವರಿ ಸುಂಕವನ್ನು ವಾಪಸ್ ಪಡೆಯುವ ಸಂಬಂಧ ಡೊನಾಲ್ಡ್ ಟ್ರಂಪ್ ಹೊರಡಿಸಿರುವ ಕಾರ್ಯಾದೇಶದಲ್ಲಿರುವ ಕೆಲವು ಅಂಶಗಳಿಗೂ ಆಕ್ಷೇಪ ವ್ಯಕ್ತವಾಗಿದೆ.




ನರೇಂದ್ರ ಮೋದಿ
ಡೊನಾಲ್ಡ್ ಟ್ರಂಪ್

ತೈಲ ಖರೀದಿ ಇಳಿಕೆ

ಭಾರತದ ತೈಲ ಕಂಪನಿಗಳು ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆ ಮಾಡಿವೆ. ಮಾರ್ಚ್–ಏಪ್ರಿಲ್ ಅವಧಿಗೆ ತೈಲ ಖರೀದಿಗೆ ಮುಂದಾಗಿಲ್ಲ ಎಂದು ಮೂಲಗಳನ್ನು ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ. ಸದ್ಯ ಪ್ರತಿದಿನ ಐದು ಲಕ್ಷದಿಂದ ಆರು ಲಕ್ಷ ಬ್ಯಾರೆಲ್‌ಗಳಷ್ಟು ತೈಲ ರಷ್ಯಾದಿಂದ ಬರುತ್ತಿದೆ ಎಂದು ವರದಿ ತಿಳಿಸಿದೆ. ಅತ್ತ ರಷ್ಯಾವು ತೈಲ ಖರೀದಿ ಸ್ಥಗಿತದ ಬಗ್ಗೆ ಭಾರತದಿಂದ ಅಧಿಕೃತ ಮಾಹಿತಿ ಸಿಕ್ಕಿಲ್ಲ ಎಂದು ಹೇಳಿದೆ.

ಭಾರತವು ರಷ್ಯಾದಿಂದ ತೈಲ ಖರೀದಿಸುತ್ತಿರುವುದಕ್ಕೆ ಕಳೆದ ವರ್ಷದ ಆಗಸ್ಟ್‌ನಲ್ಲಿ ಭಾರತದ ಉತ್ಪನ್ನಗಳ ಮೇಲೆ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕವನ್ನು ಟ್ರಂಪ್ ಹೇರಿದ್ದರು. ಮೊನ್ನೆ, ಒಪ್ಪಂದ ಅಂತಿಮವಾಗಿದೆ ಎಂದು ‘ಟ್ರುತ್’ ಸಾಮಾಜಿಕ ಜಾಲತಾಣದಲ್ಲಿ ಮಾಡಿದ ಪೋಸ್ಟ್‌ನಲ್ಲೂ ಅವರು, ಭಾರತವು ರಷ್ಯಾದಿಂದ ತೈಲ ಖರೀದಿಯನ್ನು ಸಂಪೂರ್ಣವಾಗಿ ನಿಲ್ಲಿಸಲಿದೆ ಎಂದು ಹೇಳಿದ್ದರು.

ಎರಡೂ ದೇಶಗಳು ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ರಷ್ಯಾ ತೈಲ ಖರೀದಿ ಸ್ಥಗಿತದ ಬಗ್ಗೆ ಪ್ರಸ್ತಾಪ ಇಲ್ಲದಿದ್ದರೂ, ಇದೇ 6ರಂದು ಶೇ 25ರಷ್ಟು ಹೆಚ್ಚುವರಿ ಸುಂಕ ಹೇರಿಕೆ ವಾಪಸ್ ಪಡೆಯುವ ಸಂಬಂಧ ಹೊರಡಿಸಲಾಗಿರುವ ಕಾರ್ಯಾದೇಶದಲ್ಲಿ, ರಾಷ್ಟ್ರೀಯ ಭದ್ರತೆ, ವಿದೇಶಾಂಗ ನೀತಿ ಮತ್ತು ಆರ್ಥಿಕ ವಿಚಾರಗಳಲ್ಲಿ ಭಾರತವು ಅಮೆರಿಕದ ಜೊತೆಯಾಗಲಿದೆ ಎಂದು ಹೇಳಲಾಗಿದ್ದು ಭಾರತ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಲಿದೆ ಎಂದು ಉಲ್ಲೇಖಿಸಲಾಗಿದೆ.

ಎರಡು ದಿನಗಳ ಹಿಂದೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ವಿದೇಶಾಂಗ ವ್ಯವಹಾರಗಳ ಇಲಾಖೆಗಳ ವಕ್ತಾರ ರಣಧೀರ್ ಜೈಸ್ವಾಲ್ ಅವರು, ‘ದೇಶದ ಇಂಧನ ಭದ್ರತೆ ವಿಚಾರದಲ್ಲಿ ಸರ್ಕಾರ ಈಗಾಗಲೇ ಹಲವು ಬಾರಿ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ದೇಶದ 140 ಕೋಟಿ ಜನರಿಗೆ ಇಂಧನ ಭದ್ರತೆ ಒದಗಿಸುವುದು ಸರ್ಕಾರ ಆದ್ಯತೆ. ಮಾರುಕಟ್ಟೆಯ ಸ್ಥಿತಿಗತಿ, ಅಂತರರಾಷ್ಟ್ರೀಯ ಬೆಳವಣಿಗೆಗಳನ್ನು ಗಮನಿಸಿ ತೈಲ ಖರೀದಿಸಲಾಗುತ್ತದೆ’ ಎಂದು ಹೇಳಿದ್ದರು.

ಟ್ರಂಪ್ ಅವರು ಈ ಹಿಂದೆ ಭಾರತವು ರಷ್ಯಾದ ಬದಲಿಗೆ ಅಮೆರಿಕ, ವೆನೆಜುವೆಲಾದಿಂದ ತೈಲ ಖರೀದಿಸಲಿದೆ ಎಂದು ಹೇಳಿದ್ದರು. ಕಾರ್ಯಾದೇಶದಲ್ಲಿ ವೆನೆಜುವೆಲಾದ ಪ್ರಸ್ತಾಪ ಇಲ್ಲ. ಬದಲಿಗೆ ಭಾರತವು ಅಮೆರಿಕದಿಂದ ಇಂಧನದ ಉತ್ಪನ್ನಗಳನ್ನು ಖರೀದಿಸಲು ಬದ್ಧತೆ ತೋರಿದೆ ಎಂದು ಉಲ್ಲೇಖಿಸಲಾಗಿದೆ. ಮತ್ತು ಮುಂದಿನ 10 ವರ್ಷಗಳವರೆಗೆ ರಕ್ಷಣಾ ಕ್ಷೇತ್ರದ ಸಹಕಾರ ವನ್ನು ವಿಸ್ತರಿಸಲೂ ಒಪ್ಪಿದೆ ಎಂದೂ ಹೇಳಲಾಗಿದೆ.

ಒಪ್ಪಂದ ನಂತರ ಭಾರತವು ರಷ್ಯಾದಿಂದ ತೈಲ ಖರೀದಿಸುತ್ತಿದೆಯೇ ಎಂಬುದರ ಮೇಲ್ವಿಚಾರಣೆ ನಡೆಸಲು ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ಹಾಗೂ ವಿವಿಧ ಇಲಾಖೆಗಳ ಕಾರ್ಯದರ್ಶಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸುವ ಪ್ರಸ್ತಾಪವೂ ಕಾರ್ಯಾದೇಶದಲ್ಲಿದೆ. ಮತ್ತು ಒಂದು ವೇಳೆ ಖರೀದಿ ಮುಂದುವರಿಸಿದರೆ ಮತ್ತೆ ಸುಂಕ ಹೇರಲಾಗುವುದು ಎಂದೂ ಹೇಳಲಾಗಿದೆ.

ರಷ್ಯಾದಿಂದ ತೈಲ ಖರೀದಿ ನಿಲ್ಲಿಸುವ ವಿಚಾರದಲ್ಲಿ ಸರ್ಕಾರ ಅಧಿಕೃತವಾಗಿ ಏನೂ ಹೇಳಿಕೆ ನೀಡಿಲ್ಲ. ಟ್ರಂಪ್ ಹೊರಡಿಸಿರುವ ಕಾರ್ಯಾದೇಶದಲ್ಲಿ ಉಲ್ಲೇಖಿಸಿರುವ ಅಂಶಗಳ ಬಗ್ಗೆ ಕೇಂದ್ರ ಸರ್ಕಾರ ಪ್ರತಿಕ್ರಿಯಿಸಿಲ್ಲ. ಅವುಗಳನ್ನು ಅಲ್ಲಗಳೆದೂ ಇಲ್ಲ. ಇದೇ ವಿಚಾರವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ಟೀಕಿಸಿವೆ. ಡೊನಾಲ್ಡ್ ಟ್ರಂಪ್ ಹೇಳಿದ್ದಕ್ಕೆಲ್ಲ ಒಪ್ಪಿಗೆ ಸೂಚಿಸುವ ಮೂಲಕ ಕೇಂದ್ರ ಸರ್ಕಾರ ಅವರಿಗೆ ಶರಣಾಗಿದೆ ಎಂದು ಆರೋಪಿಸಿವೆ.

ಆಧಾರ: ವ್ಯಾಪಾರ ಒಪ್ಪಂದದ ಬಗ್ಗೆ ಭಾರತ–ಅಮೆರಿಕ ಜಂಟಿ ಹೇಳಿಕೆ, ಕಾರ್ಯಾದೇಶ, ರಾಯಿಟರ್ಸ್, ಪಿಟಿಐ, ‘ಎಕ್ಸ್’ ಪೋಸ್ಟ್, ಡೌನ್ ಟು ಅರ್ಥ್

ಕೃಷಿ ಕ್ಷೇತ್ರದ ಮೇಲೆ ಕರಿನೆರಳು?

ಒಪ್ಪಂದದಲ್ಲಿ ಕೃಷಿ ಮತ್ತು ಹೈನು ಉತ್ಪನ್ನಗಳಿಗೆ ರಕ್ಷಣೆ ಒದಗಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಒಪ್ಪಂದದಿಂದ ಭಾರತದ ಕೆಲವು ವಲಯಗಳಿಗೆ ಲಾಭವಾಗುತ್ತದೆ. ಆದರೆ, ಕೆಲವು ವಲಯಗಳಲ್ಲಿ ಬಿಕ್ಕಟ್ಟು ಸೃಷ್ಟಿಯಾಗಲಿದೆ ಎನ್ನಲಾಗುತ್ತಿದೆ.

ಪಶುಸಂಗೋಪನೆಯಲ್ಲಿ ಬಳಸುವ ಧಾನ್ಯಗಳು (ಡಿಸ್ಟಿಲ್ಲರ್ಸ್ ಡ್ರೈಡ್ ಗ್ರೈನ್ಸ್ ವಿಥ್ ಸಾಲ್ಯುಬಲ್ಸ್–ಡಿಡಿಜಿಎಸ್), ಪಶು ಆಹಾರಕ್ಕೆ ಬಳಸುವ ಗೋವಿನ ಜೋಳ, ಡ್ರೈ ಫ್ರೂಟ್ಸ್, ಕೆಲವು ತಾಜಾ ಮತ್ತು ಸಂಸ್ಕರಿತ ಹಣ್ಣುಗಳು, ಸೋಯಾಬೀನ್ ಎಣ್ಣೆ, ವೈನ್, ಸ್ಪಿರಿಟ್ ಮತ್ತು ಇತರ ಉತ್ಪನ್ನಗಳಿಗೆ ಶೂನ್ಯ ಸುಂಕ ಅಥವಾ ಕಡಿಮೆ ಸುಂಕ ವಿಧಿಸುವ ಅಂಶವು ಒಪ್ಪಂದದಲ್ಲಿರುವುದು ರೈತ ಸಮುದಾಯದ ಆತಂಕಕ್ಕೆ ಕಾರಣವಾಗಿದೆ.

ಪಶುಸಂಗೋಪನಾ ವಲಯದ ಬೇಡಿಕೆ ಆಧರಿಸಿ ಸೀಮಿತ ಪ್ರಮಾಣದಲ್ಲಿ ಮಾತ್ರವೇ ಡಿಡಿಜಿಎಸ್ ಅನ್ನು ಆಮದು ಮಾಡಿಕೊಳ್ಳಲಾಗುವುದು. ಇದರಿಂದ ಕುಕ್ಕುಟೋದ್ಯಮಕ್ಕೆ ಸಹಾಯವಾಗಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಡ್ರೈ ಫ್ರೂಟ್ಸ್ ಸೇರಿದಂತೆ ಕೆಲವು ಉತ್ಪನ್ನಗಳ ಮೇಲಿನ ಸುಂಕ ಕಡಿತ ಅಥವಾ ಶೂನ್ಯ ಸುಂಕದ ಕ್ರಮವು ಭಾರತದ ಕೃಷಿ ವಲಯದ ಮೇಲೆ ಹೆಚ್ಚೇನೂ ಪರಿಣಾಮ ಬೀರದು. ಭಾರತದಲ್ಲಿ ಅವುಗಳನ್ನು ಹೆಚ್ಚು ಬೆಳೆಯುವುದಿಲ್ಲ. ಆದರೆ, ಮುಸುಕಿನ ಜೋಳ, ಸೋಯಾಬೀನ್ ಮತ್ತು ಪಶು ಆಹಾರದಲ್ಲಿ ಬಳಸುವ ಇತರ ಕೃಷಿ ಉತ್ಪನ್ನಗಳ ಬೆಲೆಯ ಮೇಲೆ ಒಪ್ಪಂದವು ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎನ್ನುವುದು ರೈತ ಮುಖಂಡರ ಅಭಿಪ್ರಾಯ. ಇತ್ತೀಚಿನ ವರ್ಷಗಳಲ್ಲಿ ಸೋಯಾಬೀನ್ ಬೆಲೆ ಕುಸಿದಿದ್ದು, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಮತ್ತು ರಾಜಸ್ಥಾನದ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ಈಗ ಸೋಯಾಬೀನ್ ಎಣ್ಣೆ ಆಮದು ಮಾಡಿಕೊಂಡರೆ, ಬೆಲೆಗಳು ಮತ್ತಷ್ಟು ಕುಸಿಯುವ ಸಾಧ್ಯತೆ ಇದೆ ಎನ್ನುವ ಆತಂಕ ವ್ಯಕ್ತವಾಗಿದೆ.

ಗೋವಿನ ಜೋಳದ ಜತೆಗೆ ಮುಸುಕಿನ ಜೋಳವನ್ನು ಡಿಡಿಜಿಎಸ್ ವಿಭಾಗದ ಅಡಿಯಲ್ಲೇ ಮಾರಲಾಗುತ್ತದೆ. ಅಮೆರಿಕದಿಂದ ಮುಸುಕಿನ ಜೋಳ, ಸೋಯಾಬೀನ್, ಹತ್ತಿ ಈಗಾಗಲೇ ಭಾರತಕ್ಕೆ ರಫ್ತಾಗುತ್ತಿದ್ದು, ಗೋಧಿಯನ್ನು ಕೆ.ಜಿಗೆ ₹18.50ಕ್ಕೆ ರಫ್ತು ಮಾಡಲಾಗುತ್ತಿದೆ. ಇದು ಭಾರತದ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬಂದರೆ, ಅದು ಭಾರತದ ರೈತರ ಪಾಲಿಗೆ ಮರಣಶಾಸನವಾಗಲಿದೆ; ಭಾರತದ ಪಶು ಆಹಾರ ಕ್ಷೇತ್ರವು ಅಮೆರಿಕದ ಹಿಡಿತಕ್ಕೆ ಹೋಗಲಿದೆ ಎಂದು ‘ಕಿಸಾನ್ ಸಂಯುಕ್ತ ಮೋರ್ಚಾ’ (ಎಸ್‌ಕೆಎಂ) ಹೇಳಿದೆ.

ಅಮೆರಿಕದಲ್ಲಿ ಕೃಷಿ ಕ್ಷೇತ್ರವು ಭಾರಿ ಮುಂದುವರಿದಿದೆ. ಕುಲಾಂತರಿ ತಳಿಗಳ ಬೀಜಗಳನ್ನು ಬಳಸಿ, ಬೃಹತ್ ಪ್ರಮಾಣದಲ್ಲಿ ಉತ್ಪನ್ನಗಳನ್ನು ಬೆಳೆಯಲಾಗುತ್ತಿದೆ. ಸೂಕ್ತ ನಿಯಮಗಳನ್ನು ರೂಪಿಸಿ, ಅವುಗಳ ಮೂಲಕ ರೈತರಿಗೆ ಲಾಭ ತರುವಂತೆ ಕೃಷಿ ಮಾರುಕಟ್ಟೆಯನ್ನು ನಿಯಂತ್ರಿಸಲಾಗುತ್ತಿದೆ. ಕುಲಾಂತರಿ ಬೀಜಗಳು, ತಾಂತ್ರಿಕತೆ ಮತ್ತಿತರ ಕಾರಣಗಳಿಂದ ಅಲ್ಲಿ ಇಳುವರಿ ಪ್ರಮಾಣವು ಭಾರತಕ್ಕಿಂತ ಹಲವು ಪಟ್ಟು ಹೆಚ್ಚಾಗಿದೆ. ಆ ರೈತರು ಉತ್ಪಾದಿಸಿದ ಬೃಹತ್ ಉತ್ಪನ್ನಗಳೊಂದಿಗೆ ಭಾರತದ ರೈತರು ಸ್ಪರ್ಧಿಸುವುದು ಅಸಾಧ್ಯದ ಮಾತು. ಅಮೆರಿಕದ ಅಗ್ಗದ ವಸ್ತುಗಳು ಭಾರತಕ್ಕೆ ಪ್ರವಾಹದಂತೆ ಹರಿದು ಬರಲಿದ್ದು, ಭಾರತದ ಸಣ್ಣ ರೈತರು ಆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಲಿದ್ದಾರೆ ಎನ್ನುವ ವಿಶ್ಲೇಷಣೆ ಕೇಳಿಬಂದಿದೆ.

12ರಂದು ಮುಷ್ಕರಕ್ಕೆ ಕರೆ

ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿ ರೈತ ಸಂಘಟನೆಗಳು ಘೋಷಿಸಿವೆ. ಕೇಂದ್ರ ಸರ್ಕಾರದ ವಿರುದ್ಧ ಕಾರ್ಮಿಕ ಸಂಘಟನೆಗಳು ಇದೇ 12ರಂದು ಮುಷ್ಕರಕ್ಕೆ ಕರೆ ನೀಡಿವೆ. ಅದರಲ್ಲಿ ರೈತ ಸಂಘಟನೆಗಳೂ ಭಾಗಿಯಾಗಲಿವೆ. ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ), ಆಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್), ಕ್ರಾಂತಿಕಾರಿ ಕಿಸಾನ್ ಯೂನಿಯನ್ (ಪಂಜಾಬ್), ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಮುಂತಾದ ಸಂಘಟನೆಗಳು ಬಂದ್‌ಗೆ ಬೆಂಬಲ ನೀಡಿವೆ.

ಕುಲಾಂತರಿ ಬೀಜಗಳ ಅಪಾಯ

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಆಹಾರ ಉತ್ಪನ್ನಗಳಿಗೆ ಸಂಬಂಧಿಸಿದ 24 ಬೆಳೆಗಳು ಕುಲಾಂತರಿ ಮುಕ್ತ ಪ್ರಮಾಣ ಪತ್ರ ಹೊಂದಿದ್ದರೆ ಮಾತ್ರವೇ ಅವು ಭಾರತಕ್ಕೆ ಆಮದಾಗಲು ಅರ್ಹವಾಗುತ್ತವೆ. ಆದರೆ, ಅಮೆರಿಕದ ಡಿಡಿಜಿಎಸ್‌ನಲ್ಲಿ ಕುಲಾಂತರಿ ಧಾನ್ಯಗಳನ್ನು ಬಳಸಲಾಗುತ್ತಿದೆ. ಈ ಮೂಲಕ ಪರೋಕ್ಷವಾಗಿ ಕುಲಾಂತರಿ ಉತ್ಪನ್ನಗಳು ಭಾರತ ಪ್ರವೇಶಿಸಲಿವೆ.

ಭಾರತವು ಕುಲಾಂತರಿ ಬೀಜಗಳಿಗೆ ನಿರ್ಬಂಧ ವಿಧಿಸಿರುವುದರ ಬಗ್ಗೆ ಅಮೆರಿಕ ಆಕ್ಷೇಪಣೆ ಎತ್ತುತ್ತಲೇ ಬಂದಿದೆ. ಈಗ ಪರೋಕ್ಷವಾಗಿ ಅವುಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಕುಲಾಂತರಿ ತಳಿಗಳ ಬೀಜಗಳು ಮತ್ತು ಆಹಾರ ಉತ್ಪನ್ನಗಳು ನಮ್ಮ ಕೃಷಿ ಭೂಮಿಯ ಫಲವತ್ತತೆಯನ್ನು ಹಾಳು ಮಾಡಿ, ಧಾನ್ಯ, ಬೇಳೆಕಾಳು ಮತ್ತು ಎಣ್ಣೆಬೀಜಗಳ ಮಾರುಕಟ್ಟೆಗೆ ಹಾನಿ ಮಾಡಲಿವೆ ಎಂದು ಎಸ್‌ಕೆಎಂ ಎಚ್ಚರಿಕೆ ನೀಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಚಿತ್ರ ಹೊಂದಿರುವ ₹500 ನೋಟನ್ನು ಪ್ರದರ್ಶಿಸುತ್ತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಚಿತ್ರವನ್ನು ಹಂಚಿಕೊಳ್ಳುತ್ತಿರುವ ಕೆಲವರು, ₹500ರ ಹೊಸ ನೋಟನ್ನು ಬಿಡುಗಡೆ ಮಾಡಲಾಗಿದೆ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಹೊಸ ನೋಟುಗಳನ್ನು ಚಲಾವಣೆಗೆ ತರುವ ಜವಾಬ್ದಾರಿಯು ಭಾರತೀಯ ರಿಸರ್ವ್ ಬ್ಯಾಂಕ್‌ನದ್ದಾದರೆ, (ಆರ್‌ಬಿಐ), ನೋಟಿನ ವಿನ್ಯಾಸ ಮತ್ತಿತರ ಅಂಶಗಳನ್ನು ಅಖೈರುಗೊಳಿಸುವ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ಸುಭಾಷ್ ಚಂದ್ರ ಬೋಸ್ ಅವರ ಚಿತ್ರ ಇರುವ ₹500 ನೋಟನ್ನು ವಿನ್ಯಾಸ ಮಾಡಿದ ಬಗ್ಗೆ ಆಗಲಿ, ಬಿಡುಗಡೆ ಮಾಡಿದ ಬಗ್ಗೆ ಆಗಲಿ ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ಯಾವುದೇ ಪ್ರಕಟಣೆ ನೀಡಿಲ್ಲ. ಚಿತ್ರದಲ್ಲಿರುವ ₹500 ನೋಟನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರ ಮೇಲೆ ‘ತಮಿಳು ಸಿನಿಮಾ ಫ್ಯಾನ್ಸ್ ಚಾನೆಲ್’ ಎನ್ನುವ ವಾಟರ್ ಮಾರ್ಕ್ ಇರುವುದು ಕಂಡಿತು. ಚಿತ್ರವನ್ನು ಹೈವ್ ಎಐ ಪತ್ತೆ ಸಾಧನದ ಮೂಲಕ ಪರಿಶೀಲಿಸಿದಾಗ, ಶೇ 99.9ರಷ್ಟು ಅದು ಎಐ ಚಿತ್ರ ಎನ್ನುವುದು ತಿಳಿಯಿತು. ಎಐನಿಂದ ರೂಪಿಸಲಾದ ಚಿತ್ರವನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪ್ರಾಮಾಣಿಕತೆಯೇ ಪ್ರಾರ್ಥನೆಯಾಗಬೇಕು

ನುಡಿ ಬೆಳಗು
ದಾದಾಪೀರ್ ನವಿಲೇಹಾಳ್



ಪವಿತ್ರ ಮೆಕ್ಕಾ ನಗರದ ಅಲ್ ಹರಾಮ್ ಮಸೀದಿಯ ಕಡೆ ಹೊರಟರೆ ಲಕ್ಷಾಂತರ ಜನರ ಲಗುಬಗೆಯ ಓಡಾಟದ ನಡುವೆ ಸಾವಿರಾರು ಪಾರಿವಾಳಗಳು ಹಾರಿ ಬರುತ್ತವೆ. ಭಕ್ತಿ, ಶ್ರದ್ಧೆಯ ಜೊತೆಯಲ್ಲಿ ಹುಟ್ಟಿದ ಧಾವಂತದಲ್ಲಿ ಜನರು ಮಸೀದಿಯ ಕಡೆ ಧಾವಿಸಿದರೆ ಪ್ಲಾಸ್ಟಿಕ್ ಕವರ್‌ಗಳಲ್ಲಿ ಗೋಧಿ, ಮೆಕ್ಕೆಜೋಳವನ್ನು ಕಟ್ಟಿ ಮಾರುವವರು ‘ಕಬೂತರ್ ಧಾನ, ದೋ ರಿಯಾಲ್, ದೋ ರಿಯಾಲ್’ ಎಂದು ಕೂಗುತ್ತ ಕಾಣಸಿಗುತ್ತಾರೆ. ಪಾರಿವಾಳಗಳನ್ನು ಪ್ರವಾದಿಯವರು ಅಪಾರ ಪ್ರೀತಿಯಿಂದ ಸಲಹುತ್ತಿದ್ದರು ಎಂಬುದನ್ನು ಕೇಳಿ ಭಕ್ತಪರವಶರಾಗುವ ಕೆಲವರು ಕಬೂತರ್ ಧಾನವನ್ನು ಖರೀದಿಸಿ ಪಾರಿವಾಳಗಳಿಗೆ ತಿನ್ನಿಸುತ್ತಾ ಹೊರಡುತ್ತಾರೆ. ಪಾರಿವಾಳಗಳು ಹಾರಿ ಬಂದು ಕಾಳು ತಿಂದು ಹೋದ ಜಾಗವನ್ನು ಕ್ಷಣಮಾತ್ರದಲ್ಲಿ ಸ್ವಚ್ಛಗೊಳಿಸುತ್ತಲೇ ಇರುವ ಕಾರ್ಮಿಕರ ಕರ್ತವ್ಯಶ್ರದ್ಧೆ ದೈವಭಕ್ತರ ಪ್ರಾರ್ಥನೆಗೆ ತೋರುವ ಗೌರವದ ಭಾಗದಂತೆ ಕಾಣುತ್ತದೆ.

ಇದ್ದಕ್ಕಿದ್ದ ಹಾಗೆ ಲಕ್ಷುರಿ ಕಾರಿನಲ್ಲಿ ಬಂದ ವ್ಯಕ್ತಿಯೊಬ್ಬರು ಕೈಚಾಚಿ ಕಬೂತರ್ ಧಾನ ಮಾರುವ ಪುಟ್ಟ ಹುಡುಗನಿಗೆ ಎರಡು ರಿಯಾಲ್ ಕೊಟ್ಟು ಕಾಯದೆ ಹೊರಟು ಹೋದರು. ಕಬೂತರ್ ಧಾನದ ಪ್ಯಾಕೆಟ್ಟನ್ನು ಕೊಡುವುದರೊಳಗೆ ಹೋದ ಕಾರಿನ ಕಡೆ ನೋಡುತ್ತಾ ಬೇಸರಿಸಿಕೊಂಡ ಆ ಹುಡುಗ ತಕ್ಷಣ ಪ್ಯಾಕೆಟ್ಟಿನ ಕಾಳುಗಳನ್ನೆಲ್ಲಾ ಪಾರಿವಾಳಗಳಿಗೆ ಸುರಿದು ಬಿಟ್ಟು ಮಾಮೂಲಿನಂತೆ ಕಬೂತರ್ ಧಾನ ಎಂದು ಕೂಗುತ್ತಾ ಮುಂದೆ ಸಾಗಿದ. ದೈವಶ್ರದ್ಧೆಯ ತೀವ್ರ ಭಾವುಕ ಸ್ಥಿತಿಯ ಮನಸ್ಸಿಗೆ ಈ ಸಣ್ಣ ಹುಡುಗನ ದೊಡ್ಡ ವರ್ತನೆಯನ್ನು ಗಮನಿಸುವ ವ್ಯವಧಾನ ಹೇಗಿದ್ದೀತು? ಇದು ಬಿಸಿಲು ಮಳೆ ಎನ್ನದೆ ಕಷ್ಟಪಟ್ಟು ದುಡಿದು ತಿನ್ನುವವರ ದೇಶಕಾಲಾತೀತ ಪ್ರಾಮಾಣಿಕತೆ ಮತ್ತು ಧರ್ಮಶ್ರದ್ಧೆಯ ಜೀವಂತ ನಿದರ್ಶನವಾಗಿದೆ.

ಧರ್ಮ ಮತ್ತು ದೈವಶ್ರದ್ಧೆಯ ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ಕೆಲವು ಸಿರಿವಂತರು ತಮ್ಮ ಸಂಪತ್ತಿನ ಸ್ವಲ್ಪ ಭಾಗವನ್ನು ತ್ಯಾಗ ಮಾಡುವ ಔದಾರ್ಯ ತೋರಿಸುವುದು ಸಾಮಾನ್ಯ ಸಂಗತಿ. ತ್ಯಜಿಸಲು ಏನೂ ಇಲ್ಲದವರು ತಮ್ಮ ನಿಷ್ಕಲ್ಮಶವಾದ ನಡೆನುಡಿಯ ಮೂಲಕ ಧಾರ್ಮಿಕ ಶ್ರದ್ಧೆಯನ್ನು ಸ್ಥಾಪಿಸುವುದು ನಿಜಕ್ಕೂ ವಿಶೇಷ. ಇದನ್ನು ಪ್ರಾಮಾಣಿಕತೆ ಎನ್ನಿ, ಸ್ವಾಭಿಮಾನ ಎನ್ನಿ, ದೈವನಿಷ್ಠೆಯ ಸರಳ ಪ್ರದರ್ಶನ ಎನ್ನಿ ಅದು ಯಾವುದನ್ನೂ ನಿರಾಕರಿಸಲಾಗದ ಸತ್ಯದ ಸಾಕ್ಷಾತ್ಕಾರವಿದು.


ಕಾರಿನ ಶ್ರೀಮಂತ ಕೊಟ್ಟ ದುಡ್ಡಿನಲ್ಲಿ ಪಾರಿವಾಳಗಳ ಅನ್ನದ ಪಾಲೂ ಇದೆ. ಶ್ರೀಮಂತನಿಗೆ ಅನ್ನವು ದಯೆಯೋ ಅನುಕಂಪವೋ ಆಗಿದ್ದೀತು! ಆದರೆ ಬಿಸಿಲಲ್ಲಿ ನಿತ್ಯವೂ ನಿಂತು ಧಾನ್ಯ ಮಾರುವ ಬಾಲಕನಿಗೆ ಅನ್ನವೇ ಅವನ ದುಡಿಮೆಯ ಧ್ಯಾನ. ತನಗೆ ಈ ದುಡ್ಡು ಯಾವ ಕಾರಣಕ್ಕೆ ಲಭಿಸುತ್ತಿದೆಯೋ ಅದೇ ಕಾರಣಕ್ಕೆ ಅದನ್ನು ವಿನಿಯೋಗಿಸಲಾರದೇ ಹೋದರೆ ಅದು ತನ್ನ ಅನ್ನಕ್ಕೆ ತಾನೇ ಬಗೆಯುವ ಅನ್ಯಾಯ! ಪ್ರವಾದಿಯವರ ಪ್ರಿಯ ಪಾರಿವಾಳಗಳ ಹೊಟ್ಟೆಗೆ ಹೊಡೆದು ಸ್ವಾರ್ಥ ಮೆರೆದರೆ ತಾನಿನ್ನೆಂತಹ ಧರ್ಮಿಷ್ಠ? ಇದು ಇಂತಹ ಅಸಂಖ್ಯಾತ ಜನರ ದೇಶಕಾಲಗಳನ್ನು ಮೀರಿದ ಪ್ರಾರ್ಥನೆಯ ಅಪೂರ್ವ ಸೃಷ್ಟಿ; ದುಡಿಯುವವರ ಎತ್ತರದ ನೈತಿಕತೆಯ ದ್ಯೋತಕ; ನ್ಯಾಯಯುತವಾದ ದುಡಿಮೆಯಲ್ಲಿ ದೇವರನ್ನು ಕಾಣುವವರ ಆತ್ಮದ ತವಕ. ನಮ್ಮ ನಂಬಿಕೆಯ ದೇವರು ಜೀವಂತವಾಗಿರುವುದು ದುಡಿಯುವವರ ಎದೆಯಲ್ಲಿ! ನಮ್ಮ ಬಯಕೆಯ ಧರ್ಮ ಮತ ನಿರೀಕ್ಷೆಯ ಒಣರಾಜಕಾರಣವಲ್ಲ, ಅದು ನಿಜಕ್ಕೂ ಉಸಿರಾಡುತ್ತಿರುವುದು ಪ್ರಾಮಾಣಿಕತೆಯ ಪ್ರತಿ ಹೆಜ್ಜೆಗಳಲ್ಲಿ! ಪ್ರಾಮಾಣಿಕತೆಯೇ ನಮ್ಮ ಪ್ರಾರ್ಥನೆಯಾಗಬೇಕು. ಈ ಬಗೆಯ ಮೌಲ್ಯಗಳನ್ನು ಜೀವನದ ಜೊತೆಗೆ ಜೋಡಿಸುವುದು ಧರ್ಮವಾಗಿದೆ. ಜನರಿಂದ ಜನರನ್ನು ಬೇರ್ಪಡಿಸುವುದು ಧರ್ಮವಲ್ಲ. ಒಳಿತಿನ ಸಂಸ್ಥಾಪನೆ ಮತ್ತು ಕೆಡುಕಿನ ನಿರ್ಮೂಲನೆ ನಿಜಧರ್ಮದ ಆಶಯ.

ಪದಬಂಧ 6310

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೊದಲ ಸಲ ನೋಡಿದ ಮಾತ್ರದಿಂದಲೇ ಉಂಟಾಗುವ ಪ್ರೀತಿ (4)
4.ಮೇಜವಾನಿ ಮಾಡಲು ಅಡುಗೆಗೆ ಬೇಕಾದ ಸಾಮಗ್ರಿ (4)
6.ಹೆಂಡತಿಯನ್ನು ಕಳೆದು ಕೊಂಡವನು (3)
7.ಮನದಿಂದ ಮಾಡಿಕೊಂಡ ಅರಿಕೆ (3)
8.ಜನುಮದಲ್ಲೇ ರಾಕ್ಷಸ ಕಾಣಿಸಿದನಲ್ಲಾ! (3)
10.ಮನವಿಟ್ಟಾಗಲೇ ಸಾಧಿಸಿದ ಹತೋಟಿ (3)
12.ನೊಸಲು ಇಲ್ಲಿ ಕಾಣುತ್ತಿದೆ (3)
13.ಆ ಪಾತ್ರ ಬೇಕೆಂದು ಕೇಳುತ್ತಿರುವವ ಅಯೋಗ್ಯ! (3)
14.ಅಂಗಳದಲ್ಲಿ ನಿಂತಾಗ ಕಾಣಿಸಿದ ಮಂಗಳಗ್ರಹ (4)
16.ಯೋಗವಿದ್ದುದಕ್ಕೇ ಈ ಹಂಚಿಕೆ! (4)

ಮೇಲಿಂದ ಕೆಳಕ್ಕೆ
1.ಈತ ಚರ್ಮದ ಕೆಲಸಗಾರ (3)
2.ತಿಕ್ಕಲನ ಬಳಿಯಿರುವ ಎಳ್ಳು (2)
3.ಭ್ರಾಂತಿ ಅಥವ ಹುಚ್ಚು ಎಂದರೂ ಆದೀತು (2)
5.ಈತ ಮಾತಿನಲ್ಲಿ ನಿಪುಣ (4)
6.ದುಃಖವು ಈ ರೀತಿ ಬಂದಿದೆ (3)
7.ಮಟ ಮಟ ಮಧ್ಯಾಹ್ನ ಕಾಣಿಸಿದ ಕೋತಿ (3)
9.ನೀರಿನಲ್ಲಿ ವಾಸಿಸುವ ಪ್ರಾಣಿ (4)
11.ತಾರೆ ಇಲ್ಲಿಕಾಣುತ್ತಿದೆ (3)
13.ಮನ್ಮಥನ ಇನ್ನೊಂದು ಹೆಸರು (3)
14.ಅಂಧಕಾರದಲ್ಲಿರುವ ಕುರುಡ (2)
15.ಕವಿತೆ ರಚಿಸುವವನು (2)



6309ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ವಲಸೆ 4.ಕಮಠ
5.ಏಮಾರು 6.ಕದನ
8.ವ್ಯವಕಲನ 10.ಗುಲಾಬಿ
13.ಮರಣ 14.ಜರಡಿ
15.ಹೊನಲು

ಮೇಲಿಂದ ಕೆಳಕ್ಕೆ:
1.ಬಿಲ 2.ಜಠರ
3.ವರ್ತಕ 4.ಕರು
5.ಏಕೀಕರಣ 7.ನವ್ಯ
9.ನಗು 11.ಬಿಸಿಲು
12.ಜಂಜಡ 13.ಮಡಿ
16.ನಳಿ.

ಸುಡೊಕು 6694

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1		3	5		6		4	7
	9			4			8	
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

6693 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಫೆಬ್ರುವರಿ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಅಷ್ಟಮಿ ಅಹೋರಾತ್ರ ನಕ್ಷತ್ರ: ವಿಶಾಖ ಆಹೋರಾತ್ರ ಯೋಗ: ವೃದ್ಧಿ ಗಂ. 24-52 ಕರಣ: ಬಾಲವ ಗಂ 18-13 ಮಕರ ಮಾಸದ 26 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-59 ಸೂರ್ಯಾಸ್ತ : 06-31, ಮುಸ್ಲಿಂ ದಿನಾಂಕ : 20 ಶಬನ್, ಅದೃಷ್ಟ ಸಂಖ್ಯೆ : 9, 5

ಮೇಷ: ತೊಂದರೆಗಳೆಲ್ಲಾ ಉಪಶಮನಗೊಳ್ಳುತ್ತ ಹಂತ ಹಂತವಾಗಿ ಅಭಿವೃದ್ಧಿ ತೋರಿ ಬರಲಿದೆ. ಸಂಬಂಧಗಳಿಗೆ ಅತಿಯಾಗಿ ಬೆಲೆ ಕೊಡುವ ನೀವು ಸಂಬಂಧಿಕರ ಮೊಸಳೆ ಕಣ್ಣೀರಿಗೆ ಸುಲಭವಾಗಿ ಮರುಳಾಗದಿರಿ.

ವೃಷಭ: ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಸಂತೋಷದಿಂದ ಕೆಲಸ ಮಾಡುವ ಮತ್ತು ಹೊಸದಾದ ಜಾಗ ಪ್ರಾಪ್ತಿ. ಚರ್ಮದ ವಸ್ತುಗಳ ತಯಾರಿ ಅಥವಾ ಮಾರಾಟದಿಂದ ಲಾಭ ಬರಲಿದೆ. ಗೃಹ ತಾಪತ್ರಯಗಳಿಂದ ಮುಕ್ತರಾಗುವಿರಿ.

ಮಿಥುನ: ಬಂಧು-ಮಿತ್ರರ ಸಹಾಯ ಸಕಾಲಕ್ಕೆ ಒದಗುವುದರಿಂದ ನಿರಾಳ ಭಾವ ಮೂಡುವುದು. ನಿಮ್ಮ ಕ್ಷೇತ್ರದಲ್ಲಿ ಉಳಿದುಕೊಳ್ಳಬೇಕಾದರೆ ಅವಿರತ ದುಡಿಮೆಯೊಂದೇ ಮಾರ್ಗ. ವಿದೇಶಿ ಪ್ರಯಾಣ ಸುಖಕರವಾಗಿರುವುದು.

ಕರ್ಕಾಟಕ: ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಆನಂದ ಸಿಗಬಹುದು. ತಂಗಿಗಾಗಿ ಹಣವನ್ನು ಮತ್ತು ಸಮಯವನ್ನು ಖರ್ಚು ಮಾಡಬೇಕಾದ ಸಂದರ್ಭ ಬರುವುದು.

ಸಿಂಹ: ಲೋಹ ಮಾರಾಟಗಾರರು ಹಳೆಯ ಲೋಹಗಳನ್ನು ಕೊಳ್ಳುವ ರೀತಿಯಲ್ಲಿ ಅನಿರೀಕ್ಷಿತವಾಗಿ ಲಾಭ ಪಡೆಯುವರು. ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ ನಿಮ್ಮಲ್ಲಿದೆ.

ಕನ್ಯಾ: ಮಹತ್ವದ ವಿಷಯಕ್ಕೆ ಗಂಭೀರ ಚಿಂತನೆ ಅಗತ್ಯ. ವಕೀಲರ ಸಲಹೆ, ಮಾರ್ಗದರ್ಶನ ಪಡೆದು ಮುನ್ನುಗ್ಗುವುದು ಅತ್ಯುತ್ತಮ. ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ.

ತುಲಾ: ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂತಹ ಕೆಲಸಗಳಿಗಾಗಿ ಸಮಯ ವಿನಿಯೋಗಿಸುವಿರಿ. ಹೊಸ ಕೆಲಸ ಕಾರ್ಯಗಳ ಬಗ್ಗೆ ಸುದೀರ್ಘವಾದ ಮಾತುಕತೆ ನಡೆಸಿ. ಸಾಲದ ಹಣ ಹಿಂತಿರುಗಿ ಬರುವುದು.

ವೃಶ್ಚಿಕ: ಋಣಬಾಧೆ, ಖರ್ಚು-ವೆಚ್ಚ, ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಜಾಗ್ರತೆ ವಹಿಸಿರಿ. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು.

ಧನು: ಸ್ವಯಂ ಔಷಧಿಗಳ ಅಧಿಕ ಬಳಕೆ ಅಥವಾ ಅದರ ಅಡ್ಡಪರಿಣಾಮದಿಂದ ಅನಾರೋಗ್ಯಕ್ಕೆ ಗುರಿಯಾಗಬೇಕಾಗುವುದು. ಮದುವೆಯ ವಿಚಾರದಲ್ಲಿ ಆಯ್ಕೆ ಸರಿಯಾಗಿದ್ದು ನಿರ್ಭಯವಾಗಿ ನಿರ್ಧಾರವನ್ನು ಎಲ್ಲರಲ್ಲಿ ತಿಳಿಸಿ.

ಮಕರ: ವಿವಾದ ಗೊಡವೆಗಳಿಂದ ದೂರ ಉಳಿಯುವಂಥ ನಿರ್ಧಾರ ಗೌರವವನ್ನು ಕಾಪಾಡಿಕೊಳ್ಳುವಲ್ಲಿ ಅನುಕೂಲ. ವಿಮಾ ಸಲಹೆಗಾರರು ಯಾರಿಗೂ ಬಲವಂತ ಪಡಿಸಬೇಡಿ. ನೂತನ ವಾಹನ ಖರೀದಿಯ ಯೋಗವಿದೆ.

ಕುಂಭ: ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವುದು ಸರಿಯಾದ ಮಾರ್ಗ. ನೆರೆಯವರೊಂದಿಗೆ ಸೌಹಾರ್ದಯುತವಾಗಿ ವರ್ತಿಸಿ. ಮಕ್ಕಳ ವರ್ತನೆ ಮನಸ್ಸಿಗೆ ಸಂತೋಷ ತಂದುಕೊಡಲಿದೆ.

ಮೀನ: ದೈವಬಲ ಒದಗುವುದರಿಂದ ಪ್ರಯತ್ನ ಕಾರ್ಯಗಳೆಲ್ಲವೂ ಶುಭ ಫಲಗಳನ್ನೇ ನೀಡಲಿವೆ. ಸಂಜೆಯ ಸಮಯದಲ್ಲಿ ಶಿರೋವೇದನದಿಂದ ಬಳಲುವ ಸಾಧ್ಯತೆ ಇದೆ. ಆರ್ಥಿಕವಾಗಿ ಸದೃಢವಾಗಲಿದ್ದೀರಿ.

ಗುಂಡಣ್ಣ



ರಷ್ಯಾ ತೈಲ ಖರೀದಿ ಇಳಿಕೆ ಸಾಧ್ಯತೆ

ಜನವರಿಯಲ್ಲಿ ಭಾರತಕ್ಕೆ 11 ಲಕ್ಷ ಬ್ಯಾರಲ್ ತೈಲ ಆಮದು



ನವದೆಹಲಿ (ಪಿಟಿಐ): ಅಮೆರಿಕವು ಭಾರತದ ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಿರುವುದಕ್ಕೆ ಪ್ರತಿಯಾಗಿ ಭಾರತವು, ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಕಡಿಮೆ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಆದರೆ ನಯಾರಾ ಎನರ್ಜಿಯಂತಹ ಕೆಲವು ಕಂಪನಿಗಳಿಗೆ ಪರ್ಯಾಯ ಆಯ್ಕೆಗಳು ಲಭ್ಯವಿಲ್ಲದ ಕಾರಣದಿಂದಾಗಿ, ಆಮದು ಸದ್ಯಕ್ಕೆ ನಿಲ್ಲುವುದಿಲ್ಲ ಎಂದು ಅವು ತಿಳಿಸಿವೆ.

2023ರ ಮೇ ತಿಂಗಳಿನಲ್ಲಿ ಭಾರತವು ರಷ್ಯಾದಿಂದ ಪ್ರತಿದಿನ 21 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿಸಿತ್ತು. 2025ರ ಡಿಸೆಂಬರ್ ವೇಳೆಗೆ ಇದು 12 ಲಕ್ಷ ಬ್ಯಾರಲ್ ಮತ್ತು ಈ ವರ್ಷದ ಜನವರಿಯಲ್ಲಿ 11 ಲಕ್ಷ ಬ್ಯಾರಲ್‌ಗೆ ಇಳಿದಿದೆ. ಈ ತಿಂಗಳು ಅಥವಾ ಮುಂದಿನ ತಿಂಗಳಿನಲ್ಲಿ ಈ ಪ್ರಮಾಣವು 10 ಲಕ್ಷ ಬ್ಯಾರಲ್‌ಗಿಂತ ಕಡಿಮೆ ಆಗುವುದು ಎನ್ನಲಾಗಿದೆ.

ದೇಶದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದ ತೈಲ ಖರೀದಿ ನಿಲ್ಲಿಸಲು ಯಾವುದೇ ಅಧಿಕೃತ ನಿರ್ದೇಶನ ಸ್ವೀಕರಿಸಿಲ್ಲವಾದರೂ, ಖರೀದಿಗಳನ್ನು ಕಡಿಮೆ ಮಾಡಲು ಮೌಖಿಕವಾಗಿ ಸೂಚಿಸಲಾಗಿದೆ ಎಂದು ತಿಳಿಸಿವೆ.

ಕಳೆದ ವರ್ಷ ಅಮೆರಿಕವು, ರಷ್ಯಾದ ಪ್ರಮುಖ ತೈಲ ಕಂಪನಿಗಳಾದ 'ರೊಸ್ನೆಫ್ಟ್' ಮತ್ತು 'ಲುಕಾಯಿಲ್' ಮೇಲೆ ನಿರ್ಬಂಧ ಹೇರಿದ ಬಳಿಕ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್), ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ಮತ್ತು ಎಚ್‌ಪಿಸಿಎಲ್–ಮಿತ್ತಲ್ ಎನರ್ಜಿ ಲಿಮಿಟೆಡ್ (ಎಚ್‌ಎಂಇಎಲ್) ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಿವೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ತೈಲ ಖರೀದಿಯನ್ನು ಕಡಿಮೆ ಮಾಡುತ್ತಿವೆ ಎಂದು ಹೇಳಿವೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ತೈಲ ಖರೀದಿಯನ್ನು ನಿಲ್ಲಿಸುವ ಸಾಧ್ಯತೆಯಿದೆ. ಆದರೆ, ನಯಾರಾ ಎನರ್ಜಿ ಕಂಪನಿಯ ತೈಲ ಖರೀದಿಯು ಸದ್ಯಕ್ಕೆ ಮುಂದುವರಿಯುತ್ತದೆ ಎಂದು ಹೇಳಿವೆ.

ತಂದೆ–ತಾಯಿಗೆ ಆರೋಗ್ಯ ವಿಮೆ ಇರಲಿ

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ತಿಂಗಳಿಗೆ ₹50 ಸಾವಿರ ಸಂಬಳ ಪಡೆಯುವ ವ್ಯಕ್ತಿ, ಐದು ವರ್ಷ ಕಷ್ಟಪಟ್ಟು ಉಳಿಸಿದ ₹6 ಲಕ್ಷ ಒಂದೇ ಒಂದು ಆಪರೇಷನ್ ಬಿಲ್‌ಗೂ ಸಾಕಾಗುವುದಿಲ್ಲ ಎಂದರೆ ನಂಬುತ್ತೀರಾ? ಹೌದು, ಇದು ಇಂದಿನ ದುಬಾರಿ ವೈದ್ಯಕೀಯ ವೆಚ್ಚಗಳ ವಾಸ್ತವ. 'ನಾನೇ ಹಣ ಉಳಿಸಿ ಚಿಕಿತ್ಸೆ ಕೊಡಿಸುತ್ತೇನೆ' ಎಂಬ ಅತಿ ಆತ್ಮವಿಶ್ವಾಸ ಅಥವಾ ಕಂಪನಿಯ ವಿಮೆಯ ಅವಲಂಬನೆ ನಿಮ್ಮ ಕುಟುಂಬವನ್ನು ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕಿಸಬಹುದು. ಪೋಷಕರಿಗೆ ಪ್ರತ್ಯೇಕ ಆರೋಗ್ಯ ವಿಮೆ ಏಕೆ ಬೇಕು? ಪಾಲಿಸಿ ಆರಿಸುವಾಗ ಮಾಡುವ ತಪ್ಪುಗಳೇನು? ಈ ಬಗ್ಗೆ ಮಾಹಿತಿ ಅಗತ್ಯ.

1. ಆರೋಗ್ಯ ಸಮಸ್ಯೆಗಳ ನಿಜವಾದ ಖರ್ಚು ಎಷ್ಟು?: ಒಂದಿಷ್ಟು ಲೆಕ್ಕಾಚಾರ ನೋಡುವುದಾದರೆ, ನಿಮ್ಮ ಸಂಬಳ ₹50 ಸಾವಿರ ಅಂದುಕೊಳ್ಳಿ. ಎಲ್ಲ ಖರ್ಚು ಕಳೆದು ತಿಂಗಳಿಗೆ ₹10 ಸಾವಿರ ಉಳಿಸಿದರೆ, ವರ್ಷಕ್ಕೆ ₹1.2 ಲಕ್ಷ ಆಗುತ್ತದೆ. ಹೀಗೆ 5 ವರ್ಷ ಕಷ್ಟಪಟ್ಟು ಉಳಿಸಿದರೆ ನಿಮ್ಮ ಹತ್ತಿರ ₹6 ಲಕ್ಷ ಇರುತ್ತದೆ. ಆದರೆ ಆಸ್ಪತ್ರೆಯ ಬಿಲ್‌ಗಳು ಸರಿಸುಮಾರು ಹೀಗಿರುತ್ತವೆ:

- **ಮೊಣಕಾಲು ಚಿಪ್ಪಿನ ಸರ್ಜರಿ:** ₹3ರಿಂದ ₹6 ಲಕ್ಷ
- **ಹೃದಯ ಬೈಪಾಸ್ ಸರ್ಜರಿ:** ₹4ರಿಂದ ₹7 ಲಕ್ಷ
- **ಕ್ಯಾನ್ಸರ್ ಚಿಕಿತ್ಸೆ:** ₹10ರಿಂದ ₹15 ಲಕ್ಷ ಮೀರಬಹುದು
- **ಐಸಿಯು ವೆಚ್ಚ:** ದಿನಕ್ಕೆ ₹20 ಸಾವಿರದಿಂದ ₹40 ಸಾವಿರದವರೆಗೂ ಆಗಬಹುದು

ನೆನಪಿಡಿ: ನೀವು 5 ವರ್ಷದಲ್ಲಿ ಕೂಡಿಟ್ಟ ಹಣ ಒಂದು ವಾರದ ಆಸ್ಪತ್ರೆ ವಾಸದಲ್ಲಿ ಖಾಲಿಯಾಗಬಹುದು. ಆಸ್ಪತ್ರೆಯಿಂದ ಬಂದ ನಂತರದ ಮಾತ್ರೆ ಮತ್ತು ವೈದ್ಯಕೀಯ ಪರೀಕ್ಷೆಗಳ ಖರ್ಚು ಬೇರೆ.

2. ಹಣ ಉಳಿಸಿ ಚಿಕಿತ್ಸೆ ಕೊಡಿಸುತ್ತೇನೆ: 'ಪೋಷಕರಿಗೆ ವಿಮಾ ಕಂತು ಹೆಚ್ಚು, ಅದಕ್ಕೆ ಬದಲಾಗಿ ನಾನೇ ಹಣ ಉಳಿಸುತ್ತೇನೆ' ಎಂಬ ಹುಂಬತನದ ನಿರ್ಧಾರವು ಕುಟುಂಬಗಳನ್ನು ಸಾಲದ ಸುಳಿಗೆ ತಳ್ಳುತ್ತದೆ. ವರ್ಷಕ್ಕೆ ₹50 ಸಾವಿರ ಕಂತು ಉಳಿಸಲು ಹೋಗಿ, ಅಂತಿಮವಾಗಿ ₹10 ಲಕ್ಷದ ಆಸ್ತಿ ಮಾರುವ ಅಥವಾ ಸಾಲ ಮಾಡುವ ಪರಿಸ್ಥಿತಿ ತಂದುಕೊಳ್ಳುತ್ತೀರಿ.

ಅಲ್ಲದೆ, ಕೆಲಸ ಮಾಡುತ್ತಿರುವ ಕಂಪನಿ ಒದಗಿಸುವ ವಿಮೆ ಮೇಲಿನ ಅವಲಂಬನೆಯೂ ಅಪಾಯಕಾರಿ. ಕೆಲಸ ಬದಲಿಸಿದಾಗ ಅಥವಾ ನಿವೃತ್ತಿಯ ನಂತರ ಈ ರಕ್ಷಣೆ ಇರುವುದಿಲ್ಲ. ಅಷ್ಟೇ ಅಲ್ಲದೆ, ಹೆಚ್ಚಿನ ಕಂಪನಿ ಪಾಲಿಸಿಗಳಲ್ಲಿ ಪೋಷಕರಿಗೆ ಅತ್ಯಲ್ಪ ಕವರೇಜ್ ಇರುತ್ತದೆ. ವಿಮೆ ಎಂಬುದು ಲಾಭ ತರುವ ಹೂಡಿಕೆ ಅಲ್ಲ, ಅದು ನಿಮ್ಮ ಆರ್ಥಿಕ ಪರಿಸ್ಥಿತಿ ಕುಸಿಯದಂತೆ ತಡೆಯುವ 'ರಕ್ಷಾ ಕವಚ'.

3. ಆರೋಗ್ಯ ವಿಮೆ ಆಯ್ಕೆ ಮಾಡುವಾಗ ಎಚ್ಚರ: ಆರೋಗ್ಯ ವಿಮೆಯನ್ನು ಆಸ್ಪತ್ರೆ ಬಿಲ್ ಪಾವತಿಯ ಅನುಕೂಲವನ್ನು ಮಾತ್ರ ನೋಡಬಾರದು. ಒಂದು ಉತ್ತಮ ಪಾಲಿಸಿಯು ಆಸ್ಪತ್ರೆಗೆ ದಾಖಲಾಗುವ ಮೊದಲಿನ ತಪಾಸಣೆ, ಸರ್ಜರಿ ವೆಚ್ಚ, ಮತ್ತು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರದ ಚಿಕಿತ್ಸೆಯನ್ನು ಒಳಗೊಂಡಿರಬೇಕು. ಪೋಷಕರಿಗೆ ವಿಮೆ ಪಡೆಯುವಾಗ ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ:

- **ಕವರೇಜ್ ಮೊತ್ತ:** ಕನಿಷ್ಠ ₹10 ಲಕ್ಷದಿಂದ ₹25 ಲಕ್ಷ ಇರಲಿ
- **ನಗದು ರಹಿತ ಚಿಕಿತ್ಸಾ ಸೌಲಭ್ಯ:** ಕೈಯಿಂದ ಹಣ ಪಾವತಿಸದೆ ವಿಮಾ ಕಂಪನಿಯೇ ನೇರವಾಗಿ ಪಾವತಿಸುವ ನಗದು ರಹಿತ (ಕ್ಯಾಶ್‌ಲೆಸ್) ಚಿಕಿತ್ಸಾ ಸೌಲಭ್ಯವಿರಲಿ
- **ಕಾಯುವಿಕೆ ಅವಧಿ (ವೇಟಿಂಗ್ ಪಿರಿಯಡ್):** ಮಧುಮೇಹ, ರಕ್ತದೊತ್ತಡಕ್ಕೆ ಎಷ್ಟು ವರ್ಷಗಳ ನಂತರ ವಿಮಾ ರಕ್ಷೆ ಸಿಗುತ್ತದೆ ಎಂಬುದನ್ನು ಗಮನಿಸಿ. ಕಾಯುವಿಕೆ ಅವಧಿ ಕಡಿಮೆ ಇರುವ ಪಾಲಿಸಿ ಪರಿಗಣಿಸಿ.
- **ನಿರ್ಬಂಧಗಳ ಕುರಿತು ಎಚ್ಚರ:** ಆಸ್ಪತ್ರೆಯ ಕೊಠಡಿ ದರ ಮಿತಿ ಮತ್ತು ಕೋ–ಪೇಮೆಂಟ್ (ವಿಮಾ ಕ್ಲೇಮ್ ಮಾಡುವಾಗ ನೀವೇ ಚಿಕಿತ್ಸಾ ವೆಚ್ಚದ ಒಂದಷ್ಟು ಪಾಲು ಪಾವತಿಸುವುದು) ಮಿತಿಗಳಿಲ್ಲದ ಪಾಲಿಸಿ ಉತ್ತಮ
- **ನಿರ್ದಿಷ್ಟ ಚಿಕಿತ್ಸೆಗಳಿಗೆ ವೆಚ್ಚ ಮಿತಿ:** ಕೆಲ ಆರೋಗ್ಯ ವಿಮೆಗಳು ನಿರ್ದಿಷ್ಟ ಚಿಕಿತ್ಸೆಗಳಿಗೆ ಹೆಚ್ಚಿನ ಕವರೇಜ್ ನೀಡುವುದಿಲ್ಲ. ಉದಾಹರಣೆಗೆ ನೀವು ₹10 ಲಕ್ಷ ಮೌಲ್ಯದ ಆರೋಗ್ಯ ವಿಮೆ ಪಡೆದಿದ್ದೀರಿ. ಆದರೆ ವಿಮಾ ಕಂಪನಿ ಹೃದ್ರೋಗ ಸಂಬಂಧಿತ ಚಿಕಿತ್ಸೆಗೆ ಕೇವಲ ₹4 ಲಕ್ಷದವರೆಗೆ ಕವರೇಜ್ ನೀಡುವುದಾಗಿ ನಿಬಂಧನೆ ಹಾಕಿರುತ್ತದೆ. ನಿರ್ದಿಷ್ಟ ಚಿಕಿತ್ಸೆಗಳಿಗೆ ಇಂತಹ ವೆಚ್ಚ ಮಿತಿ ಹೇರುವ ಪಾಲಿಸಿಗಳಿಂದ ದೂರವಿರಿ
- **ಕ್ಲೇಮ್ ಸೆಟ್ಲ್‌ಮೆಂಟ್ ರೇಷಿಯೊ:** ಪೋಷಕರಿಗೆ ಆರೋಗ್ಯ ವಿಮೆ ಖರೀದಿಸುವಾಗ ಕ್ಲೇಮ್ ಸೆಟ್ಲ್‌ಮೆಂಟ್ ರೇಷಿಯೊ ಬಹಳ ಮುಖ್ಯ. ಸಾಧ್ಯವಾದಷ್ಟು ಶೇ 90-95ಕ್ಕಿಂತ ಹೆಚ್ಚಿನ ಕ್ಲೇಮ್ ಸೆಟಲ್ ಮಾಡಿರುವ ವಿಮಾ ಕಂಪನಿಗಳಿಂದ ವಿಮೆ ಪಡೆದುಕೊಳ್ಳಿ

ಕಿವಿಮಾತು: ಪೋಷಕರು ನಮಗೆ ನೆಮ್ಮದಿಯ ಬದುಕು ನೀಡಲು ತಮ್ಮ ಜೀವನವನ್ನೇ ಸವೆಸಿದ್ದಾರೆ. ಇಂದು ಅವರ ಆರೋಗ್ಯ ಕಾಡಿದಾಗ ನಿಮ್ಮ ಗಮನ ಅವರ ಗುಣಮುಖದ ಕಡೆ ಇರಬೇಕೇ ಹೊರತು, ಹಣ ಹೊಂದಿಸುವ ಆತಂಕದ ಕಡೆ ಅಲ್ಲ. 'ಆರೋಗ್ಯ ವಿಮೆ' ಕೇವಲ ಹಣಕಾಸಿನ ವಿಚಾರವಲ್ಲ, ಅದು ನಿಮ್ಮ ಪೋಷಕರಿಗೆ ನೀವು ನೀಡುವ ನೆಮ್ಮದಿಯ ಗ್ಯಾರಂಟಿ. ಅನಾರೋಗ್ಯವಾದಾಗ ದುಡಿದ ದುಡ್ಡೆಲ್ಲಾ ಆಸ್ಪತ್ರೆಗೆ ಕಟ್ಟುವ ಬದಲು, ದುಡಿಮೆಯ ಸಣ್ಣ ಹಣವನ್ನು ಆರೋಗ್ಯ ವಿಮೆಗೆ ಮೀಸಲಿಡುವುದು ಜಾಣತನ.

500 ಬಿಲಿಯನ್ ಡಾಲರ್ ಸರಕು ಖರೀದಿ ಕಷ್ಟವಲ್ಲ: ಗೋಯಲ್

ನವದೆಹಲಿ (ಪಿಟಿಐ): ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ 500 ಬಿಲಿಯನ್ ಡಾಲರ್ (ಸರಿಸುಮಾರು ₹45.28 ಲಕ್ಷ ಕೋಟಿ) ಮೌಲ್ಯದ ಸರಕುಗಳನ್ನು ಖರೀದಿಸುವುದು ಭಾರತಕ್ಕೆ ಕಷ್ಟವಾಗದು ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.



ಪೀಯೂಷ್ ಗೋಯಲ್

ಈ ಮೊತ್ತದ ಸರಕುಗಳ ಖರೀದಿಯು ಭಾರತ–ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಭಾಗವಾಗಿದೆ.

'ಕಚ್ಚಾ ತೈಲ, ದ್ರವೀಕೃತಕ ನೈಸರ್ಗಿಕ ಅನಿಲ (ಎಲ್‌ಎನ್‌ಜಿ), ದ್ರವೀಕೃಕ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮಾತ್ರವಲ್ಲದೆ ವೈಮಾನಿಕ ಕ್ಷೇತ್ರವೊಂದಕ್ಕೇ ನಮಗೆ 100 ಬಿಲಿಯನ್ ಡಾಲರ್‌ಗಿಂತ (ಸರಿಸುಮಾರು ₹9 ಲಕ್ಷ ಕೋಟಿ) ಹೆಚ್ಚು ಮೌಲ್ಯದ ಸರಕುಗಳು ಬೇಕು ಎಂಬುದು ನನ್ನ ಅನಿಸಿಕೆ' ಎಂದು ಗೋಯಲ್ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಮೆರಿಕ ಮತ್ತು ಭಾರತ ಶನಿವಾರ ಹೊರಡಿಸಿರುವ ಜಂಟಿ ಹೇಳಿಕೆ ಪ್ರಕಾರ, ಭಾರತವು ಅಮೆರಿಕದಿಂದ ಐದು ವರ್ಷಗಳಲ್ಲಿ 500 ಬಿಲಿಯನ್ ಡಾಲರ್ ಮೌಲ್ಯದ ಇಂಧನ, ವಿಮಾನ ಮತ್ತು ಅದರ ಬಿಡಿಭಾಗಗಳು, ತಂತ್ರಜ್ಞಾನ ಉತ್ಪನ್ನಗಳು ಸೇರಿದಂತೆ ವಿವಿಧ ಉತ್ಪನ್ನಗಳನ್ನು ಖರೀದಿಸುವ ಬಯಕೆಯನ್ನು ವ್ಯಕ್ತಪಡಿಸಿದೆ.

ಕಾರ್ಮಿಕರ ಶ್ರಮ ಹೆಚ್ಚಿನ ಮಟ್ಟದಲ್ಲಿ ಅಗತ್ಯವಿರುವ ಜವಳಿ, ಚರ್ಮೋದ್ಯಮ ಮತ್ತು ಪಾದರಕ್ಷೆಗಳು, ಕರಕುಶಲ ಉತ್ಪನ್ನಗಳು, ರಾಸಾಯನಿಕಗಳು, ಹವಳಗಳು ಹಾಗೂ ಆಭರಣ ಉದ್ಯಮದಕ್ಕೆ ಭಾರತದ ಸರಕುಗಳ ಮೇಲಿನ ಸುಂಕ ಕಡಿಮೆ ಆಗುತ್ತಿರುವ ಕಾರಣದಿಂದಾಗಿ ಹೆಚ್ಚು ಅನುಕೂಲ ಆಗಲಿದೆ, ಈ ವಲಯದ ಉತ್ಪನ್ನಗಳು ಅಮೆರಿಕದಲ್ಲಿ ಬೇರೆ ಕೆಲವು ದೇಶಗಳ ಇದೇ ಬಗೆಯ ಉತ್ಪನ್ನಗಳಿಗಿಂತ ಕಡಿಮೆ ಬೆಲೆಗೆ ಸಿಗಲಿವೆ.

ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದವು ದೇಶದ ರೈತರ ಹಿತವನ್ನು ಕಾಯಲಿದೆ ಎಂದು ಗೋಯಲ್ ಪುನರುಚ್ಚರಿಸಿದ್ದಾರೆ.

'ಚೌಕಾಶಿ ಅಲ್ಲ, ರಚನಾತ್ಮಕ ಮಾತುಕತೆ ಮೂಲಕ ಯಶಸ್ವಿ'

ಭೋಪಾಲ್ (ಪಿಟಿಐ): 'ಭಾರತ ಹಾಗೂ ಅಮೆರಿಕ ನಡುವಿನ ವ್ಯಾಪಾರ ಒಪ್ಪಂದವು ರಚನಾತ್ಮಕ ಮಾತುಕತೆಯಿಂದ ನಡೆದಿದೆಯೇ ಹೊರತು ಚೌಕಾಶಿಯಿಂದ ಅಲ್ಲ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಒಪ್ಪಂದದ ವಿಚಾರದಲ್ಲಿ ಅಮೆರಿಕದ ಮುಂದೆ ಭಾರತವು ಸಂಪೂರ್ಣ ಶರಣಾಗತಿಯಾಗಿದೆ ಎಂದು ಕಾಂಗ್ರೆಸ್ ಮಾಡಿದ ಆರೋಪವನ್ನು ಅವರು ತಳ್ಳಿಹಾಕಿದ್ದಾರೆ.

'ಕೃಷಿ ಕ್ಷೇತ್ರಕ್ಕೆ ಈ ಒಪ್ಪಂದದಿಂದ ಸಂಪೂರ್ಣ ರಕ್ಷಣೆ ದೊರೆಯಲಿದ್ದು, ರೈತರು ಹಾಗೂ ದೇಶದ ಹಿತರಕ್ಷಣೆಯೇ ಸರ್ವೋಚ್ಚ ಗುರಿಯಾಗಿದೆ. ದೇಶದ ಕೃಷಿ ಉತ್ಪನ್ನಗಳನ್ನು ಒಪ್ಪಂದದಿಂದ ಹೊರಗಿಡಲಾಗಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಈ ಒಪ್ಪಂದದಿಂದ ಭಾರತದ ಯಾವುದೇ ಕೃಷಿ ಉತ್ಪನ್ನಕ್ಕೆ ಸಣ್ಣ ಮಟ್ಟದ ಹಾನಿಯೂ ಆಗುವುದಿಲ್ಲ. ದಶಕಗಳ ಕಾಲ ಆಡಳಿತ ನಡೆಸಿರುವ ಕಾಂಗ್ರೆಸ್ ಪಕ್ಷವು, ಜಾಗತಿಕ ಮಾರುಕಟ್ಟೆಗಳ ಜೊತೆಗೆ ರೈತರನ್ನು ಜೋಡಿಸಲು ಸಂಪೂರ್ಣವಾಗಿ ವಿಫಲವಾಗಿದೆ, ಭಾರತದ ಆರ್ಥಿಕತೆಗೆ ಸ್ಥಿರತೆ ತರಲು ಸಾಧ್ಯವಾಗಿಲ್ಲ' ಎಂದು ಚೌಹಾಣ್ ಆರೋಪಿಸಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹560	100 ಕ್ಕೆ	₹562
12 ಕ್ಕೆ	₹80		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹588-770
ದ್ವಿತಳಿ (ಬಿ.ವಿ)	₹356-933

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಬ್ಯಾಂಕಿಂಗ್ ಉನ್ನತ ಮಟ್ಟದ ಸಮಿತಿ ಶೀಘ್ರ

ವಿಕಸಿತ ಭಾರತಕ್ಕೆ ಅಗತ್ಯವಿರುವ ವ್ಯವಸ್ಥೆಯ ಬಗ್ಗೆ ಸಮಿತಿಯಿಂದ ಪರಿಶೀಲನೆ

ನವದೆಹಲಿ (ಪಿಟಿಐ): ವಿಕಸಿತ ಭಾರತಕ್ಕಾಗಿನ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿಯನ್ನು ಕೇಂದ್ರ ಸರ್ಕಾರವು ಶೀಘ್ರವೇ ರಚಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.



ನಿರ್ಮಲಾ ಸೀತಾರಾಮನ್

ಅಭಿವೃದ್ಧಿ ಹೊಂದಿದ ಭಾರತದ ಹಣಕಾಸಿನ ಅಗತ್ಯಗಳನ್ನು ಪೂರೈಸಬಲ್ಲ ಬೃಹತ್ ಬ್ಯಾಂಕ್‌ಗಳ ಸೃಷ್ಟಿಗೆ ಅಗತ್ಯವಿರುವ ನೀಲನಕ್ಷೆಯನ್ನು ಈ ಸಮಿತಿಯು ಸಿದ್ಧಪಡಿಸಬೇಕಿದೆ.

'ವಿಕಸಿತ ಭಾರತಕ್ಕೆ ಅಗತ್ಯವಿರುವ ಹಣಕಾಸಿನ ನೆರವು ನೀಡುವಂತಹ ಬ್ಯಾಂಕಿಂಗ್ ವ್ಯವಸ್ಥೆ ಹೊಂದಲು ನಾವು ಏನೆಲ್ಲ ಮಾಡಬೇಕು ಎಂಬುದನ್ನು ಸಮಿತಿಯು ನಮಗೆ ತಿಳಿಸಬೇಕಿದೆ' ಎಂದು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ನಿರ್ಮಲಾ ಅವರು ಹೇಳಿದ್ದಾರೆ.

ಸಮಿತಿಯು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ವಿಲೀನಕ್ಕೆ ಶಿಫಾರಸು ಮಾಡಬಹುದೇ ಎಂಬ ಪ್ರಶ್ನೆಗೆ ಉತ್ತರವಾಗಿ ನಿರ್ಮಲಾ ಅವರು, 'ಇದನ್ನು ಅಷ್ಟು ಸಂಕುಚಿತವಾಗಿ ನೋಡಬಾರದು' ಎಂದು ಹೇಳಿದ್ದಾರೆ.

'ವಿಕಸಿತ ಭಾರತದ ಹಣಕಾಸಿನ ಅಗತ್ಯಗಳನ್ನು ಒದಗಿಸುವಂತಹ ಬ್ಯಾಂಕಿಂಗ್ ವಲಯಕ್ಕಾಗಿ ಈ ಸಮಿತಿ. ನಾವು ವಿಕಸಿತ ಭಾರತದ ಗುರಿಯನ್ನು ತಲುಪಬೇಕಿದೆ... ಅದಕ್ಕೆ ಹಣ ಬೇಕು, ಹಣಕಾಸಿನ ನೆರವು ಬೇಕು, ಸಾಲ ಬೇಕು, ಜನಸಾಮಾನ್ಯರಿಗೆ ಬ್ಯಾಂಕಿಂಗ್ ಸೌಲಭ್ಯ ತಲುಪಬೇಕು' ಎಂದು ನಿರ್ಮಲಾ ವಿವರಣೆ ನೀಡಿದ್ದಾರೆ.

ಸಮಿತಿಯನ್ನು ಶೀಘ್ರದಲ್ಲಿಯೇ ರಚಿಸಲಾಗುತ್ತದೆ ಎಂದಿದ್ದಾರೆ. ಸಮಿತಿಯ ರಚನೆ ಪ್ರಸ್ತಾವ ಈ ಬಾರಿಯ ಬಜೆಟ್‌ನಲ್ಲಿ ಇದೆ.

ನೀತಿಗಳಲ್ಲಿ ದಿಢೀರ್ ಬದಲಾವಣೆ ಇಲ್ಲ: ಸರ್ಕಾರದ ನೀತಿಗಳಲ್ಲಿ ಮತ್ತೆ ಮತ್ತೆ ಬದಲಾವಣೆ ತರುತ್ತಿರಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಒತ್ತಿಹೇಳಿದ್ದುದು ಈ ಬಾರಿಯ ಬಜೆಟ್‌ಅನ್ನು ರೂಪಿಸಿದೆ ಎಂದು ನಿರ್ಮಲಾ ತಿಳಿಸಿದ್ದಾರೆ.

'ಜನರು ಸ್ಥಿರತೆಯನ್ನು ಬಯಸುತ್ತಾರೆ. ಹೀಗಾಗಿಯೇ ಅವರು ಮೋದಿ ಅವರನ್ನು ಸತತ ಮೂರನೆಯ ಬಾರಿಗೆ ಚುನಾಯಿಸಿದ್ದಾರೆ...' ಎಂದು ಅವರು ಸಂದರ್ಶನದಲ್ಲಿ ಹೇಳಿದ್ದಾರೆ.

'ಸರ್ಕಾರಿ ಬ್ಯಾಂಕ್‌ಗಳ ಲಾಭ ₹2 ಲಕ್ಷ ಕೋಟಿ ದಾಟುವ ನಿರೀಕ್ಷೆ'

'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ (ಪಿಎಸ್‌ಬಿ) ಲಾಭವು ₹2 ಲಕ್ಷ ಕೋಟಿ ದಾಟುವ ವಿಶ್ವಾಸ ಇದೆ' ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ.ನಾಗರಾಜು ತಿಳಿಸಿದ್ದಾರೆ.

ದೇಶದ ಬ್ಯಾಂಕಿಂಗ್ ವಲಯವು ಉತ್ತಮ ಸ್ಥಿತಿಯಲ್ಲಿದೆ ಎಂದ ಅವರು, 'ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸಾಲ ನೀಡಿಕೆ ಹೆಚ್ಚಳದ ಪ್ರಮಾಣವು ಶೇ 12ರಷ್ಟು ಮತ್ತು ಠೇವಣಿ ಹೆಚ್ಚಳದ ಪ್ರಮಾಣವು ಶೇ 10ರಷ್ಟಿದೆ. ಇವೆರಡೂ ಉತ್ತಮ ಪ್ರಮಾಣ' ಎಂದು ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್‌ನಿಂದ ಸೆಪ್ಟೆಂಬರ್) ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಒಟ್ಟು ₹1 ಲಕ್ಷ ಕೋಟಿ ಲಾಭ ಗಳಿಸಿವೆ. ಇದು ಈ ಆರ್ಥಿಕ ವರ್ಷ ಪೂರ್ಣಗೊಳ್ಳುವ ವೇಳೆಗೆ ₹2 ಲಕ್ಷ ಕೋಟಿ ದಾಟುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಈ ಬ್ಯಾಂಕ್‌ಗಳ ಲಾಭವು ದುಪ್ಪಟ್ಟಾಗಿದೆ. 2022–23ರ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ಗಳು ₹1.05 ಲಕ್ಷ ಕೋಟಿ ಲಾಭ ಗಳಿಸಿದ್ದವು. 2023–24ರಲ್ಲಿ ₹1.41 ಲಕ್ಷ ಕೋಟಿ ಮತ್ತು 2024–25 ರಲ್ಲಿ ₹1.78 ಲಕ್ಷ ಕೋಟಿ ಲಾಭ ಗಳಿಸಿದ್ದವು.

ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ಅಂತ್ಯದ ವೇಳೆಗೆ ಬ್ಯಾಂಕ್‌ಗಳ ವಸೂಲಾಗದ ಸಾಲದ ಪ್ರಮಾಣ ಶೇ 2.30 ಮತ್ತು ನಿವ್ವಳ ಎನ್‌ಪಿಎ ಶೇ 3ರಷ್ಟಿದೆ. ಪಿಸಿಆರ್ ಶೇ 94.63ರಷ್ಟಾಗಿದ್ದು, ಸುಧಾರಣೆ ಕಂಡಿದೆ. ಬಂಡವಾಳ ಮೀಸಲು ಅನುಪಾತ ಶೇ 15.96ರಷ್ಟಿದೆ.

2024–25ರಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ₹34,990 ಕೋಟಿ ಡಿವಿಡೆಂಡ್ ಘೋಷಿಸಿವೆ. ಇದು 2023–24ರಲ್ಲಿ ₹27,830 ಕೋಟಿಯಷ್ಟಿತ್ತು.

ಡಲ್ಲಾಸ್‌ನಲ್ಲಿ ಅಲ್ಲ, ಪಾಕ್‌ನಲ್ಲಿ ಇದ್ದಂತೆ ಭಾಸ: ಅಮೆರಿಕದ ಸಂಸದ

ನ್ಯೂಯಾರ್ಕ್ (ಪಿಟಿಐ): 'ಅಮೆರಿಕದ ಟೆಕ್ಸಾಸ್ ರಾಜ್ಯದ ಕೆಲ ಪ್ರದೇಶಗಳು ಇಸ್ಲಾಮೀಕರಣಕ್ಕೆ ಒಳಗಾಗುತ್ತಿದ್ದು, ಅಲ್ಲಿಯ ಸ್ಥಳೀಯ ಮಾಲ್‌ಗಳಿಗೆ ಭೇಟಿ ನೀಡಿದರೆ ಡಲ್ಲಾಸ್‌ನಲ್ಲಿ ಅಲ್ಲ, ಪಾಕಿಸ್ತಾನದಲ್ಲಿ ಇದ್ದಂತೆ ಭಾಸವಾಗುತ್ತದೆ' ಎಂದು ಅಮೆರಿಕದ ಕಾಂಗ್ರೆಸ್ (ಸಂಸತ್) ಸದಸ್ಯ ಬ್ರಾಂಡನ್ ಗಿಲ್ ಕಳವಳ ವ್ಯಕ್ತಪಡಿಸಿದ್ದಾರೆ.

'ಡಲ್ಲಾಸ್ ಪ್ರದೇಶದಲ್ಲಿನ ಇಸ್ಲಾಮೀಕರಣದ ಬಗ್ಗೆ ಚಿಂತಿತರಾಗಿರುವ ಮತದಾರರು ಈ ಬಗ್ಗೆ ನನ್ನ ಬಳಿ ಆಗಾಗ ಹೇಳುತ್ತಿರುತ್ತಾರೆ' ಎಂದು ರಿಪಬ್ಲಿಕನ್ ಪಕ್ಷದ ಸದಸ್ಯರಾಗಿರುವ ಗಿಲ್ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

'ಇಲ್ಲಿನ ಮತದಾರರು ತಾವು ತಲೆಮಾರುಗಳಿಂದ ಹೊಂದಿದ್ದ ಭೂಮಿಯ ಬಳಿ ತಲೆ ಎತ್ತುತ್ತಿರುವ ಮಸೀದಿಗಳ ಬಗ್ಗೆ ಕಳವಳಗೊಂಡು ಪ್ರಶ್ನಿಸುತ್ತಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ನಮ್ಮಲ್ಲಿನ ಕೆಲ ಸಮುದಾಯಗಳು ಪೂರ್ಣವಾಗಿ ರೂಪಾಂತರಗೊಳ್ಳುತ್ತಿವೆ. ಸ್ಥಳೀಯ ಮಾಲ್‌ಗಳನ್ನು ಗಮನಿಸಿದರೆ, ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿ ಅಲ್ಲ, ಪಾಕಿಸ್ತಾನದಲ್ಲಿ ಇದ್ದಂತೆ ಭಾಸವಾಗುತ್ತಿದೆ ಎಂಬುದು ಇಲ್ಲಿನ ಮತದಾರ ಗಂಭೀರ ಪ್ರಶ್ನೆಯಾಗಿದೆ' ಎಂದು ಅವರು ವಿವರಿಸಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ನರ್ಗಿಸ್ ಮೊಹಮ್ಮದಿಗೆ ಆರು ವರ್ಷ ಜೈಲುಶಿಕ್ಷೆ

ಟೆಹರಾನ್ (ಎಎಫ್‌ಪಿ): ಇರಾನ್‌ನ ಮಾನವ ಹಕ್ಕುಗಳ ಹೋರಾಟಗಾರ್ತಿ, ನೊಬೆಲ್ ಶಾಂತಿ ಪುರಸ್ಕೃತೆ ನರ್ಗಿಸ್ ಮೊಹಮ್ಮದಿ ಅವರಿಗೆ ಇರಾನ್ ನ್ಯಾಯಾಲಯವು ಆರು ವರ್ಷಗಳ ಕಾಲ ಶಿಕ್ಷೆ ವಿಧಿಸಿದೆ.



ನರ್ಗಿಸ್ ಮೊಹಮ್ಮದಿ

'ಅಪರಾಧಗಳನ್ನು ಮಾಡಲು ಒಂದೆಡೆ ಸೇರಿ, ಒಳಸಂಚು ರೂಪಿಸಿದ ಆರೋಪದ ಮೇಲೆ ಅವರಿಗೆ ಆರು ವರ್ಷಗಳ ಕಾಲ ಶಿಕ್ಷೆ ವಿಧಿಸಲಾಗಿದ್ದು, ಎರಡು ವರ್ಷದಿಂದ ದೇಶದಿಂದ ಹೊರಗೆ ತೆರಳದಂತೆ ನಿಷೇಧ ಹೇರಲಾಗಿದೆ' ಎಂದು ಅವರ ಪರ ವಕೀಲ ಮೊಸ್ತಫ ನಿಲ್ಲಿ ತಿಳಿಸಿದ್ದಾರೆ.

'ಸರ್ಕಾರದ ವಿರುದ್ಧ ಪಿತೂರಿ ನಡೆಸಿದ ಆರೋಪದ ಮೇಲೆ ಮೊಹಮ್ಮದಿ ಅವರಿಗೆ ಒಂದೂವರೆ ವರ್ಷ ಜೈಲುಶಿಕ್ಷೆ ವಿಧಿಸಲಾಗಿದ್ದು, ದಕ್ಷಿಣ ಖೊರಾಸಾನ್ ನಗರದ ಖೊಸ್ಫ್ ಪಟ್ಟಣದಿಂದ ಎರಡು ವರ್ಷಗಳ ಕಾಲ ಗಡಿಪಾರು ವಿಧಿಸಲಾಗಿದೆ' ಎಂದು ವಕೀಲರು ತಿಳಿಸಿದ್ದಾರೆ.

ಮೊಹಮ್ಮದಿ ಅವರು ಇರಾನ್‌ನಲ್ಲಿ ಮಹಿಳೆಯರ ಹಕ್ಕುಗಳು, ಪ್ರಜಾಪ್ರಭುತ್ವದ ಪರವಾಗಿ ಮತ್ತು ಮರಣ ದಂಡನೆ ಶಿಕ್ಷೆ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ.

ಇರಾನ್‌ನಲ್ಲಿ ತುಳಿತಕ್ಕೆ ಒಳಗಾದ ಮಹಿಳೆಯರ ಪರ ಧ್ವನಿ ಎತ್ತಿದ, ಮಾನವ ಹಕ್ಕುಗಳಿಗಾಗಿ ಹೋರಾಡಿದ ಮತ್ತು ಎಲ್ಲರಿಗೂ ಸ್ವಾತಂತ್ರ್ಯ ಸಿಗಬೇಕೆನ್ನುವ ಆಶಯದಿಂದ ಕೆಲಸ ಮಾಡಿದ ಕಾರಣಕ್ಕಾಗಿ ನರ್ಗಿಸ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಭಾಜನರಾಗಿದ್ದರು.

ಎಫ್‌ಪಿಐ: ₹8,129 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಸತತ ಮೂರು ತಿಂಗಳುಗಳಿಂದ ದೇಶದ ಬಂಡವಾಳ ಮಾರುಕಟ್ಟೆಗಳಿಂದ ಹಣವನ್ನು ಹಿಂದಕ್ಕೆ ಪಡೆಯುತ್ತಿದ್ದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ಫೆಬ್ರುವರಿ ತಿಂಗಳ ಆರಂಭದಿಂದ 6ರವರೆಗೆ ₹8,129 ಕೋಟಿ ಹೂಡಿಕೆ ಮಾಡಿದ್ದಾರೆ.

ಅಮೆರಿಕ ಮತ್ತು ಭಾರತದ ವ್ಯಾಪಾರ ಒಪ್ಪಂದದಿಂದ ಹೂಡಿಕೆದಾರರಲ್ಲಿ ಆಶಾವಾದ ಮೂಡಿದೆ. ಇದು ದೇಶದ ಷೇರುಪೇಟೆಯಲ್ಲಿ ವಿದೇಶಿ ಹೂಡಿಕೆದಾರರ ಬಂಡವಾಳ ಹರಿವಿಗೆ ಒಂದು ಕಾರಣವಾಗಿದೆ.

'ದೇಶದ ಬೆಳವಣಿಗೆಯ ಮುನ್ನೋಟದ ಬಗ್ಗೆ ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿದೆ. ರೆಪೊ ದರ ಸ್ಥಿರವಾಗಿದೆ. ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದದ ಬಗ್ಗೆ ಆಶಾವಾದ ಹೆಚ್ಚಿದೆ. ಇದು ವಿದೇಶಿ ಹೂಡಿಕೆದಾರರಿಗೆ ಷೇರುಗಳನ್ನು ಖರೀದಿಸಲು ಪೂರಕವಾಗಿವೆ' ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಪ್ರಧಾನ ವ್ಯವಸ್ಥಾಪಕ (ಸಂಶೋಧನಾ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

2025ರ ನವೆಂಬರ್‌ನಲ್ಲಿ ವಿದೇಶಿ ಹೂಡಿಕೆದಾರರು ₹3,765 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು. ಡಿಸೆಂಬರ್‌ನಲ್ಲಿ ₹22,611 ಕೋಟಿ, ಈ ವರ್ಷದ ಜನವರಿಯಲ್ಲಿ ₹35,962 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು.

2025ರ ಪೂರ್ಣ ವರ್ಷದಲ್ಲಿ ದೇಶದ ಷೇರುಪೇಟೆಯಿಂದ ಹೂಡಿಕೆದಾರರು ₹1.66 ಲಕ್ಷ ಕೋಟಿ ಹಣವನ್ನು ಹಿಂಪಡೆದಿದ್ದರು. ಕರೆನ್ಸಿ ಮೌಲ್ಯದಲ್ಲಿ ಏರಿಳಿತ, ಜಾಗತಿಕ ಮಟ್ಟದಲ್ಲಿ ಉಂಟಾಗಿದ್ದ ವ್ಯಾಪಾರ ಬಿಕ್ಕಟ್ಟು, ಅಮೆರಿಕದ ಸುಂಕ ಮತ್ತು ಷೇರುಪೇಟೆಯಲ್ಲಿ ಹಲವು ಷೇರುಗಳ ಮೌಲ್ಯ ದುಬಾರಿ ಆಗಿದ್ದುದರಿಂದ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರು.

ಭಯೋತ್ಪಾದನೆ ವಿಷಯದಲ್ಲಿ ರಾಜಿ ಇಲ್ಲ, ದ್ವಿಮುಖ ನೀತಿಯೂ ಇಲ್ಲ: ಪ್ರಧಾನಿ ನರೇಂದ್ರ ಮೋದಿ

11 ಒಪ್ಪಂದಗಳಿಗೆ ಭಾರತ–ಮಲೇಷ್ಯಾ ಸಮ್ಮತಿ


ಕ್ವಾಲಾಲಂಪುರ (ಪಿಟಿಐ): ವ್ಯಾಪಾರ, ಹೂಡಿಕೆ, ರಕ್ಷಣೆ, ಇಂಧನ, ಉತ್ಪಾದನೆ ಮತ್ತು ಸೆಮಿಕಂಡಕ್ಟರ್‌ನಂತಹ ಆದ್ಯತಾ ವಲಯಗಳಲ್ಲಿನ ಸಂಬಂಧ ವಿಸ್ತರಿಸಲು ಭಾರತ ಮತ್ತು ಮಲೇಷ್ಯಾ ಭಾನುವಾರ ಒಪ್ಪಿಗೆ ಸೂಚಿಸಿವೆ.

ಸೆಮಿಕಂಡಕ್ಟರ್ ವಲಯ ಸೇರಿದಂತೆ ವಿವಿಧ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ವೃದ್ಧಿಸಲು ಒಟ್ಟು 11 ಒಪ್ಪಂದಗಳು ಮತ್ತು ದಾಖಲೆಗಳಿಗೆ ಉಭಯ ದೇಶಗಳ ಪ್ರಧಾನಿ ಅವರು ಸಹಿ ಹಾಕಿದರು.

ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗಿನ ಮಾತುಕತೆ ನಂತರ, ಭಯೋತ್ಪಾದನೆಯನ್ನು ಎದುರಿಸುವ ಬಗ್ಗೆ ಭಾರತದ ನಿಲುವನ್ನು ಪುನರುಚ್ಚರಿಸಿದ ಮೋದಿ, 'ಭಯೋತ್ಪಾದನೆ ಬಗ್ಗೆ ನಮ್ಮ ಸಂದೇಶ ಸ್ಪಷ್ಟವಾಗಿದೆ. ಈ ವಿಷಯದಲ್ಲಿ ಯಾವುದೇ ದ್ವಿಮುಖ ನೀತಿಗಳಿಲ್ಲ, ರಾಜಿ ಇಲ್ಲ' ಎಂದು ಹೇಳಿದರು.

ದ್ವಿಪಕ್ಷೀಯ ವ್ಯಾಪಾರಕ್ಕಾಗಿ ಸ್ಥಳೀಯ ಕರೆನ್ಸಿಗಳಾದ ಭಾರತೀಯ ರೂಪಾಯಿ ಮತ್ತು ಮಲೇಷ್ಯಾದ ರಿಂಗಿಟ್ ಬಳಕೆಯನ್ನು ಉತ್ತೇಜಿಸುವ ನಿರ್ಧಾರವನ್ನು ಮೋದಿ ಮತ್ತು ಇಬ್ರಾಹಿಂ ಅವರು ಪ್ರಕಟಿಸಿದರು.

'ಮಲೇಷ್ಯಾದಲ್ಲಿ ಭಾರತೀಯ ಕಾನ್ಸುಲೇಟ್ ಜನರಲ್ ಸ್ಥಾಪಿಸಲಾಗುವುದು. ಎಐ ಮತ್ತು ಡಿಜಿಟಲ್ ತಂತ್ರಜ್ಞಾನಗಳ ಜೊತೆಗೆ ಸೆಮಿಕಂಡಕ್ಟರ್‌ಗಳು, ಆರೋಗ್ಯ ಮತ್ತು ಆಹಾರ ಭದ್ರತಾ ವಲಯದ ಪಾಲುದಾರಿಕೆಯನ್ನು ಮುನ್ನಡೆಸುತ್ತೇವೆ' ಎಂದು ಮೋದಿ ತಿಳಿಸಿದರು.



ಕ್ವಾಲಾಲಂಪುರದಲ್ಲಿ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಹಸ್ತಲಾಘವ ಮಾಡಿದರು –ಪಿಟಿಐ ಚಿತ್ರ

ಪ್ರಮುಖ ನಿರ್ಧಾರಗಳು

- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಶಾಶ್ವತ ಸದಸ್ಯತ್ವಕ್ಕೆ ಮಲೇಷ್ಯಾ ಬೆಂಬಲ
- ಗುಪ್ತಚರ ಮಾಹಿತಿ ಹಂಚಿಕೆ, ಕಡಲ ಭದ್ರತೆ, ರಕ್ಷಣಾ ಸಂಬಂಧ ವೃದ್ಧಿಗೆ ಒತ್ತು
- ಭಯೋತ್ಪಾದನೆಗೆ ಖಂಡನೆ; ಶೂನ್ಯ ಸಹಿಷ್ಣುತೆಗೆ ಕರೆ
- ಭಯೋತ್ಪಾದನೆ ಎದುರಿಸಲು ಸಂಘಟಿತ ಜಾಗತಿಕ ಪ್ರಯತ್ನ ಅಗತ್ಯ
- ಮೂಲಭೂತವಾದ, ಹಿಂಸಾತ್ಮಕ ಉಗ್ರವಾದ ಎದುರಿಸಲು ಉಭಯ ದೇಶಗಳು ಬದ್ಧ

'ಇಂಡೋ–ಪೆಸಿಫಿಕ್ ಪ್ರದೇಶವು ವಿಶ್ವದ ಬೆಳವಣಿಗೆಯ ಎಂಜಿನ್ ಆಗಿ ಹೊರಹೊಮ್ಮುತ್ತಿದೆ. ನಾವು, ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಜೊತೆಗೆ, ಇಂಡೋ–ಪೆಸಿಫಿಕ್ ಪ್ರದೇಶದಾದ್ಯಂತ ಅಭಿವೃದ್ಧಿ, ಶಾಂತಿ ಮತ್ತು ಸ್ಥಿರತೆಗೆ ಬದ್ಧರಾಗಿದ್ದೇವೆ' ಎಂದು ಹೇಳಿದರು.

ಭಾರತ ಮೂಲದ ನಾಯಕರ ಭೇಟಿ: ಪ್ರಧಾನಿ ನರೇಂದ್ರ ಮೋದಿ ಅವರು ಭಾರತ ಮೂಲದ ಸಚಿವರು, ಸಂಸದರು ಮತ್ತು ಸೆನೆಟರ್‌ಗಳನ್ನು ಭಾನುವಾರ ಭೇಟಿ ಮಾಡಿದರು.

'ಎಂಜಿಆರ್ ಅಭಿಮಾನಿ ಅನ್ವರ್ ಇಬ್ರಾಹಿಂ'

'ಭಾರತ ಮತ್ತು ಮಲೇಷ್ಯಾ ದೇಶಗಳು ತಮಿಳು ಭಾಷೆಯ ಮೇಲಿನ ಪ್ರೀತಿಯಿಂದ ಪರಸ್ಪರ ಬೆಸೆದುಕೊಂಡಿವೆ. ಮಲೇಷ್ಯಾದ ಶಿಕ್ಷಣ, ಮಾಧ್ಯಮ ಮತ್ತು ಸಾಂಸ್ಕೃತಿಕ ಜೀವನದಲ್ಲಿ ತಮಿಳು ಭಾಷೆ ಪ್ರಬಲವಾಗಿ ಬೇರೂರಿದೆ. ಭಾರತೀಯ ಮೂಲದ ಸುಮಾರು 30 ಲಕ್ಷ ಮಂದಿ ನೆಲಸಿದ್ದು, ಬಹುಪಾಲು ತಮಿಳು ಮೂಲದವರಾಗಿದ್ದಾರೆ' ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

'ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರು ತಮಿಳಿನ ಮೇರುನಟ ಎಂ.ಜಿ. ರಾಮಚಂದ್ರನ್ ಅವರ ದೊಡ್ಡ ಅಭಿಮಾನಿ. ಅವರು ಆಯೋಜಿಸಿದ್ದ ಔತಣಕೂಟದ ಸಂದರ್ಭದಲ್ಲಿ ಎಂಜಿಆರ್ ನಟನೆಯ 'ನಾಳೈ ನಮಧೆ' ಚಿತ್ರದ ಹಾಡನ್ನು ಪ್ರಸ್ತುತಪಡಿಸಲಾಯಿತು' ಎಂದು ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಿವೃತ್ತ ಯೋಧರ ಭೇಟಿ ಮಾಡಿದ ಪ್ರಧಾನಿ

ಕ್ವಾಲಾಲಂಪುರದಲ್ಲಿ ಭಾರತೀಯ ರಾಷ್ಟ್ರೀಯ ಸೇನೆಯ (ಆಜಾದ್ ಹಿಂದ್ ಫೌಜ್) ನಿವೃತ್ತ ಯೋಧ ಜಯರಾಜ್ ರಾಜಾ ರಾವ್ ಅವರನ್ನು ಪ್ರಧಾನಿ ಮೋದಿ ಭೇಟಿ ಮಾಡಿದರು.

'ನೇತಾಜಿ ಸುಭಾಷ್ ಚಂದ್ರ ಬೋಸ್ ಮತ್ತು ಐಎನ್‌ಎಯ ಧೈರ್ಯಶಾಲಿ ಯೋಧರಿಗೆ ನಾವು ಎಂದೆಂದಿಗೂ ಋಣಿಯಾಗಿರುತ್ತೇವೆ. ಅವರ ಶೌರ್ಯವು ಭಾರತದ ಭವಿಷ್ಯವನ್ನು ರೂಪಿಸಲು ಸಹಾಯ ಮಾಡಿತ್ತು' ಎಂದು ಮೋದಿ ಅವರು ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

1943ರ ಸೆಪ್ಟೆಂಬರ್‌ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಕ್ವಾಲಾಲಂಪುರದ ಸೆಲಂಗೋರ್ ಪಾದಂಗ್‌ನಲ್ಲಿ (ಈಗಿನ ಸ್ವಾತಂತ್ರ್ಯ ಚೌಕ) ಸಾವಿರಾರು ಅನುಯಾಯಿಗಳನ್ನು ಉದ್ದೇಶಿಸಿ ಪ್ರೇರಣಾದಾಯಕ ಭಾಷಣ ಮಾಡಿದ್ದರು. ಇದು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಹಲವಾರು ಯುವಕರನ್ನು ಪ್ರೇರೇಪಿಸಿತ್ತು.

‘ಫೆಬ್ರವರಿ 30’ ಎಂದ ಹೊಸಬರು



ಸಾಹಿತ್ಯ, ಅಭಿಷೇಕ್ ಶ್ರೀಕಾಂತ್

ಬಿಗ್‌ಬಾಸ್ ಖ್ಯಾತಿಯ ಅಭಿಷೇಕ್ ಶ್ರೀಕಾಂತ್ ನಾಯಕನಾಗಿ ನಟಿಸಿರುವ ‘ಫೆಬ್ರವರಿ 30’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸೈಕಲಾಜಿಕಲ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಪ್ರಶಾಂತ್ ಎಂ.ಎಲ್. ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಈ ಹಿಂದೆ ಕೆಲ ಕಿರುಚಿತ್ರಗಳನ್ನು ಮಾಡಿದ್ದೆ. ನಿರ್ದೇಶಕನಾಗಿ ಮೊದಲ ಸಿನಿಮಾ. ಈ ಸಿನಿಮಾವನ್ನು ಮೊದಲು ಕಿರುಚಿತ್ರವೆಂದು ಶುರು ಮಾಡಿದ್ದು. ಬರೆಯುತ್ತ ಹೋದಂತೆ ಸಿನಿಮಾಕ್ಕೆ ಈ ಕಥೆ ಸೂಕ್ತ ಎನ್ನಿಸಿತು. ಕ್ಯಾಲೆಂಡರ್‌ನಲ್ಲಿ ಇಲ್ಲದ ಫೆ.30 ದಿನಾಂಕವನ್ನು ಯಾಕೆ ಸಿನಿಮಾದ ಶೀರ್ಷಿಕೆ ಮಾಡಿದ್ದೇವೆ ಎಂಬುದು ಚಿತ್ರ ನೋಡಿದ ನಂತರ ತಿಳಿಯುತ್ತದೆ’ ಎಂದರು ನಿರ್ದೇಶಕ.

ಈ ಚಿತ್ರಕ್ಕೆ ಶಂಕರ ಮೂವೀಸ್ ಮೂಲಕ ಜೋಸೆಫ್ ಬೇಬಿ ಅವರು ಬಂಡವಾಳ ಹೂಡಿದ್ದಾರೆ. ಸಾಹಿತ್ಯ ಶೆಟ್ಟಿ, ಅಕ್ಷಯ್, ಮನೋಜ್, ಶಿವಕುಮಾರ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಪಿ.ಎಂ.ಉನ್ನಿಕೃಷ್ಣನ್ ಛಾಯಾಚಿತ್ರಗ್ರಹಣ, ಲಿಜಿನ್ ಪಂಬೋ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.



ಸಂಗೀತ

ಸ್ಯಾಂಡಲ್‌ವುಡ್‌ಗೆ ಮರಳಿದ ಸಂಗೀತ

‘ಯಾರೇ ನೀನು ಚೆಲುವೆ’ ಸಿನಿಮಾ ಖ್ಯಾತಿಯ ನಟಿ ಸಂಗೀತ ಮಾಧವನ್ ಹಲವು ವರ್ಷಗಳ ಬಳಿಕ ಕನ್ನಡ ಚಿತ್ರರಂಗಕ್ಕೆ ಮರಳಿದ್ದಾರೆ. ಕಿರಣ್ ವಿಶ್ವನಾಥ್ ನಿರ್ದೇಶನದ ಇನ್ನೂ ಹೆಸರಿಡದ ಚಿತ್ರದಲ್ಲಿ ಅವರು ನಟಿಸುತ್ತಿದ್ದಾರೆ.

‘ಸಂಗೀತ ಅವರು ಭಾಗ್ಯ ಎಂಬ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಾಯಕಿ ತಾಯಿಯ ಪಾತ್ರ. ಮಹಾನಟಿ ಖ್ಯಾತಿಯ ಪ್ರಿಯಾಂಕಾ ಆಚಾರ್ ಚಿತ್ರದ ನಾಯಕಿ. ಉಳಿದ ಮಾಹಿತಿಯನ್ನು ಹಂತಹಂತವಾಗಿ ನೀಡಲಾಗುವುದು. ನಾಯಕ ಯಾರು ಎಂಬುದನ್ನು ಸದ್ಯಕ್ಕೆ ಗೌಪ್ಯವಾಗಿಟ್ಟಿದ್ದೇವೆ. ಅದ್ದೂರಿ ಸಮಾರಂಭದಲ್ಲಿ ನಾಯಕನ ಹೆಸರು ಘೋಷಣೆಯಾಗಲಿದೆ’ ಎಂದಿದೆ ಚಿತ್ರತಂಡ.

‘ಹಲವು ವರ್ಷಗಳ ಬಳಿಕ ಕನ್ನಡ ಸಿನಿಮಾದಲ್ಲಿ ನಟಿಸುತ್ತಿರುವುದಕ್ಕೆ ಖುಷಿಯಾಗಿದೆ. ಈ ಸಿನಿಮಾ ನಿರ್ಮಾಣ ಮಾಡುತ್ತಿರುವ ಗೌರಿ ಆರ್ಟ್ಸ್ ಬ್ಯಾನರ್ ಸಮರ್ಥ ನಿರ್ಮಾಣ ಸಂಸ್ಥೆ ಎನಿಸಿತು. ಕಥೆ ಹಾಗೂ ನಿರ್ಮಾಣ ಸಂಸ್ಥೆ ಎರಡೂ ನನಗೆ ಇಷ್ಟವಾಯ್ತು. ಯಾವಾಗಲೂ ಸಕಾರಾತ್ಮಕವಾಗಿರುವ ತಾಯಿಯ ಪಾತ್ರ ನನ್ನದು’ ಎಂದಿದ್ದಾರೆ ಸಂಗೀತ.

ಸ್ಟಾರ್ ಟ್ರೇಲರ್ ಬಿಡುಗಡೆ



ರಜತ ರಕ್ಷಾ

ಬಹುತೇಕ ಹೊಸಬರೇ ಇರುವ ‘ಸ್ಟಾರ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿಜಯ ಸೂರ್ಯ ಕಥೆ ಬರೆದು, ನಿರ್ದೇಶನ ಮಾಡಿದ್ದಾರೆ.

‘ಎರಡು ಗ್ಯಾಂಗ್‌ಗಳ ನಡುವಿನ ಹೊಡೆದಾಟದ ಕಥೆಯಿದೆ. ಇಲ್ಲಿನ ಪ್ರತಿ ಸನ್ನಿವೇಶಗಳನ್ನು ನೋಡುವಾಗ ನಮ್ಮ ಊರುಗಳಲ್ಲಿ ನಡೆದಂಥ ಘಟನೆಗಳು ನೆನಪಾಗುತ್ತವೆ. ಅಷ್ಟು ಸಹಜವಾದ ಸನ್ನಿವೇಶಗಳನ್ನು ಚಿತ್ರಕಥೆಯಲ್ಲಿ ಹೆಣೆಯಲಾಗಿದೆ. ನಾಯಕನಿಗೆ ಸ್ಟಾರ್ ಎಂದು ಹೆಸರು ಬರಲು ಕಾರಣವೇನು? ಎಂಬುದು ಸಿನಿಮಾ ನೋಡಿದಾಗ ತಿಳಿಯುತ್ತದೆ. ಬೆಂಗಳೂರಿನ ಕೆಲ ಕೊಳಗೇರಿ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಿದ್ದೇವೆ’ ಎಂದರು ನಿರ್ದೇಶಕ.

ಲಯನ್ ಕ್ರಿಯೇಶನ್ಸ್ ಬ್ಯಾನರ್ ಅಡಿಯಲ್ಲಿ ಶರತ್ ಪ್ರಕಾಶ್ ನಿರ್ಮಾಣ ಮಾಡುವುದರ ಜತೆಗೆ ನಾಯಕನಾಗಿ ನಟಿಸಿದ್ದಾರೆ. ‘ಭೂಮಿಗೆ ಹತ್ರ’ ಎಂಬ ಅಡಿಬರಹ ಚಿತ್ರಕ್ಕಿದೆ. ರಜತ ರಕ್ಷಾ ನಾಯಕಿ. ಹಲವು ರಂಗಭೂಮಿ ಕಲಾವಿದರು ಅಭಿನಯಿಸಿದ್ದಾರೆ. ಮೂರು ಹಾಡುಗಳಿಗೆ ವಿಕಾಸ್ ವಸಿಷ್ಠ ಸಂಗೀತ ಸಂಯೋಜಿಸಿದ್ದಾರೆ. ಎ.ಪಿ.ಎಸ್.ಕೆ ಛಾಯಾಚಿತ್ರಗ್ರಹಣ, ಶಶಿಧರ್ ಪಿ. ಸಂಕಲನವಿದೆ.

‘ಗೌರವ್ ಗೊಗೊಯ್, ಪತ್ನಿಗೆ ಪಾಕ್ ನಂಟು’

ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಗಂಭೀರ ಆರೋಪ

ಗುವಾಹಟಿ(ಪಿಟಿಐ): ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ , ಅವರ ಪತ್ನಿ ಎಲಿಜಬೆತ್ ಕೋಲ್ಬರ್ನ್ ಮತ್ತು ಪಾಕಿಸ್ತಾನದ ಪ್ರಜೆ ಅಲಿ ತೌಖೀರ್ ಶೇಖ್‌ರೊಂದಿಗೆ ನಿಕಟ ಸಂಪರ್ಕ ಇದೆ ಮತ್ತು ಗುಪ್ತಚರ ಇಲಾಖೆಯಿಂದ ಮಾಹಿತಿಯನ್ನು ರಹಸ್ಯವಾಗಿ ನೆರೆಯ ರಾಷ್ಟ್ರಕ್ಕೆ ರವಾನಿಸಿದ್ದಾರೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶರ್ಮಾ, ‘ಎಲಿಜಬೆತ್, ಪಾಕಿಸ್ತಾನದಲ್ಲಿನ ಅಲಿ ತೌಖೀರ್ ಶೇಖ್ ಅವರ ಸಂಘಟನೆ ಲೀಡ್ ಪಾಕಿಸ್ತಾನದೊಂದಿಗೆ ಕೆಲಸ ಮಾಡುತ್ತಿದ್ದರು. ನಂತರ ಅವರನ್ನು ಭಾರತಕ್ಕೆ ವರ್ಗಾಯಿಸಲಾಯಿತು. ಮುಂದೆ ಅವರು ಅದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಆದರೆ, ಅವರಿಗೆ ವೇತನವನ್ನು ಅಲಿ ತೌಖೀರ್ ಶೇಖ್ ಪಾವತಿಸುತ್ತಿದ್ದರು. ಎಲಿಜಬೆತ್‌ಗೆ ವೇತನ ನೀಡಲು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ನಿಯಮಗಳನ್ನು ಉಲ್ಲಂಘಿಸಲಾಗಿದೆ’ ಎಂದು ಆರೋಪಿಸಿದರು.



ಹಿಮಂತ್ ಬಿಸ್ವ ಶರ್ಮಾ

‘ಲೀಡ್ ಪಾಕಿಸ್ತಾನ್ ಸಂಘಟನೆ, ಹಣವನ್ನು ಲೀಡ್ ಇಂಡಿಯಾ ಸಂಸ್ಥೆಗೆ ಕಳಿಸುತ್ತಿತ್ತು. ಈ ಸಂಸ್ಥೆ, ಎಫ್‌ಸಿಆರ್‌ಎ ನಿಯಮಗಳನ್ನು ಉಲ್ಲಂಘಿಸಿ ಎಲಿಜಬೆತ್‌ಗೆ ಹಣವನ್ನು ನೀಡುತ್ತಿತ್ತು ಎಂದು ಆರೋಪಿಸಿದ ಶರ್ಮಾ, ‘ಪಾಕಿಸ್ತಾನ ಶತ್ರು ರಾಷ್ಟ್ರವಾಗಿರುವುದರಿಂದ ಅಲ್ಲಿನ ಸಂಸ್ಥೆಗಳು ಭಾರತದ ಸಂಸ್ಥೆಗಳಿಗೆ ದೇಣಿಗೆ ನೀಡಲು ಸಾಧ್ಯವಿಲ್ಲ. ಬಹುಶಃ ಯುಪಿಎ ಸರ್ಕಾರದ ಅವಧಿಯಲ್ಲಿ ಎಲಿಜಬೆತ್ ಅವರಿಗೆ ಹಣ ನೀಡಲು ವಿಶೇಷ ಅನುಮತಿ ಪಡೆದಿರಬಹುದು’ ಎಂದು ಅವರು ವ್ಯಂಗ್ಯವಾಡಿದರು.

‘ಲೀಡ್ ಇಂಡಿಯಾದೊಂದಿಗೆ ಕೆಲಸ ಮಾಡುವಾಗ ಕೋಲ್ಬರ್ನ್ ಆರು ಬಾರಿ ಇಸ್ಲಾಮಾಬಾದ್‌ಗೆ ಪ್ರಯಾಣಿಸಿದ್ದಾರೆ. ಇನ್ನೊಂದು ಎನ್‌ಜಿಒಗೆ ಸೇರಿದ ನಂತರ ಮೂರು ಬಾರಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದರು. ಎಲಿಜಬೆತ್ ಪಾಕಿಸ್ತಾನಕ್ಕೆ ಅಟ್ಟಾರಿ ಗಡಿಯ ಮೂಲಕ ಮಾತ್ರ ಭೇಟಿ ನೀಡುತ್ತಿದ್ದರು, ಎಂದಿಗೂ ವಿಮಾನದಲ್ಲಿ ಹೋಗುತ್ತಿರಲಿಲ್ಲ’ ಎಂದು ಹೇಳಿದರು.

‘ಭಾರತದಲ್ಲಿ ಕಾರ್ಯನಿರ್ವಹಿಸಿದ ನಂತರ ಕೋಲ್ಬರ್ನ್ ಅವರು ಭಾರತದೊಳಗಿನ ಮಾಹಿತಿಯನ್ನು ಸಂಗ್ರಹಿಸಲಾರಂಭಿಸಿದ್ದರು. ಕೇಂದ್ರದಲ್ಲಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ನಂತರ ಹವಾಮಾನ ಬದಲಾವಣೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವ ಕುರಿತು ಎಲಿಜಬೆತ್ ಅವರು ಗುಪ್ತಚರ ವಿಭಾಗದ ಮೂಲಗಳಿಂದ ಮಾಹಿತಿ ಸಂಗ್ರಹಿಸಿ, ಶೇಖ್ ಅವರಿಗೆ 45 ಪುಟಗಳ ವರದಿಯನ್ನು ಕಳುಹಿಸಿದ್ದರು’ ಎಂದು ಅವರು ವಿವರಿಸಿದರು.

‘ಗೌರವ್, 2013ರಲ್ಲಿ ಗೋಪ್ಯವಾಗಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದರು. ಅಲ್ಲಿ ಒಂದು ರೀತಿಯ ತರಬೇತಿ ಪಡೆದಿದ್ದಾರೆ. ಗೌರವ್, ಎಲಿಜಬೆತ್ ಕೋಲ್ಬರ್ನ್ ಮತ್ತು ಅಲಿ ತೌಖೀರ್ ಶೇಖ್ ನಡುವೆ ನಿಕಟ ಸಂಪರ್ಕವಿದೆ. ಎಲಿಜಬೆತ್ ಮತ್ತು ಶೇಖ್ ಅವರು ಅಂತರರಾಷ್ಟ್ರೀಯ ಸಂಚಿನ ಭಾಗವಾಗಿರಬಹುದು’ ಎಂದು ಶರ್ಮಾ ದೂರಿದರು

‘ಭಾರತ ಸರ್ಕಾರದ ಅನುಮತಿ ಇಲ್ಲದೇ, ಸ್ಥಳೀಯ ಸಂಸ್ಥೆಗಳೊಂದಿಗೆ(ಮುನ್ಸಿಪಲ್ ಏಜೆನ್ಸಿ) ಕೆಲಸ ಮಾಡಿದ್ದಾರೆ. ಇದನ್ನು ಅಸ್ಸಾಂ ಪೊಲೀಸರು ತನಿಖೆ ನಡೆಸಲು ಸಾಧ್ಯವಿಲ್ಲ. ಹಾಗಾಗಿ ರಾಷ್ಟ್ರೀಯ ಸಂಸ್ಥೆಗಳಿಂದ ತನಿಖೆ ನಡೆಸುವಂತೆ ಕೇಂದ್ರ ಗೃಹ ಸಚಿವಾಲಯಕ್ಕೆ ಶಿಫಾರಸು ಮಾಡಿದ್ದೇನೆ’ ಎಂದು ಶರ್ಮಾ ತಿಳಿಸಿದರು.

ಸಿ–ಗ್ರೇಡ್ ಸಿನಿಮಾಕ್ಕಿಂತ ಕಳಪೆ: ಗೌರವ್ ಗೊಗೊಯ್

‘ಪಾಕಿಸ್ತಾನಿ ಪ್ರಜೆಯೊಂದಿಗೆ ತಮಗೆ ನಂಟಿರುವುದಾಗಿ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಅವರು ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್, ‘ಇದು ಬುದ್ಧಿ ಇಲ್ಲದವರ ಬೋಗಸ್ ಆರೋಪ’ ಎಂದಿದ್ದಾರೆ.



ಗೌರವ್ ಗೊಗೊಯ್

‘ಮುಖ್ಯಮಂತ್ರಿಯವರ ಸುದ್ದಿಗೋಷ್ಠಿ ಸಿ–ಗ್ರೇಡ್ ಸಿನಿಮಾಕ್ಕಿಂತಲೂ ಕಳಪೆಯಾಗಿದೆ. ಇದೊಂದು ಸೂಪರ್ ಫ್ಲಾಪ್ ಪ್ರಯತ್ನ’ ಎಂದು ಗೌರವ್ ಗೊಗೊಯ್ ಅವರು ‘ಎಕ್ಸ್’ನಲ್ಲಿ ದೂರಿದ್ದಾರೆ.

‘ಶತಮಾನದಲ್ಲೇ ಅತ್ಯಂತ ವಿಫಲವಾದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ ದೆಹಲಿ ಮತ್ತು ಅಸ್ಸಾಂನ ಪತ್ರಕರ್ತರ ಬಗ್ಗೆ ನನಗೆ ವಿಷಾದವಿದೆ. ರಾಜಕೀಯ ಚಾಣಾಕ್ಷ ಮುಖ್ಯಮಂತ್ರಿ ಎಂದು ಕರೆಸಿಕೊಳ್ಳುವವರು, ಅತ್ಯಂತ ಬುದ್ಧಿಹೀನ ಮತ್ತು ನಕಲಿ ಅಂಶಗಳನ್ನು ನೀಡಿದ್ದಾರೆ’ ಎಂದು ಅವರು ಹೇಳಿದ್ದಾರೆ.

ಶರ್ಮಾ ಅವರು ಪತ್ರಿಕಾಗೋಷ್ಠಿ ನಡೆಸುತ್ತಿದ್ದಾಗಲೇ ‘ಎಕ್ಸ್’ ಮೂಲಕ ಸಂದೇಶ ನೀಡಿದ ಗೌರವ್ ಗೊಗೊಯ್, ‘ಇದು ಶತಮಾನದ ವಿಫಲ ಪ್ರಹಸನ’ ಎಂದು ಅವರು ಟೀಕಿಸಿದ್ದಾರೆ.



ಅವಘಡ ನಡೆದ ಸ್ಥಳದಲ್ಲಿ ಪೊಲೀಸರು ಪರಿಶೀಲನೆ ನಡೆಸಿದರು – ಪಿಟಿಐ ಚಿತ್ರ

ಸೂರಜ್‌ಕುಂಡ್: ‘ಜೈಂಟ್ ಸ್ವಿಂಗ್’ ಬಿದ್ದು ಇನ್‌ಸ್ಪೆಕ್ಟರ್ ಸಾವು, ಇಬ್ಬರ ಸೆರೆ

ಫರೀದಾಬಾದ್(ಪಿಟಿಐ): ಹರಿಯಾಣದ ಸೂರಜ್‌ಕುಂಡ್‌ನಲ್ಲಿ ನಡೆಯುತ್ತಿದ್ದ ಮೇಳವೊಂದರಲ್ಲಿ ತಿರುಗುವ ಯಾಂತ್ರಿಕ ಉಯ್ಯಾಲೆ(ಜೈಂಟ್ ಸ್ವಿಂಗ್) ಮುರಿದು ಬಿದ್ದು ಪೊಲೀಸ್ ಇನ್‌ಸ್ಪೆಕ್ಟರ್ ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಉಯ್ಯಾಲೆಯನ್ನು ನಿರ್ವಹಿಸುತ್ತಿದ್ದ ಇಬ್ಬರು ಸಿಬ್ಬಂದಿಗಳನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

39ನೇ ಅಂತರರಾಷ್ಟ್ರೀಯ ಕರಕುಶಲ ಮೇಳದಲ್ಲಿ ಶನಿವಾರ ಅವಘಡ ನಡೆದಿದೆ. ಮೇಳಕ್ಕೆ ಬಂದಿದ್ದವರಲ್ಲಿ 19 ಜನರು ಯಾಂತ್ರಿಕ ಉಯ್ಯಾಲೆಯಲ್ಲಿ ಕುಳಿತಿದ್ದರು. ವೇಗವಾಗಿ ಚಲಿಸಿದಾಗ ಒಂದು ಭಾಗ ಮುರಿದು, ಉಯ್ಯಾಲೆ ನೆಲಕ್ಕೆ ಅಪ್ಪಳಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉಯ್ಯಾಲೆ ಅಡಿ ಸಿಲುಕಿದ್ದವರ ರಕ್ಷಣೆ ಮಾಡುತ್ತಿದ್ದ ವೇಳೆ ಉಯ್ಯಾಲೆಯ ಇನ್ನೊಂದು ಭಾಗವೂ ಮುರಿದು ಸಂಪೂರ್ಣ ನೆಲಕ್ಕೆ ಬಿದ್ದಿದೆ. ಹಲವರಿಗೆ ಗಾಯಗಳಾಗಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಇನ್‌ಸ್ಪೆಕ್ಟರ್ ಜಗದೀಶ್ ಪ್ರಸಾದ್ ಮೃತಪಟ್ಟಿದ್ದಾರೆ.

ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಹರಿಯಾಣ ಸರ್ಕಾರ ಆದೇಶಿಸಿದೆ. ಯಾಂತ್ರಿಕ ಉಯ್ಯಾಲೆಯ ನಿರ್ವಾಹಕ ಮತ್ತು ಇನ್ನೊಬ್ಬ ಸಿಬ್ಬಂದಿಯ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರೋತ್ಸಾಹ ಧನಕ್ಕೆ ತಡೆ: ಪಿಣರಾಯಿ ಕಿಡಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಾಜ್ಯದ ಭತ್ತ ಬೆಳೆಗಾರರಿಗೆ ಹೆಚ್ಚುವರಿಯಾಗಿ ಪ್ರೋತ್ಸಾಹಧನ ನೀಡುವುದನ್ನು ನಿಲ್ಲಿಸುವಂತೆ ನಿರ್ದೇಶನ ನೀಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾನುವಾರ ಖಂಡಿಸಿದ್ದಾರೆ.



ಪಿಣರಾಯಿ ವಿಜಯನ್

‘ಅಮೆರಿಕದ ಕೃಷಿ ಉತ್ಪನ್ನಗಳಿಗೆ ದೇಶೀಯ ಮಾರುಕಟ್ಟೆಯನ್ನು ಮುಕ್ತಗೊಳಿಸುವ ಭಾಗವಾಗಿ ಈ ನಿರ್ದೇಶನ ನೀಡಲಾಗಿದೆಯೇ’ ಎಂದು ಅವರು ಇಲ್ಲಿ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

‘ಕೇಂದ್ರದ ಈ ನಿರ್ದೇಶನ ರೈತ ವಿರೋಧಿ. ಉದ್ಯಮಿಗಳು ಬಾಕಿ ಉಳಿಸಿಕೊಂಡಿರುವ ಸಾಲಗಳನ್ನು ರೈಟ್ ಆಫ್ ಮಾಡುವವರಿಗೆ, ರೈತರಿಗೆ ನೀಡುವ ಪ್ರೋತ್ಸಾಹ ಧನ ಹೊರೆಯಾಗಿ ಕಾಣುತ್ತದೆ’ ಎಂದು ಅವರು ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ.

ಅಸ್ಸಾಂ: ಬಿಜೆಪಿ ವಿರುದ್ಧ ವಿರೋಧ ಪಕ್ಷಗಳ ಆಕ್ರೋಶ

‘ನರಮೇಧಕ್ಕೆ ಕರೆ ನೀಡುವ ಪೋಸ್ಟ್’

ನವದೆಹಲಿ: ಮುಸ್ಲಿಮರ ವಿರುದ್ಧದ ದ್ವೇಷ ಬಿಂಬಿಸುವ ವಿಡಿಯೊ ಅನ್ನು ಅಸ್ಸಾಂ ಬಿಜೆಪಿ ಘಟಕ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವುದಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ವಿರೋಧ ಪಕ್ಷಗಳ ನಾಯಕರ ಟೀಕೆ ಬಳಿಕ, ‘ಎಕ್ಸ್’ನಿಂದ ವಿಡಿಯೊ ಅನ್ನು ಬಿಜೆಪಿ ತೆಗೆದು ಹಾಕಿತು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಅವರು ಅಲ್ಪಸಂಖ್ಯಾತ ಸಮುದಾಯದವರನ್ನು ಬಿಂಬಿಸುವ ಇಬ್ಬರು ವ್ಯಕ್ತಿಗಳ ಮೇಲೆ ಸಾಂಕೇತಿಕವಾಗಿ ಗುಂಡು ಹಾರಿಸುತ್ತಿರುವ ವಿಡಿಯೊಕ್ಕೆ ಕಾಂಗ್ರೆಸ್, ಟಿಎಂಸಿ ಸೇರಿದಂತೆ ವಿವಿಧ ವಿಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

‘ಈ ವಿಡಿಯೊ ನರಮೇಧಕ್ಕೆ ಕರೆ ನೀಡುವುದಲ್ಲದೆ ಬೇರೇನೂ ಅಲ್ಲ. ಇದು ಮುಸ್ಲಿಮರ ವಿರುದ್ಧದ ದ್ವೇಷ ಅಭಿಯಾನವಾಗಿದೆ’ ಈ ಕೃತ್ಯದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿವೆ.

ಹಿಮಂತ ಬಿಸ್ವ ಶರ್ಮಾ ರೈಫಲ್ ಹಿಡಿದು ಅಲ್ಪಸಂಖ್ಯಾತ ಸಮುದಾಯದ ಇಬ್ಬರು ವ್ಯಕ್ತಿಗಳ ಮೇಲೆ ಸಾಂಕೇತಿಕವಾಗಿ ಗುಂಡು ಹಾರಿಸುತ್ತಿರುವ ದೃಶ್ಯವನ್ನು ‘ಪಾಯಿಂಟ್-ಬ್ಲಾಂಕ್ ಶಾಟ್’ ಎಂಬ ಶೀರ್ಷಿಕೆಯೊಂದಿಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಲಾಗಿತ್ತು. ಈ ವಿಡಿಯೊ ಕುರಿತು ಆಕ್ರೋಶ ಭುಗಿಲೆದ್ದಿತ್ತು.

‘ಇದು ತೀವ್ರ ಅಸಹ್ಯಕರ ಹಾಗೂ ಮನಸ್ಸನ್ನು ಕದಲುವಂತಹದ್ದು. ಇದನ್ನು ಯಾವುದೋ ಟ್ರೋಲ್ ವಿಷಯವೆಂದು ನಿರ್ಲಕ್ಷಿಸುವಂತಿಲ್ಲ. ಇದು ಈ ಫ್ಯಾಸಿಸ್ಟ್ ಆಡಳಿತದ ನೈಜ ಮುಖದ ಪ್ರತಿಬಿಂಬ’ ಎಂದು ಕಾಂಗ್ರೆಸ್ ತನ್ನ ‘ಎಕ್ಸ್’ ಖಾತೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದೆ.

‘ಈ ಪ್ರಕರಣದಲ್ಲಿ ಯಾವುದೇ ಔದಾರ್ಯ ತೋರಿಸಬಾರದು’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಆಗ್ರಹಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಇದನ್ನು ಖಂಡಿಸುತ್ತಾರೆ ಅಥವಾ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆ ಎಂಬ ಯಾವುದೇ ಭರವಸೆ ಇಲ್ಲ, ನ್ಯಾಯಾಂಗವು, ಈ ಕೃತ್ಯದ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ‘ಇದು ಸಾಮಾನ್ಯ ಟ್ರೋಲ್ ವಿಷಯವಾಗಿ ನಿರ್ಲಕ್ಷಿಸುವ ವಿಡಿಯೊವಲ್ಲ’ ಎಂದಿದ್ದಾರೆ.

ಟಿಎಂಸಿ ರಾಜ್ಯಸಭಾ ಸದಸ್ಯೆ ಸಾಗರಿಕಾ ಘೋಷ್, ‘ಅಸ್ಸಾಂ ಬಿಜೆಪಿ ಘಟಕ ಯುಎಪಿಎ ಅಪರಾಧ ಎಸಗಿದೆ ವಿಡಿಯೊ ಅಳಿಸುವ ಮೂಲಕ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವರಿಗೆ ಶಿಕ್ಷೆ ನೀಡಬೇಕು’ ಎಂದು ಅವರು ‘ಎಕ್ಸ್’ನಲ್ಲಿ ಆಗ್ರಹಿಸಿದ್ದಾರೆ.

ಶಿವಸೇನಾ (ಯುಬಿಟಿ) ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿ, ‘ಬಿಜೆಪಿಯ ‘ಪಾಯಿಂಟ್ ಬ್ಲಾಂಕ್ ಶಾಟ್’ ಪೋಸ್ಟ್ ಅತ್ಯಂತ ದ್ವೇಷಪೂರಿತ ವಿಡಿಯೊವಾಗಿದೆ’ ಎಂದು ದೂರಿದ್ದಾರೆ.

‘ಮುಂದೆ ಅಸ್ಸಾಂನಲ್ಲಿ ದುರಂತ ಸಂಭವಿಸುವ ಮೊದಲು ಮುಖ್ಯಮಂತ್ರಿ ಶರ್ಮಾ ಅವರನ್ನು ಜೈಲಿಗೆ ಹಾಕಬೇಕು’ ಎಂದು ಸಿಪಿಎಂ ಒತ್ತಾಯಿಸಿದೆ.

‘ಕೋಮು ಸಾಮರಸ್ಯವನ್ನು ಕೆಡಿಸಿದ್ದಕ್ಕಾಗಿ, ಸಮುದಾಯಗಳ ನಡುವೆ ದ್ವೇಷ ಸೃಷ್ಟಿಸಿದ್ದಕ್ಕಾಗಿ ಮತ್ತು ಸಾರ್ವಜನಿಕವಾಗಿ ಹಿಂಸಾಚಾರಕ್ಕೆ ಕರೆ ನೀಡಿದ್ದಕ್ಕಾಗಿ ಶರ್ಮ ಮತ್ತು ಅವರ ಗುಂಪಿನ ವಿರುದ್ಧ ಸುಪ್ರೀಂ ಕೋರ್ಟ್ ತಕ್ಷಣವೇ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಸಿಪಿಎಂ ಮುಖಂಡರು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಒತ್ತಾಯಿಸಿದ್ದಾರೆ.

ಡಚ್ ವಿರುದ್ಧ ಭಾರತಕ್ಕೆ ಜಯ

ಡೇವಿಸ್ ಕಪ್ ಕ್ವಾಲಿಫೈಯರ್ಸ್: 2–3ರಿಂದ ಸೋತ ನೆದರ್ಲೆಂಡ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ರಿವರ್ಸ್ ಸಿಂಗಲ್ಸ್‌ವರೆಗೆ ಸಾಗಿದ ಭಾರತ ಮತ್ತು ನೆದರ್ಲೆಂಡ್ಸ್ ನಡುವಣ ಡೇವಿಸ್ ಕಪ್ ಕ್ವಾಲಿಫೈಯರ್ಸ್ ಮುಖಾಮುಖಿಯಲ್ಲಿ ಆತಿಥೇಯ ತಂಡ 3-2ರಿಂದ ಅಮೋಘ ಗೆಲುವು ಸಾಧಿಸಿತು. ಅದರೊಂದಿಗೆ, ಎರಡನೇ ಸುತ್ತಿನ ಕ್ವಾಲಿಫೈಯರ್ಸ್‌ಗೆ ಟಿಕೆಟ್ ಗಿಟ್ಟಿಸಿಕೊಂಡಿತು.

ಶನಿವಾರ ನಡೆದ ಸಿಂಗಲ್ಸ್ ಪಂದ್ಯದಲ್ಲಿ ಎದುರಾಳಿ ತಂಡದ ಅಗ್ರ ಆಟಗಾರ ಜೆಸ್ಪರ್ ಡಿ ಜಾಂಗ್ ಅವರನ್ನು ಮಣಿಸಿದ್ದ ದಕ್ಷಿಣೇಶ್ವರ್ ಸುರೇಶ್ ಅವರು ಡಬಲ್ಸ್‌ನಲ್ಲಿ ಯುಕಿ ಭಾಂಬ್ರಿ ಜೊತೆಗೂಡಿ 7-6 (7-0), 3-6, 7-6 (7-1)ರಿಂದ ಡೇವಿಡ್ ಪೆಲ್- ಸ್ಯಾಂಡರ್ ಅರೆಂಡ್ಸ್ ಜೋಡಿಯನ್ನು ಸೋಲಿಸಿದರು. ನಿರ್ಣಾಯಕವಾಗಿದ್ದ ರಿವರ್ಸ್ ಸಿಂಗಲ್ಸ್‌ನ ಎರಡನೇ ಪಂದ್ಯದಲ್ಲಿ 6-4, 7-6 (7-4)ರಿಂದ ಗಯ್ ಡೆನ್ ಆಡೆನ್ ವಿರುದ್ಧ ಗೆದ್ದು, ಛಾಪು ಮೂಡಿಸಿದರು.

ಶನಿವಾರ ತಲಾ ಒಂದು ಪಂದ್ಯ ಗೆದ್ದಿದ್ದ ಉಭಯ ತಂಡಗಳು, ಭಾನುವಾರವೂ ತುರುಸಿನ ಪೈಪೋಟಿವೊಡ್ಡಿದವು. ಭಾನುವಾರ ಮಧ್ಯಾಹ್ನ ಭಾಂಬ್ರಿ– ದಕ್ಷಿಣ್ ಜೋಡಿ ಡಬಲ್ಸ್ ಗೆದ್ದು ಭಾರತಕ್ಕೆ 2-1 ಮುನ್ನಡೆ ಒದಗಿಸಿತು. ಶ್ರೀರಾಮ್ ಬಾಲಾಜಿ ಅವರ ಬದಲು ಒಳ್ಳೆಯ ಲಯದಲ್ಲಿರುವ ದಕ್ಷಿಣೇಶ್ವರ್ ಅವರನ್ನು ಯುಕಿ ಜೊತೆ ಆಡಲು ಇಳಿಸುವ ನಾಯಕ ರೋಹಿತ್ ರಾಜಪಾಲ್ ಅವರ ಲೆಕ್ಕಾಚಾರ ಫಲ ನೀಡಿತು.

ಆದರೆ, ರಿವರ್ಸ್ ಸಿಂಗಲ್ಸ್‌ನಲ್ಲಿ ಸುಮಿತ್ ನಾಗಲ್ ಸೋಲನು ಭವಿಸಿದರು. ವಿಶ್ವ ಕ್ರಮಾಂಕದಲ್ಲಿ 88ನೇ ಸ್ಥಾನದಲ್ಲಿರುವ ಜೆಸ್ಪರ್ ಡಿ ಜಾಂಗ್ ಮೊದಲ ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡು 5-7, 6-1, 6-4ರಿಂದ ನಾಗಲ್ ಅವರನ್ನು ಹಿಮ್ಮೆಟ್ಟಿಸಿದರು.



ದಕ್ಷಿಣೇಶ್ವರ ಸುರೇಶ್ ಅವರನ್ನು ಹೆಗಲ ಮೇಲೆ ಹೊತ್ತು ಸಂಭ್ರಮಿಸಿದ ಭಾರತ ತಂಡದ ಆಟಗಾರರು

ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಕ್ರೀಡಾಂಗಣದಲ್ಲಿ ಹೊನಲು ಬೆಳಕಿನಲ್ಲಿ ನಡೆದ ಎರಡನೇ ರಿವರ್ಸ್ ಸಿಂಗಲ್ಸ್ ಪಂದ್ಯದಲ್ಲಿ ಆಡೆನ್ ಅವರನ್ನು ಮಣಿಸಿದ ದಕ್ಷಿಣ್, ಭಾರತದ ಗೆಲುವಿನ ರೂವಾರಿಯಾದರು. 1 ಗಂಟೆ 39 ನಿಮಿಷ ನಡೆದ ಈ ಪಂದ್ಯವು ಪ್ರೇಕ್ಷಕರಿಗೆ ರಸದೌತಣ ಉಣಬಡಿಸಿತು. ಉದ್ಯಾನ ನಗರವು ‘ಟೆನಿಸ್ ಮಳೆ’ಯಲ್ಲಿ ಮಿಂದೆದ್ದಿತು.

ಬಾಕ್ಸಿಂಗ್: 9 ಚಿನ್ನ ಬಾಚಿದ ಭಾರತ

ಲಾ ನುಸಿಯಾ (ಸ್ಪೇನ್), (ಪಿಟಿಐ): ಒಲಿಂಪಿಕ್ ಪದಕ ವಿಜೇತೆ ಲವ್ಲಿನಾ ಬೋರ್ಗೊಹೈನ್ ಮತ್ತು ಮಾಜಿ ಯುವ ವಿಶ್ವ ಚಾಂಪಿಯನ್ ಅರುಂಧತಿ ಚೌಧರಿ ಅವರ ನೇತೃತ್ವದಲ್ಲಿ ಭಾರತದ ಬಾಕ್ಸರ್‌ಗಳು ಬಾಕ್ಸಾಮ್ ಎಲೈಟ್ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಒಂಬತ್ತು ಚಿನ್ನದ ಪದಕಗಳನ್ನು ಗೆದ್ದುಕೊಂಡರು.

ಮಹಿಳಾ ವಿಭಾಗದ ಏಳು ಫೈನಲ್‌ಗಳಲ್ಲಿ ಭಾರತದ ಸ್ಪರ್ಧಿಗಳು ಫೈನಲ್ ತಲುಪಿದ್ದರು. ಭಾರತ ಒಟ್ಟು 9 ಚಿನ್ನ, ಮೂರು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನು ಗೆದ್ದು ಟೂರ್ನಿಯ ಅತಿ ಯಶಸ್ವಿ ತಂಡ ಎನಿಸಿತು.

ಮಂಜು ರಾಣಿ (48 ಕೆ.ಜಿ), ನೀತು (51 ಕೆ.ಜಿ) ಅವರು ಕ್ರಮವಾಗಿ ಸ್ಪೇನ್‌ನ ಮಾರ್ತಾ ಲೋಪೆಝ್ ಮತ್ತು ನೋಲಿಯಾ ಗುಟಿರೆಝ್ ಅವರನ್ನು ಸೋಲಿಸಿ ಚಿನ್ನ ಗೆದ್ದರು. 54 ಕೆ.ಜಿ. ವಿಭಾಗದಲ್ಲಿ ಪೂನಮ್, ಸ್ವದೇಶದ ಪ್ರೀತಿ ಅವರನ್ನು ಸೋಲಿಸಿದರು.

ಪ್ರಿಯಾ (60 ಕೆ.ಜಿ) ಮತ್ತು ಅರುಂಧತಿ (70 ಕೆ.ಜಿ) ಅವರು ಉಕ್ರೇನಿನ ಎದುರಾಳಿಗಳ ವಿರುದ್ಧ 5:0 ಗೆಲುವು ಸಾಧಿಸಿದರು. ಲವ್ಲಿನಾ, ಇಂಗ್ಲೆಂಡ್‌ನ ಮೇರಿ–ಕೇಟ್ ಸ್ಮಿತ್ ಎದುರು 4:1 ಗೆಲುವು ಪಡೆದರು. 80 ಕೆ.ಜಿ. ಫೈನಲ್‌ನಲ್ಲಿ ನೈನಾ ಅವರು ಉಕ್ರೇನಿನ ರೈಸಾ ಪಿಸ್ಕುನ್ ವಿರುದ್ಧ ಗೆದ್ದರು.

ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಮೋಹನ್ ಭಾಗವತ್ ಹೇಳಿಕೆ

‘ಆರ್‌ಎಸ್‌ಎಸ್‌ನಿಂದ ಬಿಜೆಪಿಗೆ ಅಚ್ಛೇ ದಿನ್’

ಪ್ರಜಾವಾಣಿ ವಾರ್ತೆ

ಮುಂಬೈ: ‘ಆರ್‌ಎಸ್‌ಎಸ್‌ನಿಂದಾಗಿಯೇ ಬಿಜೆಪಿಗೆ ಒಳ್ಳೆಯ ದಿನಗಳು (ಅಚ್ಛೇ ದಿನ್) ಬಂದಿವೆ. ಈ ವಿಚಾರದಲ್ಲಿ ಆರ್‌ಎಸ್‌ಎಸ್‌ನ ಪಾತ್ರ ಇದೆ’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.

‘ಬಿಜೆಪಿಯಿಂದಾಗಿ ಆರ್‌ಎಸ್‌ಎಸ್‌ಗೆ ಒಳ್ಳೆಯ ದಿನಗಳು ಬಂದಿಲ್ಲ. ಸ್ವಯಂ ಸೇವಕರ ಪರಿಶ್ರಮ ಹಾಗೂ ಸೈದ್ಧಾಂತಿಕ ಬದ್ಧತೆಯಿಂದಾಗಿ ಸಂಘಕ್ಕೆ ಒಳ್ಳೆಯ ದಿನಗಳು ಬಂದಿವೆ. ನಾವು ರಾಮ ಮಂದಿರ ನಿರ್ಮಾಣಕ್ಕೆ ದೃಢಸಂಕಲ್ಪ ಮಾಡಿದ್ದೆವು. ಇದಕ್ಕೆ ಬೆಂಬಲ ನೀಡಿದವರಿಗೆ ಲಾಭವಾಗಿದೆ’ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ಎರಡು ದಿನಗಳ ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಈ ಕುರಿತ ಪ್ರಶ್ನೆಗೆ ಅವರು ಉತ್ತರಿಸಿದರು.

‘ಅಯೋಧ್ಯೆಯಲ್ಲಿ ಭವ್ಯವಾದ ರಾಮ ಮಂದಿರ ನಿರ್ಮಾಣ, ದೇಶದ ಭದ್ರತೆಯಲ್ಲಿ ಗಮನಾರ್ಹ ಬದಲಾವಣೆ ಸೇರಿ ಹಲವು ವಿಚಾರಗಳಲ್ಲಿ ಬಿಜೆಪಿಯ ಸಾಧನೆ ಗಮನಾರ್ಹ’ ಎಂದು ಅವರು ಹೇಳಿದರು.

‘ವಿಶ್ವ ಹಿಂದೂ ಪರಿಷತ್, ಬಜರಂಗ ದಳ, ಬಿಜೆಪಿ ಸೇರಿದಂತೆ ಸಂಘ ಪರಿವಾರದಡಿ ಅನೇಕ ಸಂಘಟನೆಗಳಿದ್ದು, ಎಲ್ಲವೂ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ. ಈ ಸಂಘಟನೆಗಳಲ್ಲಿ ಸ್ವಯಂ ಸೇವಕರೂ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದರು.

‘ಅಗತ್ಯ ಕಂಡುಬಂದಲ್ಲಿ ಈ ಸಂಘಟನೆಗಳಿಗೆ ನಾವು ಮಾರ್ಗದರ್ಶನ ನೀಡುತ್ತೇವೆ. ಕೆಲವೊಮ್ಮೆ ಎಚ್ಚರಿಕೆ ನೀಡುತ್ತೇವೆ. ಅಂತಿಮ ನಿರ್ಧಾರ ಅವುಗಳದ್ದೇ ಆಗಿರುತ್ತದೆ. ಆದರೆ, ಕೆಲವು ಸಲ ಅವರು ಮಾಡಿದ ತಪ್ಪುಗಳಿಗೆ ನಮ್ಮನ್ನು ದೂಷಿಸಲಾಗುತ್ತದೆ’ ಎಂದೂ ಹೇಳಿದರು.

‘ಅಧ್ಯಾತ್ಮವಿಲ್ಲದ ಧರ್ಮ ಆಕ್ರಮಣಕಾರಿ ಆಗುತ್ತದೆ’

‘ಇಸ್ಲಾಂ ಅನ್ನು ಶಾಂತಿ ಬೋಧಿಸುವ ಧರ್ಮ ಎನ್ನಲಾಗುತ್ತಿದೆ. ಆದರೆ, ಶಾಂತಿ ಕಂಡುಬರುತ್ತಿಲ್ಲ. ಆಧ್ಯಾತ್ಮಿಕತೆ ಇಲ್ಲದ ಧರ್ಮವು ಆಕ್ರಮಣಕಾರಿಯಾಗುತ್ತದೆ ಹಾಗೂ ಪ್ರಾಬಲ್ಯ ಸಾಧಿಸಲು ಮುಂದಾಗುತ್ತದೆ’ ಎಂದು ಮೋಹನ್ ಭಾಗವತ್ ಹೇಳಿದರು.

‘ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳು ಕ್ರಮವಾಗಿ ಏಸು ಕ್ರಿಸ್ತ ಮತ್ತು ಪ್ರವಾದಿ ಮೊಹಮ್ಮದ್ ಅವರು ಬೋಧಿಸಿರುವಂತೆ ಈಗ ಇಲ್ಲ. ನೈಜ ಇಸ್ಲಾಂ ಮತ್ತು ಕ್ರೈಸ್ತ ಧರ್ಮ ಪಾಲನೆ ಅಗತ್ಯ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಸಾಕಷ್ಟು ವಿರೋಧದ ನಡುವೆಯೂ ಸಂಘದ ಸ್ವಯಂ ಸೇವಕರು ಮುಸ್ಲಿಂ ಸಮುದಾಯದೊಂದಿಗೆ ಕೆಲಸ ಮಾಡುತ್ತಿದ್ದಾರಲ್ಲ’ ಎಂಬ ಮತ್ತೊಂದು ಪ್ರಶ್ನೆಗೆ, ‘ಎರಡೂ ಕಡೆಯವರು ವಿರೋಧ ಮಾಡುತ್ತಲೇ ಇದ್ದರೆ ಕೇವಲ ಸಂಘರ್ಷವೇ ಇರುತ್ತದೆ. ನಾವು ಏನನ್ನೂ ಸಾಧಿಸಲು ಸಾಧ್ಯ ಇಲ್ಲ’ ಎಂದು ಅವರು ಪ್ರತಿಕ್ರಿಯಿಸಿದರು.

‘ದೇಶದ ಮುಸ್ಲಿಮರು ಹಾಗೂ ಕ್ರೈಸ್ತರೊಂದಿಗೆ ಸ್ನೇಹ, ಮಾತುಕತೆ ಹಾಗೂ ನಂಬಿಕೆಯ ಅಗತ್ಯವಿದೆ. ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಎಂಬುದು ಇಲ್ಲ. ನಾವೆಲ್ಲಾ ಒಂದೇ ಸಮಾಜ’ ಎಂದೂ ಹೇಳಿದರು.

‘75 ವರ್ಷದ ಬಳಿಕ ನಿವೃತ್ತಿ ಆಗಬೇಕು’

75 ವರ್ಷ ತುಂಬಿದ ಬಳಿಕ ಯಾರೂ ಪ್ರಮುಖ ಹುದ್ದೆಯಲ್ಲಿ ಮುಂದುವರಿಯಬಾರದು. 75 ವರ್ಷ ತುಂಬಿದ ಮೇಲೆ ವ್ಯಕ್ತಿಯು ಮಾರ್ಗದರ್ಶನ ನೀಡುವ ಕೆಲಸ ಮಾಡಬೇಕು ಎಂದು ಮೋಹನ್ ಭಾಗವತ್ ಹೇಳಿದರು.

ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಕುರಿತು ಹೆಚ್ಚು ಮಾಹಿತಿ ಇಲ್ಲ. ಜಾಗತಿಕ ಮಟ್ಟದಲ್ಲಿ ಭಾರತ ಏಕಾಂಗಿಯಾಗಿ ಇರಲು ಸಾಧ್ಯವಿಲ್ಲ ಎಂದರು.

ತೇಜಸ್ವಿನ್ ಶಂಕರ್‌ಗೆ ಚಿನ್ನ

ಟಿಯಾನ್‌ಜಿನ್ (ಚೀನಾ), (ಪಿಟಿಐ): ತೇಜಸ್ವಿನ್ ಶಂಕರ್ ಅವರು ಏಷ್ಯನ್ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಪುರುಷರ ಹೆಪ್ಟಥ್ಲಾನ್ ಸ್ವರ್ಣ ಕೊರಳಿಗೇರಿಸಿಕೊಂಡರು. ಭಾರತ ಮೂರು ದಿನಗಳ ಈ ಕೂಟದಲ್ಲಿ ಒಟ್ಟು ಈ ಚಿನ್ನ ಸೇರಿ ಒಟ್ಟು ಐದು ಪದಕಗಳೊಡನೆ ಅಭಿಯಾನ ಮುಗಿಸಿತು.

ಭಾರತದ ಪದಕ ಪಟ್ಟಿಯಲ್ಲಿ ಆರನೇ ಸ್ಥಾನ ಗಳಿಸಿತು. ಚೀನಾ 10 ಚಿನ್ನ, 11 ಬೆಳ್ಳಿ, 13 ಕಂಚು ಸೇರಿ 34 ಪದಕಗಳನ್ನು ಗೆದ್ದು ಅಗ್ರಸ್ಥಾನ ಗಳಿಸಿತು.

ತೇಜಸ್ವಿನ್ 5993 ಪಾಯಿಂಟ್ಸ್ ಕಲೆಹಾಕಿ, 2021ರಲ್ಲಿ ಜೂನಿಯರ್ ಒಳಾಂಗಣ ಕೂಟದಲ್ಲಿ ತಾವೇ ಸ್ಥಾಪಿಸಿದ್ದ ರಾಷ್ಟ್ರೀಯ ದಾಖಲೆ (5640) ಸುಧಾರಿಸಿದರು.

ಪೂಜಾ (ಹೈಜಂಪ್‌ನಲ್ಲಿ ಬೆಳ್ಳಿ), ತಜಿಂದರ್‌ಪಾಲ್ ಸಿಂಗ್ ತೂರ್ (ಶಾಟ್‌ಪಟ್‌ನಲ್ಲಿ ಬೆಳ್ಳಿ), ಆ್ಯನ್ಸಿ ಸೋಜನ್ (ಲಾಂಗ್‌ಜಂಪ್‌ನಲ್ಲಿ ಕಂಚು) ಭಾನುವಾರ ಪದಕ ಗೆದ್ದ ಇತರರು. ಕೂಟದ ಮೊದಲ ದಿನವಾದ ಶುಕ್ರವಾರ ಪುರುಷರ ಹೈಜಂಪ್‌ನಲ್ಲಿ ಆದರ್ಶ್ ರಾಮ್ ಜ್ಯೋತಿ ಶಂಕರ್ ಕಂಚಿನ ಪದಕ ಗೆದ್ದಿದ್ದರು.

ಇಳವೆನಿಲ್– ಅರ್ಜುನ್ ಜೋಡಿಗೆ ಸ್ವರ್ಣ

ನವದೆಹಲಿ (ಪಿಟಿಐ): ಏಷ್ಯಾ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಶೂಟರ್‌ಗಳ ಪ್ರಾಬಲ್ಯ ಮುಂದುವರಿದಿದ್ದು, ಇಳವೆನಿಲ್ ವಳರಿವನ್ ಹಾಗೂ ಅರ್ಜುನ್ ಬಬೂತಾ ಜೋಡಿಯು 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಭಾನುವಾರ ಚಿನ್ನದ ಪದಕಕ್ಕೆ ಗುರಿಯಿಟ್ಟಿತು. ಜೂನಿಯರ್ ವಿಭಾಗದಲ್ಲಿ ಹಿಮಾಂಶು ಧಿಲ್ಲಾನ್–ಶಾಂಭವಿ ಕ್ಷೀರಸಾಗರ ಅವರು ಸ್ವರ್ಣಕ್ಕೆ ಕೊರಳೊಡ್ಡಿದರು.

ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಶನಿವಾರ ಚಿನ್ನ ಗೆದ್ದಿದ್ದ ಇಳವೆನಿಲ್, ಮಿಶ್ರ ತಂಡದ ಸ್ಪರ್ಧೆಯ ಫೈನಲ್‌ನಲ್ಲಿ 253.4 ಅಂಕ ಕಲೆಹಾಕಿದರು. ಅರ್ಜುನ್ ಅವರು ಆರಂಭದಲ್ಲಿ ಕೊಂಚ ತಡವರಿಸಿದಂತೆ ಕಂಡರೂ, ನಂತರ ಲಯಕ್ಕೆ ಮರಳಿದರು. 24 ಶಾಟ್‌ಗಳಿಂದ 251.6 ಅಂಕ ಸಂಪಾದಿಸಿದರು. ಅದರೊಂದಿಗೆ, ಇವರಿಬ್ಬರು (505 ಅಂಕ) ದಕ್ಷಿಣ ಕೊರಿಯಾದ ಯೂಂಜಿ ಕ್ವಾನ್- ಕಿಮ್ ವೂರಿಮ್ ಜೋಡಿಯನ್ನು (501 ಅಂಕ) ಹಿಂದಿಕ್ಕಿದರು.



ಜಿಂಬಾಬ್ವೆಯಲ್ಲಿ ಗುರುವಾರ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಗೆದ್ದು ಟ್ರೋಫಿ ಗೆದ್ದುಕೊಂಡ ಭಾರತ ತಂಡ ಭಾನುವಾರ ಮುಂಬೈನ ವಿಮಾನ ನಿಲ್ದಾಣಕ್ಕೆ ಬಂದಾಗ ಬಿಗಿ ಪೊಲೀಸ್ ಭದ್ರತೆ ವಹಿಸಲಾಗಿತ್ತು. ಬಿಸಿಸಿಐ ಈ ತಂಡಕ್ಕೆ ₹7.5 ಕೋಟಿ ನಗದು ಬಹುಮಾನ ಘೋಷಿಸಿದೆ ಪಿಟಿಐ ಚಿತ್ರ

ಸರ್ವಿಸಸ್ ತಂಡಕ್ಕೆ ಸಂತೋಷ್ ಟ್ರೋಫಿ

ಧಾಕುಆಖಾನಾ (ಅಸ್ಸಾಂ) (ಪಿಟಿಐ): ಸರ್ವಿಸಸ್ ತಂಡವು 1-0ಯಿಂದ ಕೇರಳ ತಂಡವನ್ನು ಮಣಿಸಿ, ಸಂತೋಷ್ ಟ್ರೋಫಿಗಾಗಿ ನಡೆದ 79ನೇ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಪ್ರಶಸ್ತಿ ಗೆದ್ದುಕೊಂಡಿತು. ಸರ್ವಿಸಸ್ ತಂಡಕ್ಕೆ ಇದು 8ನೇ ಪ್ರಶಸ್ತಿಯಾಗಿದೆ.

ಧಾಕುಆಖಾನಾ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ನಿಗದಿತ ಅವಧಿಯ ಆಟವು ಗೋಲು ರಹಿತ ಡ್ರಾ ಆಗಿತ್ತು. ಹೆಚ್ಚುವರಿ ಸಮಯದಲ್ಲಿ (109ನೇ ನಿ.) ಅಭಿಷೇಕ್ ಗೋಲು ಹೊಡೆದು, ಗೆಲುವಿನ ರೂವಾರಿಯಾದರು.

ಮುಖಭಂಗ ತಪ್ಪಿಸಿಕೊಂಡ ಇಂಗ್ಲೆಂಡ್

ಅನನುಭವಿ ನೇಪಾಳ ವಿರುದ್ಧ 4 ರನ್ ಜಯ • ಲೋಕೇಶ್ ಬಮ್ ಹೋರಾಟ

ಮುಂಬೈ (ಪಿಟಿಐ): ಎರಡು ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡ ಭಾನುವಾರ ಅನನುಭವಿ ನೇಪಾಳ ಕೈಲಿ ಸ್ವಲ್ಪದರಲ್ಲೇ ಮುಖಭಂಗದಿಂದ ಪಾರಾಯಿತು. ರೋಚಕವಾಗಿದ್ದ ಟಿ20 ವಿಶ್ವಕಪ್ ಸಿ ಗುಂಪಿನ ಹಣಾಹಣಿಯಲ್ಲಿ ನೇಪಾಳ ತಂಡ ಕೊನೆಯ ಓವರಿನವರೆಗೆ ಹೋರಾಟ ತೋರಿದರೂ, ಇಂಗ್ಲೆಂಡ್ 4 ರನ್‌ಗಳ ಗೆಲುವು ಪಡೆದು ನಿಟ್ಟುಸಿರುಬಿಟ್ಟಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ತಂಡ 7 ವಿಕೆಟ್‌ಗೆ 184 ರನ್ ಹೊಡೆಯಿತು. ಇದಕ್ಕೆ ಉತ್ತರವಾಗಿ ಹಿಮಾಲಯದ ತಪ್ಪಲಿನ ಪುಟ್ಟ ತಂಡ 6 ವಿಕೆಟ್‌ಗೆ 180 ರನ್ ಗಳಿಸಿ ನಿರಾಶೆ ಅನುಭವಿಸಿತು.

ವೀರೋಚಿತ ಆಟವಾಡಿದ ಲೋಕೇಶ್ ಬಮ್ (ಔಟಾಗದೇ 39, 20 ಎಸೆತ) ಅವರು ನೇಪಾಳ ತಂಡವನ್ನು ಗೆಲುವಿನತ್ತ ಮುನ್ನಡೆಸುವಂತೆ ಕಂಡಿತ್ತು. ಆದರೆ ಅವರಿಗೆ 'ಗೆಲುವಿನ ಸ್ಪರ್ಶ' ನೀಡಲಾಗಲಿಲ್ಲ.

ಕೊನೆಯ ಓವರಿನಲ್ಲಿ ನೇಪಾಳ ಗೆಲುವಿಗೆ 10 ರನ್‌ಗಳು ಬೇಕಿದ್ದವು. ಆದರೆ ವೇಗಿ ಸ್ಯಾಮ್ ಕರನ್ ಯಾರ್ಕರ್‌ಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದರು. ತಂಡ ಐದು ರನ್ ಗಳಿಸಲಷ್ಟೇ ಶಕ್ತವಾಯಿತು. 17,000 ಪ್ರೇಕ್ಷಕರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ನೇಪಾಳದ ಅಭಿಮಾನಿಗಳು ತಲೆಮೇಲೆ ಕೈಹೊತ್ತರು.

ನಾಯಕ ರೋಹಿತ್ ಪೌದೆಲ್ (39), ದೀಪೇಂದ್ರ ಸಿಂಗ್ ಐರಿ (39) ಮತ್ತು ಕುಶಲ್ ಭುರ್ತೆಲ್ (29) ಅವರು ತಂಡದ ಹೋರಾಟಕ್ಕೆ ಬಲ ನೀಡಿದ ಬಳಿಕ ಲೋಕೇಶ್ ಬೀಸಾಟವಾಡಿದರು. ನಾಲ್ಕು ಬೌಂಡರಿ ಜೊತೆ ಎರಡು ಸಿಕ್ಸರ್ ಬಾರಿಸಿದರು. ಜೋಫ್ರಾ ಆರ್ಚರ್ ಎಸೆದ 18ನೇ ಓವರಿನಲ್ಲಿ 22 ರನ್ ಬಾಚುವ ಮೂಲಕ ನೇಪಾಳ ಚಾರಿತ್ರಿಕ ಗೆಲುವಿನತ್ತ ಸಾಗಿತು. ಪೌದೆಲ್ ಮತ್ತು ಐರಿ ಮೂರನೇ ವಿಕೆಟ್‌ಗೆ 82 ರನ್‌ಗಳ ಜೊತೆಯಾಟವಾಡಿದ್ದರು.

ಇದಕ್ಕೆ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡ, ಜೇಕಬ್ ಬೆಥೆಲ್ (55) ಮತ್ತು ನಾಯಕ ಹ್ಯಾರಿ ಬ್ರೂಕ್ (53) ಅವರ ಆಕ್ರಮಣ ಕಾರಿ ಅರ್ಧ ಶತಕಗಳ ನೆರವಿನಿಂದ 7 ವಿಕೆಟ್‌ಗೆ 184 ರನ್‌ಗಳಿಸಿತು.

ಎಡಗೈ ಬ್ಯಾಟರ್ ಬೆಥೆಲ್ ತಮ್ಮ ಚೊಚ್ಚಲ ಟಿ20 ವಿಶ್ವಕಪ್‌ನಲ್ಲಿ ಸಾಮರ್ಥ್ಯ ತೋರಿ 35 ಎಸೆತಗಳಲ್ಲಿ ನಾಲ್ಕು ಬೌಂಡರಿ, ಅಷ್ಟೇ ಸಿಕ್ಸರ್‌ಗಳನ್ನು ಬಾರಿಸಿದರು. ಬ್ರೂಕ್ ಹೊಣೆಯಿಂದ ಆಡಿ 32 ಎಸೆತಗಳ ಇನಿಂಗ್ಸ್‌ನಲ್ಲಿ ನಾಲ್ಕು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಹೊಡೆದರು.

ಫಿಲ್ ಸಾಲ್ಟ್ (1), ಜೋಸ್ ಬಟ್ಲರ್ (26) ಮತ್ತು ಟಾಮ್ ಬ್ಯಾಂಟಮ್ (2) ಅವರು ಕೇವಲ 57 ರನ್‌ಗಳಾಗುವಷ್ಟರಲ್ಲಿ ನಿರ್ಗಮಿಸಿದರು. ಈ ವೇಳೆ ಬೆಥೆಲ್– ಬ್ರೂಕ್ ನಾಲ್ಕನೇ ವಿಕೆಟ್‌ಗೆ 71 ರನ್ ಸೇರಿಸಿ ಚೇತರಿಕೆ ನೀಡಿದರು. ಆದರೆ ನೇಪಾಳ ಬೌಲರ್‌ಗಳು ಇಂಗ್ಲೆಂಡ್ ದೊಡ್ಡ ಮೊತ್ತ ಗಳಿಸದಂತೆ ತಡೆದರು.

ಕೊನೆಯಲ್ಲಿ ವಿಲ್ ಜಾಕ್ಸ್ 18 ಎಸೆತಗಳಲ್ಲಿ 39 ರನ್ ಸೂರೆ ಮಾಡಿದ್ದರಿಂದ ಇಂಗ್ಲೆಂಡ್ ಸವಾಲಿನ ಮೊತ್ತ ಗಳಿಸಿತು. ವೇಗಿಗಳಾದ ದೀಪೇಂದ್ರ ಐರೀ (23ಕ್ಕೆ2) ಮತ್ತು ನಂದನ್ ಯಾದವ್ (25ಕ್ಕೆ2) ಯಶಸ್ವಿ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರುಗಳಲ್ಲಿ 7 ವಿಕೆಟ್‌ಗೆ 184 (ಜೋಸ್ ಬಟ್ಲರ್ 26, ಬೆಥೆಲ್ 55, ಹ್ಯಾರಿ ಬ್ರೂಕ್ 53, ವಿಲ್ ಜಾಕ್ಸ್ ಔಟಾಗದೇ 39; ದೀಪೇಂದ್ರ ಐರೀ 23ಕ್ಕೆ2, ನಂದನ್ ಯಾದವ್ 25ಕ್ಕೆ2); ನೇಪಾಳ: 20 ಓವರುಗಳಲ್ಲಿ 6 ವಿಕೆಟ್‌ಗೆ 180 (ಕುಶಲ್ ಭುರ್ತೆಲ್ 29, ರೋಹಿತ್ ಪೌದೆಲ್ 39, ದೀಪೇಂದ್ರ ಸಿಂಗ್ ಐರೀ 44, ಲೋಕೇಶ್ ಬಮ್ ಔಟಾಗದೇ 39; ಲಿಯಾಮ್ ಡಾಸನ್ 21ಕ್ಕೆ2).

ಪಂದ್ಯದ ಆಟಗಾರ: ವಿಲ್ ಜಾಕ್ಸ್.





ವಿಲ್ ಜಾಕ್ಸ್ (ಎಡ). ಇಂಗ್ಲೆಂಡ್‌ನ ಬೌಲರ್ ಲಿಯಾಮ್ ಡಾಸನ್ ಅವರು ನೇಪಾಳದ ಲೋಕೇಶ್ ಬಮ್ ಅವರ ಆಟಕ್ಕೆ ಮೆಚ್ಚುಗೆ ಸೂಚಿಸಿದರು ಎಎಫ್‌ಪಿ ಚಿತ್ರಗಳು

ಇಂದಿನ ಪಂದ್ಯಗಳು

ಸ್ಕಾಟ್ಲೆಂಡ್ Vs ಇಟಲಿ	ಬೆಳಿಗ್ಗೆ 11
ಜಿಂಬಾಬ್ವೆ Vs ಒಮಾನ್	ಮಧ್ಯಾಹ್ನ 3
ದಕ್ಷಿಣ ಆಫ್ರಿಕಾ Vs ಕೆನಡಾ	ರಾತ್ರಿ 7

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಸ್ಟಾರ್

ಸ್ಪೇನ್ ಪ್ರವಾಸಕ್ಕೆ ಹೊರಟಿದ್ದ ಸಿರಾಜ್

ಮುಂಬೈ (ಪಿಟಿಐ): ಮೊಹಮ್ಮದ್ ಸಿರಾಜ್ ಅವರು ರಿಯಲ್ ಮ್ಯಾಡ್ರಿಡ್ ಮತ್ತು ರಿಯಲ್ ಸೊಸಿಡಾಡ್ ನಡುವಣ ಫುಟ್‌ಬಾಲ್ ಪಂದ್ಯ ವೀಕ್ಷಿಸಲು ಈ ವಾರ ಸ್ಪೇನ್‌ಗೆ ಹೋಗಲು ಸಿದ್ಧರಾಗಿದ್ದರು.

ಆದರೆ ಮೂರು ದಿನಗಳ ಹಿಂದೆ ಸಿರಾಜ್ ಮೊಬೈಲ್‌ಗೆ ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಕರೆ ಬಂದಿತ್ತು. ಫೋನ್ ಕೈಗೆತ್ತಿಕೊಂಡ ಸಿರಾಜ್ ಅವರಿಗೆ ಆ ಕಡೆಯಿಂದ, 'ಮಿಯಾ, ಬ್ಯಾಗ್ಸ್ ಪ್ಯಾಕ್ ಕರ್ ಔರ್ ಆಜಾ ಮುಂಬೈ (ಬ್ಯಾಗ್ ಸಿದ್ಧಪಡಿಸಿಕೊಂಡು ಮುಂಬೈಗೆ ಬಾ)' ಎಂದಿದ್ದರು ಸೂರ್ಯ. 'ಅಣ್ಣಾ, ತಮಾಷೆ ಮಾಡಬೇಡ. ಅಂತಹದ್ದೇನೂ ಆಗೋದಿಲ್ಲ ಬಿಡು' ಎಂದು ಸಿರಾಜ್ ಪ್ರತಿಕ್ರಿಯಿಸಿದ್ದರು.

ಆದರೆ ಸೂರ್ಯ, 'ನಾನು ನಿಜ ಹೇಳುತ್ತಿರುವೆ. ಸಿದ್ಧವಾಗಿ ಬಂದುಬಿಡು' ಎಂದಿದ್ದರು.

'ಸೂರ್ಯ ಅವರ ನಂತರ ಓಜಾ ಭಾಯ್ (ಆಯ್ಕೆ ಸಮಿತಿಯ ಪ್ರಗ್ಯಾನ್ ಓಜಾ) ಕರೆ ಮಾಡಿ ವಿಷಯ ಖಚಿತ ಪಡಿಸಿದ್ದರು. ಆ ದೇವರು, ಯಾರಿಗೆ ಏನು ಆಗಬೇಕು ಎಂದು ಬಯಸುತ್ತಾನೋ ಅದೇ ಆಗುತ್ತದೆ. ಯಾರಿಂದಲೂ ಅದನ್ನು ಬದಲಿಸಲಾಗದು' ಎಂದು ಭಾರತ ಟಿ20 ತಂಡಕ್ಕೆ ಕೊನೆಯ ಕ್ಷಣದಲ್ಲಿ ತಾವು ಆಯ್ಕೆಯಾಗಿ ಬಂದ ಬಗ್ಗೆ ಸಿರಾಜ್ ನೀಡಿದ ವಿವರಣೆ ಇದು.

ಶನಿವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಅಮೆರಿಕ ತಂಡವು ಭಾರತಕ್ಕೆ ಕಠಿಣ ಪೈಪೋಟಿಯೊಡ್ಡಿತು. 161 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಅಮೆರಿಕ ತಂಡವ ಕಟ್ಟಿ ಹಾಕುವಲ್ಲಿ ಸಿರಾಜ್ (29ಕ್ಕೆ3) ಪ್ರಮುಖ ಪಾತ್ರ ವಹಿಸಿದ್ದರು. ಭಾರತ ತಂಡವು 29 ರನ್‌ಗಳಿಂದ ಜಯಿಸಿತ್ತು.

ರಣಜಿ ಟ್ರೋಫಿ ಟೂರ್ನಿಯಲ್ಲಿ ಹೈದರಾಬಾದ್ ತಂಡದಲ್ಲಿ ಎರಡು ಪಂದ್ಯಗಳನ್ನು ಆಡಿದ್ದ ಸಿರಾಜ್ ಅವರು ಫೆಬ್ರುವರಿ ತಿಂಗಳಪೂರ್ತಿ ವಿಶ್ರಾಂತಿ ಪಡೆಯುವವರಿದ್ದರು. ಅದಕ್ಕಾಗಿ ಪ್ರವಾಸದ ಯೋಜನೆ ರೂಪಿಸಿಕೊಂಡಿದ್ದರು.

'ಭಾರತ ತಂಡವನ್ನು ಸೇರಿಕೊಳ್ಳಲು ವಿಮಾನದಲ್ಲಿ ಮಾಡಿದ ಪ್ರಯಾಣವು ಕನಸಿನಂತೆ ಅನಿಸಿತ್ತು. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅವಕಾಶ ಸಿಗುತ್ತದೆ ಎಂದು ನಾನೂ ಯೋಚಿಸಿಯೇ ಇರಲಿಲ್ಲ. ಏಕೆಂದರೆ; ಕಳೆದ ಒಂದು ವರ್ಷದಿಂದ ತಂಡವನ್ನು ಸಿದ್ಧಗೊಳಿಸುವ ಪ್ರಕ್ರಿಯೆ ನಡೆದಿತ್ತು. ಆ ಅವಧಿಯಲ್ಲಿ ನಾನು ಟಿ20 ಪಂದ್ಯಗಳನ್ನು ಆಡಿರಲಿಲ್ಲ. ಆದ್ದರಿಂದ ಅವಕಾಶ ಸಿಗುವ ಸಾಧ್ಯತೆಗಳು ತೀರಾ ಕಡಿಮೆ ಇದ್ದವು' ಎಂದು ಸಿರಾಜ್ ಹೇಳಿದ್ದರು.

ಸಿರಾಜ್ ಅವರ ಸಹ ಆಟಗಾರ, ಭಾರತ ತಂಡದ ಬ್ಯಾಟರ್ ರಿಂಕು ಸಿಂಗ್ ಅವರು, 'ಗಾಡ್ಸ್ ಪ್ಲಾನ್ ಬೇಬಿ (ದೇವರ ಯೋಜನೆ ಮಗಾ)' ಎಂದು ಸಂದೇಶ ಹಾಕಿದ್ದರು.



ಮೊಹಮ್ಮದ್ ಸಿರಾಜ್ ಅವರನ್ನು ಅಭಿನಂದಿಸಿದ ಸಹ ಆಟಗಾರರು

ಡಿ ಗುಂಪಿನಲ್ಲಿ ಅಫ್ಗಾನಿಸ್ತಾನ ತಂಡಕ್ಕೆ 5 ವಿಕೆಟ್ ಸೋಲು • ಗುಲ್ಬದ್ದೀನ್ ಬಿರುಸಿನ ಅರ್ಧಶತಕ

ನ್ಯೂಜಿಲೆಂಡ್ ಗೆಲುವಿನಲ್ಲಿ ಮಿಂಚಿದ ಸೀಫರ್ಟ್

ಚೆನ್ನೈ (ಎಎಫ್‌ಪಿ): ಆರಂಭ ಆಟಗಾರ ಟಿಮ್ ಸೀಫರ್ಟ್ (65 42 ಎಸೆತ) ಅವರ ಬಿರುಸಿನ ಅರ್ಧ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡವು, ಟಿ29 ವಿಶ್ವಕಪ್ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡದ ಮೇಲೆ ಐದು ವಿಕೆಟ್‌ಗಳ ಗೆಲುವು ಪಡೆಯಿತು.

ಭಾನುವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಅಫ್ಗಾನಿಸ್ತಾನ 6 ವಿಕೆಟ್‌ಗೆ 182 ರನ್ ಹೊಡೆಯಿತು. ಸೀಫರ್ಟ್ ಮತ್ತು ಗ್ಲೆನ್ ಫಿಲಿಪ್ಸ್ (42) ಅವರ ಆಟದಿಂದ ನ್ಯೂಜಿಲೆಂಡ್ 13 ಎಸೆತಗಳು ಉಳಿದಿರುವಂತೆ 17.5 ಓವರುಗಳಲ್ಲಿ 5 ವಿಕೆಟ್‌ಗೆ 183 ರನ್ ಹೊಡೆಯಿತು.

ಇದು ಟಿ20 ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ಯಶಸ್ವಿಯಾಗಿ ಬೆನ್ನಟ್ಟಿದ ಗರಿಷ್ಠ ಗುರಿ ಎನಿಸಿದೆ. 2021ರ ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ನಿಗದಿಪಡಿಸಿದ 167 ರನ್ ಗುರಿಯನ್ನು ತಲುಪಿದ್ದು ಈ ಹಿಂದಿನ ಗರಿಷ್ಠ ಚೇಸ್ ಆಗಿತ್ತು.

ನ್ಯೂಜಿಲೆಂಡ್ ಆರಂಭ ಉತ್ತಮವಾಗಿರಲಿಲ್ಲ. ಆಫ್ ಬ್ರೇಕ್ ಬೌಲರ್ ಮುಜೀಬ್ ಉರ್ ರೆಹಮಾನ್ ಎರಡನೇ ಓವರಿನಲ್ಲೇ ಆರಂಭ ಆಟಗಾರ ಫಿನ್ ಅಲೆನ್ (1) ಮತ್ತು ರಚಿನ್ ರವೀಂದ್ರ (0) ಅವರ ವಿಕೆಟ್‌ಗಳನ್ನು ಸತತ ಎಸೆತಗಳಲ್ಲಿ ಪಡೆದರು.

ಗ್ಲೆನ್ ಫಿಲಿಪ್ಸ್ ಹ್ಯಾಟ್ರಿಕ್ ತಪ್ಪಿಸಿದರಲ್ಲದೇ, ಎದುರಾಳಿಗಳ ಸ್ಪಿನ್ ದಾಳಿ ನಿಭಾಯಿಸಿ ಮೂರನೇ ವಿಕೆಟ್‌ಗೆ ಸೀಫರ್ಟ್ ಜೊತೆ 74 ರನ್ ಸೇರಿಸಿ ತಂಡವನ್ನು ಸುರಕ್ಷಿತ ಸ್ಥಿತಿಗೆ ತಲುಪಿಸಿದರು.

48ರಲ್ಲಿದ್ದಾಗ ಅನುಭವಿ ಸ್ಪಿನ್ನರ್ ರಶೀದ್ ಖಾನ್ ತಮ್ಮದೇ ಬೌಲಿಂಗ್‌ನಲ್ಲಿ ಸೀಫರ್ಟ್‌ಗೆ ಜೀವದಾನ ನೀಡಿದರು. ಮೊಹಮ್ಮದ್ ನಬಿ ಬೌಲಿಂಗ್‌ನಲ್ಲಿ ಸಿಕ್ಸರ್ ಎತ್ತುವ ಮೂಲಕ ಸೀಫರ್ಟ್ ಅರ್ಧ ಶತಕ ದಾಟಿದರು. ಮಾರ್ಕ್ ಚಾಪ್‌ಮನ್ (28, 17ಎ) ಮತ್ತು ಡೇರಿಲ್ ಮಿಚೆಲ್ (ಅಜೇಯ 25, 14ಎ) ಅವರು ತಂಡವು ಬೇಗನೇ ಗುರಿ ತಲುಪಲು ನೆರವಾದರು.

ಇದಕ್ಕೆ ಮೊದಲು ಟಾಸ್ ಗೆದ್ದು ಬ್ಯಾಟಿಂಗ ಮಾಡಿದ ಅಫ್ಗಾನಿಸ್ತಾನ ತಂಡದ ಪರ ಗುಲ್ಬದ್ದಿನ್ ನೈಬ್ (63, 35ಎ, 4x3, 6x4) ಅವರು ಆಕ್ರಮಣಕಾರಿ ಅರ್ಧ ಶತಕದ ಮೂಲಕ ಸವಾಲಿನ ಮೊತ್ತ ತಲುಪಲು ನೆರವಾದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರುಗಳಲ್ಲಿ 6 ವಿಕೆಟ್‌ಗೆ 182 (ರಹಮಾನುಲ್ಲಾ ಗುರ್ಬಾಝ್ 27, ಗುಲ್ಬದ್ದಿನ್ ನೈಬ್ 63, ಸೇದಿಕುಲ್ಲಾ ಅಟಲ್ 29, ಲಾಕಿ ಫರ್ಗ್ಯೂಸನ್ 40ಕ್ಕೆ2); ನ್ಯೂಜಿಲೆಂಡ್: 17.5 ಓವರುಗಳಲ್ಲಿ 5 ವಿಕೆಟ್‌ಗೆ 183 (ಟಿಮ್ ಸೀಫರ್ಟ್ 65, ಗ್ಲೆನ್ ಫಿಲಿಪ್ಸ್ 42, ಮಾರ್ಕ್ ಚಾಪ್‌ಮನ್ 28, ಡೇರಿಲ್ ಮಿಚೆಲ್ ಔಟಾಗದೇ 25; ಮುಜೀಬ್ ಉರ್ ರೆಹಮಾನ್ 31ಕ್ಕೆ2).

ಪಂದ್ಯದ ಆಟಗಾರ: ಟಿಮ್ ಸೀಫರ್ಟ್.



ಅರ್ಧ ಶತಕ ಗಳಿಸಿದ ಟಿಮ್ ಸೀಫರ್ಟ್ ಪಿಟಿಐ ಚಿತ್ರ

ಶ್ರೀಲಂಕಾಕ್ಕೆ ಮಣಿದ ಐರ್ಲೆಂಡ್

ಕೊಲಂಬೊ (ಪಿಟಿಐ): ಆಲ್‌ರೌಂಡ್ ಆಟ ಆಡಿದ ಶ್ರೀಲಂಕಾ ತಂಡವು ಟಿ20 ವಿಶ್ವಕಪ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಭಾನುವಾರ ಐರ್ಲೆಂಡ್ ಎದುರು 20 ರನ್‌ಗಳ ಜಯ ಸಾಧಿಸಿತು.

ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಶ್ರೀಲಂಕಾ ತಂಡವು ಕುಸಾಲ ಮೆಂಡಿಸ್ (56; 43ಎ, 4x5) ಮತ್ತು ಕಮಿಂದು ಮೆಂಡಿಸ್ (44; 19ಎ, 4x4, 6x2) ಅವರ ಅಮೋಘ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 163 ರನ್ ಗಳಿಸಿತು.

ಐರ್ಲೆಂಡ್ ತಂಡವು ಮಹೀಷ ತೀಕ್ಷಣ (23ಕ್ಕೆ4) ಹಾಗೂ ವನಿಂದು ಹಸರಂಗ (25ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಎದುರು 19.5 ಓವರ್‌ಗಳಲ್ಲಿ 143 ರನ್‌ಗಳಿಗೆ ಆಲೌಟ್ ಆಯಿತು. ರಾಸ್ ಅಡೇರ್ (34; 23ಎ, 4x5, 6x1) ಹಾಗೂ ಹ್ಯಾರಿ ಟೆಕ್ಟರ್ (40; 34ಎ, 4x1) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ವಿಫಲರಾದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 6ಕ್ಕೆ 163 (ಕುಸಾಲ ಮೆಂಡಿಸ್ ಔಟಾಗದೇ 56, ಕಮಿಂದು ಮೆಂಡಿಸ್ 44, ಜಾರ್ಜ್ ಡಾಕ್ರೆಲ್ 17ಕ್ಕೆ2, ಬ್ಯಾರಿ ಮೆಕಾರ್ಥಿ 40ಕ್ಕೆ2, ಗೆರೆತ್ ಡೆಲಾನಿ 24ಕ್ಕೆ1) ಐರ್ಲೆಂಡ್: 19.5 ಓವರ್‌ಗಳಲ್ಲಿ 143 (ರಾಸ್ ಅಡೇರ್ 34, ಹ್ಯಾರಿ ಟೆಕ್ಟರ್ 40; ಮಹೀಷ ತೀಕ್ಷಣ 23ಕ್ಕೆ4, ವನಿಂದು ಹಸರಂಗ 25ಕ್ಕೆ3).

ಪಂದ್ಯದ ಆಟಗಾರ: ಕಮಿಂದು ಮೆಂಡಿಸ್.



ಕುಸಾಲ ಮೆಂಡಿಸ್ ಎಎಫ್‌ಪಿ ಚಿತ್ರ

ಎಚ್‌ಸಿಎಲ್ ಸೈಕ್ಲೊಥಾನ್: ಬಸಪ್ಪಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಕೋಟೆಯ ಬಸಪ್ಪ ತೇರದಾಳ ಅವರು ಚೊಚ್ಚಲ ಆವೃತ್ತಿಯ ಎಚ್‌ಸಿಎಲ್ ಸೈಕ್ಲೊಥಾನ್ ಬೆಂಗಳೂರು ಸ್ಪರ್ಧೆಯ ಅಮೆಚೂರ್ ರೋಡ್ ರೇಸ್ 50 ಕಿ.ಮೀ. ವಿಭಾಗದಲ್ಲಿ ಪ್ರಶಸ್ತಿ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಮೈಸೂರಿನ ನಾಗಶ್ರೀ ಮೊದಲ ರನ್ನರ್ಸ್‌ಅಪ್ ಆದರು.

ಹೊಸಕೆರೆಹಳ್ಳಿಯ ನೈಸ್ ರಸ್ತೆಯ ಟೋಲ್‌ಗೇಟ್ ಬಳಿ ಭಾನುವಾರ ಬೆಳಿಗ್ಗೆ ಸ್ಪರ್ಧೆಗಳು ನಡೆದವು. ವೃತ್ತಿಪರ 48 ಕಿ.ಮೀ. ರೋಡ್ ರೇಸ್ ವಿಭಾಗದಲ್ಲಿ ಪಂಜಾಬ್‌ನ ಹರ್ಷವೀರ್ ಸಿಂಗ್ ಪ್ರಶಸ್ತಿ ಜಯಿಸಿದರೆ, ವಾಯುಪಡೆಯ ಸಾಹಿಲ್ ಕುಮಾರ್ ಹಾಗೂ ಕನ್ನಡಿಗ ನವೀನ್ ಜಾನ್ ಕ್ರಮವಾಗಿ ಮೊದಲ ಮತ್ತು ಎರಡನೇ ರನ್ನರ್ಸ್‌ಅಪ್ ಆದರು. ಮಹಿಳೆಯರ ವಿಭಾಗದಲ್ಲಿ ಒಡಿಶಾದ ಸ್ವಸ್ತಿ ಸಿಂಗ್ ಚಾಂಪಿಯನ್ ಆದರು.

ಅಮೆಚೂರ್ ಪುರುಷರ 32 ಕಿ.ಮೀ. ಎಂಟಿಬಿ (ಮೌಂಟನ್ ಬೈಕ್) ಸ್ಪರ್ಧೆಯಲ್ಲಿ ಮೈಸೂರಿನ ಅಚಲ್ ಹೆಬ್ಬಾರ್ ಮೊದಲ ರನ್ನರ್ಸ್‌ಅಪ್ ಆದರು. ರಹೀಲ್ ಭಾಟಿಯಾ ಪ್ರಶಸ್ತಿ ಗೆದ್ದರೆ, ಕುತ್ಬುದ್ದೀನ್ ಶೇಕ್ ಬಶೀರ್ ಎರಡನೇ ರನ್ನರ್ಸ್‌ಅಪ್ ಆದರು.

ಅಮೆಚೂರ್ ರೋಡ್ ರೇಸ್ 50 ಕಿ.ಮೀ. ಸ್ಪರ್ಧೆಯಲ್ಲಿ ಮಹಾರಾಷ್ಟ್ರದ ಹರ್ಷ ಪವಾರ್ ಹಾಗೂ ತಮಿಳುನಾಡಿನ ಮುಹಮ್ಮದ್ ತಹಾ ಕ್ರಮವಾಗಿ ಮೊದಲ ಹಾಗೂ ಎರಡನೇ ರನ್ನರ್ಸ್‌ಅಪ್ ಆದರು.



ಅಮೆಚೂರ್ ಪುರುಷರ 32 ಕಿ.ಮೀ. ಎಂಟಿಬಿ ಸ್ಪರ್ಧೆಯ ವಿಜೇತರು– ರಹೀಲ್ ಭಾಟಿಯಾ (ಮಧ್ಯ), ಕುತ್ಬುದ್ದೀನ್ ಶೇಕ್ ಬಶೀರ್ (ಎಡ) ಹಾಗೂ ಮೈಸೂರಿನ ಅಚಲ್ ಹೆಬ್ಬಾರ್

ರಾಹುಲ್, ಕರುಣ್ ಮೇಲೆ ನಿರೀಕ್ಷೆ

ರೋಚಕ ಘಟ್ಟದಲ್ಲಿ ರಣಜಿ ಕ್ವಾರ್ಟರ್‌ಫೈನಲ್ • ಗೆಲುವಿಗೆ ಬೇಕು 212 ರನ್

ಪ್ರಜಾವಾಣಿ ವಾರ್ತೆ

ಮುಂಬೈ: ಕರ್ನಾಟಕ ಮತ್ತು ಮುಂಬೈ ನಡುವಣ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯವು ರೋಚಕ ಹಂತಕ್ಕೆ ತಲುಪಿದೆ. ಮಯಂಕ್ ಅಗರವಾಲ್ ಬಳಗವು ಗೆಲ್ಲಲು ಇನ್ನೂ 212 ರನ್ ಗಳಿಸಬೇಕು. ಆದರೆ ಇದಕ್ಕೂ ಮುನ್ನ ಶಾರ್ದೂಲ್ ಠಾಕೂರ್ ತಂಡವು ಎಂಟು ವಿಕೆಟ್‌ಗಳನ್ನು ಗಳಿಸಿದರೆ ಮುಂಬೈ ಸೆಮಿಫೈನಲ್ ಪ್ರವೇಶಿಸಬಹುದು. ಪಂದ್ಯದಲ್ಲಿ ಇನ್ನೂ ಎರಡು ದಿನಗಳು ಬಾಕಿ ಇವೆ.

ನಾಲ್ಕರ ಘಟ್ಟಕ್ಕೆ ತಲುಪುವ ಛಲದಲ್ಲಿರುವ ಕರ್ನಾಟಕ ತಂಡವು ಅನುಭವಿ ಬ್ಯಾಟರ್‌ಗಳಾದ ಕೆ.ಎಲ್. ರಾಹುಲ್ (ಬ್ಯಾಟಿಂಗ್ 60) ಮತ್ತು ಕರುಣ್ ನಾಯರ್ (ಬ್ಯಾಟಿಂಗ್ 9) ಅವರ ಮೇಲೆ ಈಗ ಭರವಸೆಯ ನೋಟ ನೆಟ್ಟಿದೆ. ಎಂಸಿಎ–ಬಿಕೆಸಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಕರ್ನಾಟಕವು ಶನಿವಾರ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತ್ತು. ಆದರೆ ಎರಡನೇ ಇನಿಂಗ್ಸ್‌ನಲ್ಲಿ ತಿರುಗೇಟು ನೀಡಿದ್ದ ಆತಿಥೇಯ ಮುಂಬೈ, ಕರ್ನಾಟಕಕ್ಕೆ 325 ರನ್‌ಗಳ ಜಯದ ಗುರಿಯೊಡ್ಡಿತು. ಈ ಪೈಕಿ ಕರ್ನಾಟಕವು 29 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 113 ರನ್ ಗಳಿಸಿದೆ.

ಮಯಂಕ್ ಅಗರವಾಲ್ ಅವರ ವಿಕೆಟ್ ಶಾರ್ದೂಲ್ ಹಾಕಿದ ಮೂರನೇ ಓವರ್‌ನಲ್ಲಿ ಪತನವಾಯಿತು. ಇದರಿಂದಾಗಿ ಆತಂಕದಲ್ಲಿದ್ದ ತಂಡಕ್ಕೆ ನಾಯಕ ದೇವದತ್ತ ಪಡಿಕ್ಕಲ್ (39; 52ಎ, 4X5, 6X1) ಮತ್ತು ರಾಹುಲ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 84 ರನ್ ಸೇರಿಸಿ ಆಸರೆಯಾದರು. ಆದರೆ ತನುಷ್ ಕೋಟ್ಯಾನ್ ಅವರ ಬೌಲಿಂಗ್‌ನಲ್ಲಿ ಯಶಸ್ವಿ ಜೈಸ್ವಾಲ್ ಪಡೆದ ಕ್ಯಾಚ್‌ಗೆ ಔಟಾದರು.

ತನುಷ್, ತುಷಾರ್ ಮಿಂಚು: ಎರಡನೇ ದಿನದಾಟದ ಮುಕ್ತಾಯಕ್ಕೆ ಮುಂಬೈ ತಂಡವು 2 ವಿಕೆಟ್‌ಗಳಿಗೆ 189 ರನ್ ಗಳಿಸಿತ್ತು. ಆಕಾಶ್ ಆನಂದ್ (53 ರನ್) ಮತ್ತು ಮುಷೀರ್ ಖಾನ್ (49 ರನ್) ಕ್ರೀಸ್‌ನಲ್ಲಿದ್ದರು. ಭಾನುವಾರ ಆಟ ಮುಂದುವರಿಸಿದ ಆಕಾಶ್ ತಮ್ಮ ಮೊತ್ತಕ್ಕೆ 16 ರನ್ ಸೇರಿಸಿದರು. ಆದರೆ ಖಾನ್ ಅರ್ಧಶತಕ ಗಳಿಸಲು ವಿದ್ಯಾಧರ್ ಪಾಟೀಲ ಬಿಡಲಿಲ್ಲ. ಕೆಳಕ್ರಮಾಂಕದಲ್ಲಿ ತನುಷ್ ಕೋಟ್ಯಾನ್ (ಔಟಾಗದೇ 48) ತುಷಾರ್ ದೇಶಪಾಂಡೆ (37) ತಂಡದ ಮೊತ್ತ ಹೆಚ್ಚಿಸಿದರು. ಮುಂಬೈ ತಂಡವು 98.3 ಓವರ್‌ಗಳಲ್ಲಿ 377 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ 48.1 ಓವರ್‌ಗಳಲ್ಲಿ 120. ಕರ್ನಾಟಕ: 47.1 ಓವರ್‌ಗಳಲ್ಲಿ 173. ಎರಡನೇ ಇನಿಂಗ್ಸ್: ಮುಂಬೈ: 98.3 ಓವರ್‌ಗಳಲ್ಲಿ 377 (ಆಕಾಶ್ ಆನಂದ್ 70, ಮುಷೀರ್ ಖಾನ್ 49, ತನುಷ್ ಕೋಟ್ಯಾನ್ ಔಟಾಗದೇ 48, ತುಷಾರ್ ದೇಶಪಾಂಡೆ 47, ವಿದ್ಯಾಧರ್ ಪಾಟೀಲ 78ಕ್ಕೆ 2, ವಿದ್ವತ್ ಕಾವೇರಪ್ಪ 78ಕ್ಕೆ2, ಶಿಖರ್ ಶೆಟ್ಟಿ 45ಕ್ಕೆ3) ಕರ್ನಾಟಕ: 29 ಓವರ್‌ಗಳಲ್ಲಿ 2ಕ್ಕೆ 113 (ಕೆ.ಎಲ್. ರಾಹುಲ್ ಬ್ಯಾಟಿಂಗ್ 60, ದೇವದತ್ತ ಪಡಿಕ್ಕಲ್ 39, ಶಾರ್ದೂಲ್ ಠಾಕೂರ್ 24ಕ್ಕೆ1, ತನುಷ್ ಕೋಟ್ಯಾನ್ 13ಕ್ಕೆ1).



ದೇವದತ್ತ ಪಡಿಕ್ಕಲ್ ಪ್ರಜಾವಾಣಿ ಸಂಗ್ರಹ ಚಿತ್ರ

ಕೃತಿಕ್ ಕೃಷ್ಣಗೆ 7 ಬಲಿ



ಕರ್ನಾಟಕ ತಂಡದ ವಿಕೆಟ್‌ಕೀಪರ್ ಕೃತಿಕ್ ಕೃಷ್ಣ ಅವರು ಮುಂಬೈ ಎದುರಿನ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದ ಒಂದೇ ಇನಿಂಗ್ಸ್‌ನಲ್ಲಿ ಏಳು ಬಲಿ ಪಡೆದರು. ಅದರಲ್ಲಿ ಆರು ಕ್ಯಾಚ್ ಮತ್ತು ಒಂದು ಸ್ಟಂಪಿಂಗ್ ಸೇರಿವೆ.

ಕೃತಿಕ್ ಅವರು ಆಡುತ್ತಿರುವ ಎರಡನೇ ರಣಜಿ ಪಂದ್ಯ ಇದಾಗಿದೆ. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಪಂಜಾಬ್ ಎದುರು ಅವರು ಪದಾರ್ಪಣೆ ಮಾಡಿದ್ದರು. ಕೆ.ಎಲ್. ಶ್ರೀಜಿತ್ ಗಾಯಗೊಂಡ ಕಾರಣ ಕೃತಿಕ್ ಅವಕಾಶ ಪಡೆದಿದ್ದಾರೆ.

ಬಿಕೆಸಿ ಮೈದಾನದಲ್ಲಿ ಭಾನುವಾರ ದಿನದಾಟದಲ್ಲಿ ಕೃತಿಕ್ ಅವರು ಕೀಪಿಂಗ್‌ನಲ್ಲಿ ಕಠಿಣ ಸವಾಲು ಎದುರಿಸಿದರು. ವೇಗಿಗಳಾದ ಪ್ರಸಿದ್ಧ ಕೃಷ್ಣ, ವಿದ್ವತ್ ಕಾವೇರಪ್ಪ ಮತ್ತು ವಿದ್ಯಾಧರ್ ಪಾಟೀಲ ಅವರ ಎಸೆತಗಳು ಬೌನ್ಸ್ ಮತ್ತು ಸ್ವಿಂಗ್‌ಗಳಿಂದ ಕೂಡಿದ್ದವು. ಅವುಗಳನ್ನು ನಿರ್ವಹಿಸುವಲ್ಲಿ ಕೃತಿಕ್ ಗಮನ ಸೆಳೆದರು. ಮಂಡ್ಯದ 23 ವರ್ಷದ ಕೃತಿಕ್ ಅವರು ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರ ಎಸೆತದಲ್ಲಿ ಯಶಸ್ವಿ ಜೈಸ್ವಾಲ್ ಅವರನ್ನು ಸ್ಟಂಪಿಂಗ್ ಮಾಡಿದ್ದು ಅಮೋಘವಾಗಿತ್ತು.

ಸೆಮಿಫೈನಲ್‌ಗೆ ಉತ್ತರಾಖಂಡ

ಜಮ್ಶೆಡ್‌ಪುರ (ಪಿಟಿಐ): ಮಯಂಕ್ ಮಿಶ್ರಾ (22ಕ್ಕೆ5) ಮತ್ತು ಅಭಯ್ ನೇಗಿ (36ಕ್ಕೆ4) ಅವರ ಅಮೋಘ ಬೌಲಿಂಗ್ ಬಲದಿಂದ ಉತ್ತರಾಖಂಡ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಜಾರ್ಖಂಡ್ ಎದುರು ಇನಿಂಗ್ಸ್ ಮತ್ತು 6 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ ಮೊದಲ ತಂಡವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಾರ್ಖಂಡ್ 85 ಓವರ್‌ಗಳಲ್ಲಿ 235. ಉತ್ತರಾಖಂಡ: 122.3 ಓವರ್‌ಗಳಲ್ಲಿ 371. ಎರಡನೇ ಇನಿಂಗ್ಸ್: ಜಾರ್ಖಂಡ್: 41.1 ಓವರ್‌ಗಳಲ್ಲಿ 130 (ವಿರಾಟ್ ಸಿಂಗ್ 55, ಅಭಯ್ ನೇಗಿ 36ಕ್ಕೆ4, ಮಯಂಕ್ ಮಿಶ್ರಾ 22ಕ್ಕೆ5)

ಕಲ್ಯಾಣಿ: ಮೊದಲ ಇನಿಂಗ್ಸ್: ಆಂಧ್ರ: 88.4 ಓವರ್‌ಗಳಲ್ಲಿ 295. ಬಂಗಾಳ: 146 ಓವರ್‌ಗಳಲ್ಲಿ 6ಕ್ಕೆ418 (ಸುದೀಪ್ ಕುಮಾರ್ ಘರಾಮಿ 216, ಸುಮಂತ್ ಗುಪ್ತಾ 81, ಶಾಕೀರ್ ಗಾಂಧಿ ಬ್ಯಾಟಿಂಗ್ 45, ಕೆ.ವಿ. ಶಶಿಕಾಂತ್ 59ಕ್ಕೆ2, ಸೌರಭ್ ಕುಮಾರ್ 81ಕ್ಕೆ2)

ಇಂದೋರ್: ಮೊದಲ ಇನಿಂಗ್ಸ್: ಜಮ್ಮು–ಕಾಶ್ಮೀರ: 67 ಓವರ್‌ಗಳಲ್ಲಿ 194. ಮಧ್ಯಪ್ರದೇಶ: 53.4 ಓವರ್‌ಗಳಲ್ಲಿ 152. ಎರಡನೇ ಇನಿಂಗ್ಸ್: ಜಮ್ಮು–ಕಾಶ್ಮೀರ್ 70.3 ಓವರ್‌ಗಳಲ್ಲಿ 248 (ಅಬಿದ್ ಮುಷ್ತಾಕ್ 41, ವಂಶಜ್ ಶರ್ಮಾ ಔಟಾಗದೇ 54, ಕುಲದೀಪ್ ಸೇನ್ 65ಕ್ಕೆ4, ವೆಂಕಟೇಶ್ ಅಯ್ಯರ್ 23ಕ್ಕೆ3, ರಣವೀರ್ ಗುಜ್ಜರ್ 66ಕ್ಕೆ3) ಮಧ್ಯಪ್ರದೇಶ ಗೆಲುವಿಗೆ ಇನ್ನೂ 204 ರನ್ ಅಗತ್ಯ.